ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 31 | ಜುಲೈ 26–ಆಗಸ್ಟ್ 01, 2021 | ಪುಟ 16 | ರೂ.10/-

https://janashakthi.wordpress.com e-mail : js_weekly@gmail.com





ಪೆಗಾಸಸ್: ಸರ್ವಾಧಿಕಾರಶಾಹಿಯ ಸೈಬರ್ ಆಯುಧ



ಕೃಷಿ ಕಾಯ್ದೆಗಳ ವಾಪಸಾತಿಗೆ ಪಾದಯಾತ್ರೆ ಆರಂಭ



ಮಠಾಧೀಶರು ದಿಕ್ಕು ತಪ್ಪಿಸುತ್ತಿದ್ದಾರೆ!



ಏಕೀ ಸಹಕಾರೀ ಸಚಿವಾಲಯ? ಅದೂ ಗೃಹ ಮಂತ್ರಿಗಳಿಗೇ?



ಸಂಸದ್ ಮಾರ್ಗದಲ್ಲಿ 'ಕಿಸಾನ್ ಸಂಸದ್' ಆರಂಭ

ಜುಲೈ25 – ಆಗಸ್ಟ್ 9: "ಭಾರತ ಉಳಿಸಿ" ಪ್ರಚಾರಾಂದೋಲನ

ಭಾರತೀಯರ ಮೇಲೆ ಕಾನೂನುಬಾಹಿರ ಬೇಹುಗಾರಿಕೆಗೆ ಅಧಿಕಾರ ಕೊಟ್ಟವರಾರು?: ಬಿಜೆಪಿ ಸರಕಾರ ಉತ್ತರಿಸಲೇ ಬೇಕಾಗಿದೆ

ಭಾರತ ಸರಕಾರ ಸೈಬರ್ ಬೇಹುಗಾರಿಕೆಯಲ್ಲಿ ಜಾಗತಿಕ ನಾಯಕನಾಗಿರುವ ಇಸ್ರೇಲಿ ಕಂಪನಿ ಎನ್.ಎಸ್.ಒ. ದಿಂದ ಪೆಗಸಸ್ ಬೇಹುಗಾರಿಕೆ ತಂತ್ರಾಂಶವನ್ನು ಖರೀದಿಸಿದೆ ಎಂಬ ಆತಂಕಕಾರಿ ಮಾಹಿತಿ ಹೊರಬಂದಿದೆ. ತಾನು "ಪರೀಕ್ಷಿಸಲ್ಪಟ್ಟ" ಸರಕಾರಗಳೊಡನೆ ಮಾತ್ರವೇ ವ್ಯವಹಾರ ನಡೆಸುವುದು ಎಂದು ಈ ಕಂಪನಿ ಖಚಿತವಾಗಿ ಸ್ಪಷ್ಟೀಕರಣ ನೀಡಿದೆ. ದೊಡ್ಡ ಸಂಖ್ಯೆಯಲ್ಲಿ ಪತ್ರಕರ್ತರು ಮತ್ತು ಮಾನವ ಹಕ್ಕು ಕಾರ್ಯಕರ್ತರ ಸ್ಮಾರ್ಟ್‌ಫೋನ್‌ಗಳನ್ನು ಬೇಧಿಸಲಿಕ್ಕಾಗಿ (ಹ್ಯಾಕ್ ಮಾಡಲಿಕ್ಕಾಗಿ) ಗುರಿಮಾಡಲಾಗಿದೆ ಎಂದು ತನಿಖೆಗಳಿಂದ ತಿಳಿದು ಬಂದಿದೆ. ಜಗತ್ತಿನಾದ್ಯಂತ ತಮ್ಮ ನಾಗರಿಕರ ಮೇಲೆ ಬೇಹುಗಾರಿಕೆಯಲ್ಲಿ ತೊಡಗಿರುವ ಮತ್ತು ಎನ್.ಎಸ್.ಒ..ದ ಗಿರಾಕಿಯಾಗಿರುವ ದೇಶಗಳಲ್ಲಿ 50,000ಕ್ಕೂ ಹೆಚ್ಚು ಉದಾಹರಣೆಗಳು ಬೆಳಕಿಗೆ ಬಂದಿವೆ. ರ್‍ವಾಂಡ, ಮೊರೊಕ್ಕೋ, ಸೌದಿ ಅರೇಬಿಯ, ಯುಎಇ, ಮೆಕ್ಸಿಕೊ ಮುಂತಾದ ದೇಶಗಳೊಂದಿಗೆ ಭಾರತದ ಹೆಸರನ್ನು ಕೂಡ ಉಲ್ಲೇಖಿಸಲಾಗಿದೆ ಎಂಬ ಮಾಹಿತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

"ಭಾರತದಲ್ಲಿ ನೂರಾರು ಪತ್ರಕರ್ತರು, ವಿವಿಧ ಚಳುವಳಿಗಳಲ್ಲಿ ತೊಡಗಿರುವವರು, ವಿಪಕ್ಷಗಳ ರಾಜಕಾರಣಿಗಳು, ಸರಕಾರೀ ಅಧಿಕಾರಿಗಳು ಮತ್ತು ವ್ಯವಹಾರ ನಿರ್ವಾಹಕರು ಮುಂತಾದವರಿಗೆ ಸೇರಿದ ಹಲವಾರು ಫೋನುಗಳು ಗೂಢಚಾರಿಕೆ ಪಟ್ಟಿಯಲ್ಲಿದ್ದವು" ಎಂದು ವರದಿ ಹೇಳುತ್ತದೆ. ಭಾರತೀಯ ಮಾಧ್ಯಮಗಳಲ್ಲಿನ ವರದಿಗಳು ಈ ಗೂಢಚಾರಿಕೆ ತಂತ್ರಾಂಶ ಪೆಗಸಸ್ ನ ಬೇಹುಗಾರಿಕೆಗೆ ಗುರಿಯಾದ ಕನಿಷ್ಟ 40 ಪತ್ರಕರ್ತರನ್ನು ಹೆಸರಿಸಿವೆ.

ಎರಡು ವರ್ಷಗಳ ಹಿಂದೆ, ಈ ಅಪಾಯಕಾರೀ ಬೇಹುಗಾರಿಕೆ ತಂತ್ರಾಂಶವನ್ನು ಭಾರತದಲ್ಲಿ ಬಳಸಲಾಗುತ್ತಿದೆ ಎಂದು ವಾಟ್ಸ್ ಆಪ್ ಹೊರಗೆಡಹಿದಾಗ, ಸಿಪಿಐ(ಎಂ) ಇದನ್ನು ಸಂಸತ್ತಿನಲ್ಲಿ ಎತ್ತಿತ್ತು. ಇದಕ್ಕೆ ಮೋದಿ ಸರಕಾರದ ಸ್ಪಂದನೆಯಲ್ಲಿ ಅದು ಎನ್.ಎಸ್.ಒ.ದ ಸೇವೆಗಳನ್ನು ತೆಗೆದುಕೊಂಡಿಲ್ಲ ಎಂದು ಖಡಾಖಂಡಿತವಾಗಿ ಹೇಳಲಿಲ್ಲ, ಆದರೆ, "ಅಧಿಕಾರ ಬಾಹಿರ ಬೇಹುಗಾರಿಕೆ" ನಡೆಸಿಲ್ಲ ಎಂದು ಹೇಳಿಕೊಂಡಿತು.

ಯಾವ ಕಾನೂನಿನ ಅಡಿಯಲ್ಲಿ ?

ಈಗ ಹೊರಬಂದ ಸಂಗತಿಗಳಿಂದ, ಈ ಸರಕಾರ ತನ್ನದೇ ನಾಗರಿಕರ ವಿರುದ್ಧ ಬೇಹುಗಾರಿಕೆಗೆ ಎನ್.ಎಸ್.ಒ. ವನ್ನು ತೊಡಗಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಎನ್.ಎಸ್.ಒ.ದೊಂದಿಗೆ ಹೇಗೆ ತೊಡಗಿಕೊಂಡಿದೆ, ಷರತ್ತುಗಳೇನು, ಇದಕ್ಕೆ ನಮ್ಮ ಎಷ್ಟು ಸಾರ್ವಜನಿಕ ನಿಧಿಯನ್ನು ತೆರಲಾಗಿದೆ ಎಂಬುದರ ಬಗ್ಗೆ ಕೇಂದ್ರ ಸರಕಾರ ಎಲ್ಲವನ್ನೂ ಸ್ಪಷ್ಟಪಡಿಸಬೇಕಾಗಿದೆ ಎಂದು ಪೊಲಿಟ್ ಬ್ಯುರೊ ಹೇಳಿದೆ.

ಸ್ಮಾರ್ಟ್‌ಫೋನ್‌ಗಳನ್ನು ಬೇಧಿಸಲು ಸೈಬರ್ ಬೇಹುಗಾರಿಕೆ ತಂತ್ರಾಂಶಗಳನ್ನು ಬಳಸುವುದನ್ನು ಕೂಡ ಭಾರತೀಯ ಕಾಯ್ದೆಗಳ ಅಡಿಯಲ್ಲಿ ನಿಷೇಧಿಸಲಾಗಿದೆ. ಯಾವ ಕಾನೂನಿನ ಅಡಿಯಲ್ಲಿ ಸರಕಾರ ನಾಗರಿಕರ ಮೇಲೆ ಇಂತಹ ಬೇಹುಗಾರಿಕೆ ಚಟುವಟಿಕೆಗಳನ್ನು ಕೈಗೊಂಡಿದೆ? ಸುಪ್ರಿಂ ಕೋರ್ಟ್ ವಿಧಿಸಿರುವಂತೆ, ಖಾಸಗಿತ್ವದ ಹಕ್ಕು ಒಂದು ಮೂಲಭೂತ ಹಕ್ಕು, ಆದರೆ ಈ ಬಿಜೆಪಿ ಸರಕಾರ ಖಾಸಗಿತ್ವ ಶಾಸನವನ್ನು ತರದೆ ನುಣುಚಿಕೊಳ್ಳುತ್ತಿದೆ.

"ಕನ್ನ ಹಾಕು, ನೆಡು, ಬಂಧಿಸು' ಸೂತ್ರ

ಇದಕ್ಕೆ ಮೊದಲು ಮಾನವ ಹಕ್ಕುಗಳ ಚಳುವಳಿಕಾರರ ಸ್ಮಾರ್ಟ್‌ಫೋನ್‌ಗಳನ್ನು ಮತ್ತು ಕಂಪ್ಯೂಟರುಗಳನ್ನು ಹ್ಯಾಕ್ ಮಾಡಿರುವ ಉದಾಹರಣೆಗಳು ಬಯಲಿಗೆ ಬಂದಿವೆ. ಕೆಲವು ಸಾಮಗ್ರಿಗಳನ್ನು ಅವರ ಸಾಧನಗಳಲ್ಲಿ ಡಿಜಿಟಲ್ ರೂಪದಲ್ಲಿ ಕಳ್ಳತನದಿಂದ ಹಾಕಲಾಯಿತು, ನಂತರ ಅವನ್ನು ಅವರುಗಳನ್ನು ಕರಾಳ ಕಾಯ್ದೆಗಳ ಅಡಿಯಲ್ಲಿ ಬಂಧಿಸಲು ಬಳಸಲಾಗಿದೆ.

ಫ್ಯಾಸಿಸ್ಟ್ ತೆರನ ವಿಧಾನಗಳನ್ನು ಬಳಸಿಕೊಳ್ಳುವ ಈ ಮಟ್ಟಗಳ ಸರ್ವಾಧಿಕಾರಶಾಹಿಯನ್ನು ಒಪ್ಪಲು ಖಂಡಿತ ಸಾಧ್ಯವಿಲ್ಲ. "ಕನ್ನ ಹಾಕು, ನೆಡು, ಬಂಧಿಸು' ಎಂಬ ಈ ಬಿಜೆಪಿ ಸರಕಾರ ಬಳಸುವ ಸೂತ್ರ ಭಾರತೀಯ ನಾಗರಿಕರ ಮೂಲಭೂತ ಹಕ್ಕುಗಳ ಒಂದು ಉಲ್ಲಂಘನೆಯಾಗಿದೆ ಎಂದು ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಿಜೆಪಿ ಕೇಂದ್ರ ಸರಕಾರ ಪೆಗಗಸಿಸ್‌ಸೈಬರ್ ತಂತ್ರಾಂಶವನ್ನು ಭಾರತೀಯ ನಾಗರಿಕರ ಮೇಲೆ ಗೂಢಚಾರಿಕೆಗೆ ಒಂದು ಕಾನೂನುಬಾಹಿರ ಮತ್ತು ಅಧಿಕಾರಬಾಹಿರ ರೀತಿಯಲ್ಲಿ ಬಳಸುವ ವಿಷಯದಲ್ಲಿ ಉತ್ತರ ಕೊಡಬೇಕು ಮತ್ತು ಎಲ್ಲವನ್ನೂ ಸ್ಪಷ್ಟಗೊಳಿಸಬೇಕು ಎಂದು ಆಗ್ರಹಿಸಿದೆ.

2017 ರಿಂದ...



ಭಾರತದಲ್ಲಿ ಎನ್.ಎಸ್.ಒ. ದತ್ತಾಂಶ ಭಂಡಾರದಲ್ಲಿ ಭಾರತದ ನಂಬರುಗಳು ಕಾಣಲಾರಂಭಿಸಿದ್ದು 2017ರಲ್ಲಿ, ಮೋದಿಯವರು ಇಸ್ರೇಲಿ ಪ್ರಧಾನಿ ನೆತನ್ಯಾಹು ಜೊತೆ ಮೆಡಿಟರೇನಿಯನ್ ಸಮುದ್ರದಲ್ಲಿ ತಮ್ಮ ಪಾದಗಳನ್ನು ಅದ್ದುತ್ತಿದ್ದಾಗಲೇ ಎಂದು ಸೀತಾರಾಂ ಯೆಚುರಿ ಟ್ವೀಟ್ ಮಾಡಿದ್ದಾರೆ.

ಒಬ್ಬ ಮಾಜಿ ಚುನಾವಣಾ ಆಯುಕ್ತ, ಒಬ್ಬ ಪ್ರತಿಷ್ಠಿತ ವೈರಾಣುತಜ್ಞೆ, ಪತ್ರಕರ್ತರು, ವಿದ್ಯಾರ್ಥಿಗಳು, ಮಾನವ ಹಕ್ಕುಗಳ ಹೋರಾಟಗಾರರು, ವಿಪಕ್ಷಗಳ ಮುಖಂಡರು, ಬೌದ್ಧ ಭಿಕ್ಷುಗಳು ಇತ್ಯಾದಿ ಜನಗಳೆಲ್ಲ ಪ್ರಸಕ್ತ ಬಿಜೆಪಿ ಸರಕಾರಕ್ಕೆ ಶತ್ರುಗಳಾದರೇ ಎಂದು ಅವರು ಪ್ರಶ್ನಿಸಿದ್ದಾರೆ.

ಮೋದಿ ಲಾಯದ ಪ್ರಿಯ ಪ್ರತಿಕ್ರಿಯೆ "ಇದು ಅಂತರ್ರಾಷ್ಟ್ರೀಯ ಪಿತೂರಿ" ಎಂದು. ಕಲಮು 370ನ್ನು ರದ್ದು ಮಾಡಿದ್ದರ ವಿರುದ್ಧ ಮಾತಾಡಿದಾಗಲೂ ಇದನ್ನೇ ಹೇಳಿದ್ದರು, ಸಿಎಎ ವಿರುದ್ಧ ಶಾಂತಿಯುತ ಪ್ರತಿಭಟನೆಗಳ ವೇಳೆಯಲ್ಲೂ ಇದನ್ನೇ ಹೇಳಿದ್ದರು, ದಿಲ್ಲಿಯ ದುಷ್ಟ ಕೋಮುವಾದಿ ಹಿಂಸಾಚಾರ ಮತ್ತು ರೈತರ ಚಾರಿತ್ರಿಕ ಶಾಂತಿಯುತ ಹೋರಾಟಕ್ಕೂ ಅದನ್ನೇ ಹೇಳಿದ್ದರು.

ಮೋದಿ ಸರಕಾರ ಇಸ್ರೇಲಿ ಪೆಗಸಸ್‌ನೊಂದಿಗೆ ಯಾವ ರೀತಿಯಲ್ಲಿ ತೊಡಗಿಕೊಂಡಿದೆ ಎಂಬುದನ್ನು ಸ್ಪಷ್ಟಗೊಳಿಸಬೇಕಾಗಿದೆ, ಈ ಬಗ್ಗೆ ಒಂದು ಜಂಟಿ ಸಂಸದೀಯ ಸಮಿತಿಯಿಂದ ತನಿಖೆ ನಡೆಸಬೇಕು ಎಂದು ಯೆಚುರಿ ಆಗ್ರಹಿಸಿದ್ದಾರೆ.

ಸಂಸದ್ ಮಾರ್ಗದಲ್ಲಿ ಕಿಸಾನ್ ಸಂಸದ್ ಆರಂಭ

ನವಂಬರ್ 26 ರಿಂದ ದಿಲ್ಲಿಯ ಗಡಿಗಳಲ್ಲಿ ಹೋರಾಟ ನಡೆಸುತ್ತಿರುವ ರೈತರ ಹೋರಾಟ ಜುಲೈ 22ರಿಂದ ಹೊಸದೊಂದು ಘಟ್ಟ ಆರಂಭವಾಗಿದೆ, ಸಂಸದ್ ಭವನದಿಂದ ಒಂದು ಕಿ.ಮೀ. ದೂರದಲ್ಲಿ ಜಂತರ್‌ಮಂತರ್‌ನಲ್ಲಿ ಕಿಸಾನ್ ಸಂಸದ್ ಆರಂಭವಾಗಿದೆ. 200 ರೈತ ಮುಖಂಡರ ಒಂದು ಗುಂಪು ಮುಂಜಾನೆ 8.30ಕ್ಕೆ ಸಿಂಘು ಗಡಿಯಿಂದ 5 ಬಸ್‌ಗಳಲ್ಲಿ ಜಂತರ್ ಮಂತರ್ ತಲುಪಿದರು.


ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲರನ್ನು ಮೊದಲ ದಿನ ಸಭಾಧ್ಯಕ್ಷರನ್ನಾಗಿ, ಮಂಜೀತ್ ಸಿಂಗ್ ಅವರನ್ನು ಉಪಸಭಾಧ್ಯಕ್ಷರನ್ನಾಗಿ ಆರಿಸಲಾಯಿತು.

"ರೈತರು ಅಶಿಕ್ಷಿತರು ಎಂದು ಸರಕಾರ ಹೇಳುತ್ತಿದೆ. ಅವರಿಗೆ ಈ ಮೂರು ಕಾಯ್ದೆಗಳ ಬಗ್ಗೆ ಶಿಕ್ಷಣ ನೀಡಬೇಕಾಗಿದೆ ಎನ್ನುತ್ತಿದೆ. ಇಲ್ಲಿ ನಡೆಯುತ್ತಿರುವ ಚರ್ಚೆಗಳಿಗೆ ಕಿವಿಗೊಡಿ. ಈ ಕಾಯ್ದೆಗಳಿಂದ ತಮ್ಮ ಜೀವನ ಮತ್ತು ಜೀವನೋಪಾಯ ಗಳಿಗೆ ಎಂತಹ ತೊಂದರೆ ಯಾಗುತ್ತದೆ ಎಂಬುದನ್ನು ಅವರು ಅರ್ಥ ಮಾಡಿಕೊಂಡಿದ್ದಾರೆ ಎಂದು ಸ್ಪಷ್ಟವಾಗುವದಿಲ್ಲವೇ? ಸಂಸತ್ ಅಧಿವೇಶನವನ್ನು ಹೇಗೆ ನಡೆಸಬೇಕು ಎಂದು ನಾವು ಅವರಿಗೆ ತೋರಿಸಕೊಡುತ್ತಿದ್ದೇವೆ" ಎಂದು ಹನ್ನನ್ ಮೊಲ್ಲ ಹೇಳಿದರು. ರಾಜಾರಾಂ ಸಿಂಗ್, ರಾಕೇಶ್ ಟಿಕಾಯಿತ್, ಯೋಗೇಂದ್ರ ಯಾದವ್, ಇಂದರ್‌ಜಿತ್‌ಸಿಂಗ್ ಫೌಜಿ ಮತ್ತು ಇತರ ಮುಖಂಡರೂ ಮಾತಾಡಿದರು.

ಸಂಸತ್ತಿನ ಮಳೆಗಾಲದ ಅಧಿವೇಶನ ಮುಗಿಯುವ ವರೆಗೆ ಪ್ರತಿದಿನ 200 ರೈತರು ಈ ಸಂಸತ್ತಿನಲ್ಲಿ ಭಾಗವಹಿಸಲಿದ್ದಾರೆ.



ಸಂಸದ್ ಭವನದ ಮುಂದೆ ಗಾಂಧೀಜಿ ಪ್ರತಿಮೆಯ ಎದುರು ಮತಪ್ರದರ್ಶನ ನಡೆಸಿದ ಎಡಪಕ್ಷಗಳು, ಡಿಎಂಕೆ ಮತ್ತು ಆರ್‌ಜೆಡಿ ಸಂಸದ್ ಸದಸ್ಯರು ಹೋರಾಟ ನಿರತ ರೈತರು ಮತ್ತು ಕಿಸಾನ್ ಸಂಸದ್‌ಗೆ ಬೆಂಬಲ ಸೂಚಿಸಿದರು.





ಸಂಪಾದಕೀಯ

ಮಠಾಧೀಶರು ದಿಕ್ಕು ತಪ್ಪಿಸುತ್ತಿದ್ದಾರೆ!

ಕಳೆದ ಒಂದು ವಾರದಿಂದ ನಾಡಿನ ಖ್ಯಾತ ಮಠಾಧೀಶರು ಗುಂಪು ಗುಂಪಾಗಿ ಅಥವ ಒಬ್ಬೊಬ್ಬರಾಗಿ ಮುಖ್ಯ ಮಂತ್ರಿ ಯಡಿಯೂರಪ್ಪರವರ ನಿವಾಸ ಕಾವೇರಿಗೆ ತೆರಳಿ ಯಡಿಯೂರಪ್ಪರವರನ್ನೇ ಮುಖ್ಯ ಮಂತ್ರಿಯಾಗಿ ಮುಂದುವರಿಸಬೇಕು, ಅವರನ್ನು ಪದಚ್ಯುತಗೊಸಿಳಿದರೆ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿ ಯಡಿಯೂರಪ್ಪರವರಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಯಡಿಯೂರಪ್ಪರವರನ್ನು ಬೆಂಬಲಿಸಲು ಬಂದಿದ್ದ ಮಠಾಧೀಶರಲ್ಲಿ ಕೆಲವರಿಗೆ ಯಡಿಯೂರಪ್ಪರವರ ಸಮ್ಮುಖದಲ್ಲೇ ಮುಚ್ಚಿದ ಲಕೋಟೆಗಳನ್ನು ಹಂಚಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತಿತ್ತು ಎನ್ನಲಾಗಿದೆ. ಹಂಚಿದ ಆ ಲಕೋಟೆಗಳಲ್ಲಿ ಏನಿತ್ತು ಎಂಬ ಬಗ್ಗೆ ಹಲವು ಬಗೆಯ ಊಹೆಗಳು ಹುಟ್ಟಿಕೊಂಡಿವೆ. ಮಠಾಧೀಶರಿಗೆ ಹಂಚಿದ ಲಕೋಟೆಗಳಲ್ಲಿ ಹಣವನ್ನು ಹಂಚಲಾಗಿದೆ ಎಂದು ಜನ ಮಾತನಾಡುತ್ತಿದ್ದಾರೆ. ಮಠಾಧೀಶರಿಗೆ ಯಡಿಯೂರಪ್ಪ ಹಣ ಹಂಚುವುದು ಗುಟ್ಟಿನ ವಿಷಯವೇನಲ್ಲ. ಬಜೆಟ್‌ನಲ್ಲೇ ಸಾರ್ವಜನಿಕ ಹಣವನ್ನು ಮಠಗಳಿಗೆ ನೀಡುತ್ತಾ ಬಂದಿರುತ್ತಾರೆ. ಆದರೆ ಯಡಿಯೂರಪ್ಪರವರನ್ನು ಬೆಂಬಲಿಸಲು ಮಠಾಧೀಶರು ಹಣ ಪಡೆಯುವುದು ಎಷ್ಟು ಸೂಕ್ತ?

ಮಠಾಧೀಶರು ಇಷ್ಟೊಂದು ಕೀಳುಮಟ್ಟಕ್ಕೆ ಇಳಿದಿರುವುದು ನಂಬಲಾಗುತ್ತಿಲ್ಲ. ಇದು ನಿಜವೇ ಆಗಿದ್ದರೆ ಈ ಮಠಾಧೀಶರು ತಮ್ಮ ಭಕ್ತರ ಹಾಗೂ ನಾಡಿನ ಸಮಸ್ತ ಜನಗಳ ದಿಕ್ಕುತಪ್ಪಿಸುತ್ತಿದ್ದಾರೆ ಎಂದು ಹೇಳಲೇ ಬೇಕಾಗುತ್ತದೆ. ಭ್ರಷ್ಟ ರಾಜಕಾರಣಿಗಳು ಚುನಾವಣೆಗಳಲ್ಲಿ ಜನಬೆಂಬಲ ಪಡೆಯಲು ಮತದಾರರಿಗೆ ಹಣ ಹಂಚುವುದಕ್ಕೂ ಯಡಿಯೂರಪ್ಪರವರು ಮಠಾಧೀಶರ ಬೆಂಬಲ ಪಡೆಯಲು ಅವರಿಗೆ ಲಕೋಟೆಗಳನ್ನು ವಿತರಿಸುವುದಕ್ಕೂ ಎಲ್ಲಿದೆ ವ್ಯತ್ಯಾಸ? ಮತದಾರರು ತಮ್ಮ ಮತಗಳನ್ನು ನೀಡಲು ಹಣ ಪಡೆಯುವುದು ತಪ್ಪು ಎಂದು ಹೇಳಬೇಕಾದ, ಜನರನ್ನು ಎಚ್ಚರಿಸಬೇಕಾದ ಮಠಾಧೀಶರು ಸ್ವತಃ ಯಡಿಯೂರಪ್ಪರವರಿಗೆ ಬೆಂಬಲ ನೀಡಲು ಹಣ ಪಡೆದದ್ದು ನಿಜವೇ ಆಗಿದ್ದರೆ ಅವರು ಸಮಾಜಕ್ಕೆ ಕೊಡುವ ಸಂದೇಶವಾದರೂ ಏನು? ದುಡ್ಡಿಗಾಗಿ ತಮ್ಮ ಮತಗಳನ್ನು ಮಾರಿಕೊಳ್ಳುವವರಿಗೂ ದುಡ್ಡಿಗಾಗಿ ತಮ್ಮ ಬೆಂಬಲವನ್ನು ಮಾರಿಕೊಳ್ಳುವ ಮಠಾಧೀಶರಿಗೂ ಎಲ್ಲಿದೆ ವ್ಯತ್ಯಾಸ?

ಒಂದು ರಾಜ್ಯದ ಮುಖ್ಯ ಮಂತ್ರಿಯಾರಾಗಿರಬೇಕು ಎಂದು ನಿರ್ಧರಿಸುವುದು ಮಠಾಧೀಶರ ಕೆಲಸವಲ್ಲ. ಅದು ಮತದಾರರಿಂದ ಆಯ್ಕೆಯಾದ ಶಾಸಕರು ನಿರ್ಧರಿಸಬೇಕಾದ ಸಂಗತಿ. ಇದು ರಾಜಕೀಯ ಪಕ್ಷವೊಂದರ ಆಂತರಿಕ ವಿಷಯ. ಮಠಾಧೀಶರು ಈ ವಿಷಯದಲ್ಲಿ ಹಸ್ತಕ್ಷೇಪ ಮಾಡಬಾರದು. ಒಂದು ರಾಜ್ಯದ ಮುಖ್ಯಮಂತ್ರಿಯನ್ನು ಬದಲಿಸಲು ನಿರ್ಧರಿಸಿದರೆ ಅದರಲ್ಲಿ ಮಠಾಧೀಶರು ಮೂಗು ತೂರಿಸಬಾರದು. ಹಾಗೆ ಮಾಡುವುದು ಅವರಿಗೂ ಅವರು ಪ್ರತಿನಿಧಿಸುವ ಮಠಗಳಿಗೂ ಶೋಭೆತರುವ ಕೆಲಸವಾಗದು.

ಯಡಿಯೂರಪ್ಪರವರನ್ನು ಪದಚ್ಯುತಗೊಳಿಸಿದರೆ ಭಾರೀ ಬೆಲೆ ತೆರಬೇಕಾಗುತ್ತದೆ ಎಂದು ಕೆಲವು ಮಠಾಧೀಶರು ಬಿಜೆಪಿ ವರಿಷ್ಠರಿಗೆ ಎಚ್ಚರಿಕೆ ನೀಡಿದ್ದಾರೆ. ಅವಧಿಗೂ ಮುನ್ನ ಯಡಿಯೂರಪ್ಪರವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಪಕ್ಷಕ್ಕೆ ನಷ್ಟವಾಗುದಾಗಿಯೂ, ರಾಜ್ಯದಲ್ಲಿ ಬಿಜೆಪಿ ಸರ್ವನಾಶವಾಗುವುದಾಗಿಯೂ ಎಚ್ಚರಿಸಿದ್ದಾರೆ. ಅವಧಿ ಪೂರ್ಣಗೊಳಿಸುವ ಮೊದಲೇ ಮುಖ್ಯ ಮಂತ್ರಿಗಳ ಬದಲಾವಣೆ ಕರ್ನಾಟಕಕ್ಕೆ ಹೊಸದೇನಲ್ಲ. ಅದರೆ ಮಠಾಧೀಶರು ಈ ರೀತಿ ಗುಂಪು ಕಟ್ಟಿಕೊಂಡು ರಾಜಕಾರಣಕ್ಕೆ ಇಳಿದಿರುವುದು ಹಿಂದೆಂದೂ ಸಂಭವಿಸಿರಲಿಲ್ಲ. ಇದು ಹೊಸ ಬೆಳವಣಿಗೆ. ಅಷ್ಟೇ ಅಪಾಯಕಾರಿ ಬೆಳವಣಿಗೆ. ಈ ಪ್ರಕ್ರಿಯೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿರುವವರು ವೀರಶೈವ ಲಿಂಗಾಯತ ಮಠಾಧೀಶರು. ಅವರನ್ನು ಹಿಂಬಾಲಿಸುತ್ತಿರುವವರು ತಳವರ್ಗಕ್ಕೆ ಸೇರಿದ ಸಮುದಾಯಗಳ ಮಠಾಧೀಶರು. ಇವರಲ್ಲಿ ಕೆಲವರು ಪ್ರಗತಿಪರರು, ಎಂದು ಹೇಳಿಕೊಳ್ಳುತ್ತಿದ್ದವರೂ ಸೇರಿರುವುದು ನಾಡಿನ ದುರಂತವೇ ಸರಿ.

ಮಠಾಧೀಶರು ಸರ್ವ ಸಂಘ ಪರಿತ್ಯಾಗಿಗಳೆಂದೇ ಜನರ ವಿಶ್ವಾಸವನ್ನು ಗಳಿಸಿದವರು. ಸಮಾಜಕ್ಕೆ ನೈತಿಕ ಮಾದರಿಗಳನ್ನು ಅವರು ಒದಗಿಸಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಮಠಾಧೀಶರು ರಾಜಕಾರಣಿಗಳಂತೆ ವರ್ತಿಸುವ ಉದಾಹರಣೆಗಳು ಹೆಚ್ಚಾಗಿವೆ. ಜಾತಿ ರಾಜಕಾರಣವನ್ನು ಬಲಪಡಿಸಲು ಇವರೇ ಕಾರಣರಾಗುತ್ತಿದ್ದಾರೆ. ತಮ್ಮ ಮಠದ ಭಕ್ತರೆಂದುಕೊಳ್ಳುವ ರಾಜಕಾರಣಿಗಳು ಜನತೆಗೆ ದ್ರೋಹ ಮಾಡುತ್ತಿರುವಾಗ ಅವರನ್ನು ತಿದ್ದುವ, ಅವರಿಗೆ ಬುದ್ದಿಹೇಳುವ ಸಾಮರ್ಥ್ಯವನ್ನೇ ಅವರು ಕಳೆದುಕೊಂಡಿದ್ದಾರೆ. ಹೀಗಾಗಿ ಮಠಾಧೀಶರು ಸಮಾಜದಲ್ಲಿ ಗೌರವವನ್ನು ಕಳೆದುಕೊಳ್ಳುತ್ತಿದ್ದಾರೆ. ತಮ್ಮ ಜಾತಿಯವರೇ ಮುಖ್ಯ ಮಂತ್ರಿ ಆಗಿರಬೇಕು ಎಂದು ಒತ್ತಾಯಿಸುವ ಈ ಮಠಾಧೀಶರು ಸಮಾಜವನ್ನು ಒಂದುಗೂಡಿಸುವ ಬದಲು ಛಿದ್ರಗೊಳಿಸುತ್ತಿದ್ದಾರೆ. ಸಮಾಜದಲ್ಲಿನ ಒಡಕುಗಳನ್ನು ಮತ್ತಷ್ಟು ಆಳಗೊಳಿಸುತ್ತಿದ್ದಾರೆ. ಸಮತಾವಾದಿ ಬಸವಣ್ಣರವರ ಆದರ್ಶಗಳಿಗೆ ಕಳಂಕಪ್ರಾಯರಾಗುತ್ತಿದ್ದಾರೆ.

ಯಡಿಯೂರಪ್ಪರವರು ಸಹ ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಕೆಳಗಿಳಿಯಲು ಸಿದ್ಧರಾಗಿರುವಂತೆ ಕಾಣುತ್ತದೆ. ಮಠಾಧೀಶರ ಬೆಂಬಲ ಒಂದು ನಾಟಕ ಮಾತ್ರ. ಬಿಜೆಪಿ ವರಿಷ್ಠರು ತಮ್ಮದೇ ಆದ ಲೆಕ್ಕಚಾರದಲ್ಲಿ ಯಡಿಯೂರಪ್ಪರವರನ್ನು ಮುಖ್ಯ ಮಂತ್ರಿ ಸ್ಥಾನದಿಂದ ಕೆಳಗಿಳಿಸಲು ನಿರ್ಧರಿಸಿದಂತೆ ಕಾಣುತ್ತದೆ. ಹಾಗೆ ಮಾಡುವುದೇ ಆದಲ್ಲಿ ಅದರಿಂದ ಪಕ್ಷಕ್ಕೆ ಹಾನಿ ಆಗಬಾರದೆಂಬುದು ಅವರ ಕಾರ್ಯತಂತ್ರವಾಗಿದೆ. ಯಡಿಯೂರಪ್ಪ ರವರು ಸಹ ಲೆಕ್ಕಾಚಾರದಲ್ಲಿ ತೊಡಗಿದಂತೆ ಕಾಣುತ್ತದೆ. ತಾನು ಮುಖ್ಯ ಮಂತ್ರಿ ಸ್ಥಾನದಲ್ಲಿ ಇರುವಾಗಲೇ ತನ್ನ ಇನ್ನೊಬ್ಬ ಮಗನಿಗೆ ರಾಜ್ಯದಲ್ಲಿ ಸೂಕ್ತ ಗಾದಿಯನ್ನು ಖಚಿತ ಪಡಿಸದೆ ಯಡಿಯೂರಪ್ಪ ನಿರ್ಗಮಿಸಲಾರರು. ಈಗಾಗಲೇ ಒಬ್ಬ ಮಗ ಸಂಸತ್ ಸದಸ್ಯರಾಗಿದ್ದಾರೆ. ಹಾನಗಲ್ ಮತಕ್ಷೇತ್ರದಲ್ಲಿ ನಡೆಯಲಿರುವ ಉಪಚುನಾವಣೆಯಲ್ಲಿ ಯಡಿಯೂರಪ್ಪ ತನ್ನ ಮಗನನ್ನು ನಿಲ್ಲಿಸಿ ಗೆಲ್ಲಿಸುವ ಲೆಕ್ಕಾಚಾರ ನಡೆಸಿದ್ದಾರೆ ಎಂದು ಹೇಳಲಾಗುತ್ತಿದೆ. ಏನಾದರೂ ಮಾಡಿ ತನ್ನ ಮಕ್ಕಳ ಭವಿಷ್ಯವನ್ನು ಖಚಿತಪಡಿಸದೆ ಯಡಿಯೂರಪ್ಪ ಕೆಳಗಿಳಿಯಲಾರರು. ಗುಪ್ತವಾದ ಈ ನಾಟಕದಲ್ಲಿ ಮಠಾಧೀಶರಿಗೆ ಒಂದು ಪಾತ್ರ ದೊರಕಿಸಲಾಗಿದೆ. ಮುಂದೇನು ಎಂಬುದು ಕೆಲವೇ ದಿನಗಳಲ್ಲಿ ಬಹಿರಂಗಗೊಳ್ಳಬಹುದು. ಬಿಜೆಪಿಯೊಳಗೆ ವಂಶ ಪರಂಪರೆಯ ರಾಜಕಾರಣವನ್ನು ಬಲಪಡಿಸಲು ಶ್ರಮಿಸುತ್ತಿರುವ ಯಡಿಯೂರಪ್ಪರವರ ಬಣ್ಣ ಶೀಘ್ರದಲ್ಲೇ ಬಯಲಾಗಲಿದೆ.

ಕಾವೇರಿ ಜಲಾಶಯಕ್ಕೆ ಧಕ್ಕೆ ತರುವ ಗಣಿಗಾರಿಕೆಯನ್ನು ಈ ಕೂಡಲೇ ನಿಷೇಧಿಸಲು ಮತ್ತು ಅಕ್ರಮ ಗಣಿಗಾರಿಕೆಯ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಲು ಒತ್ತಾಯ

ದಕ್ಷಿಣ ಕರ್ನಾಟಕದ 6–7 ಜಿಲ್ಲೆಗಳ ಜಲಮೂಲವಾದ ಕಾವೇರಿ ಜಲಾಶಯವು, ಜಲಾಶಯದ ವ್ಯಾಪ್ತಿಯಲ್ಲಿನ ಅಕ್ರಮ ಗಣಿಗಾಣಿಕೆಯಿಂದ ಅಭದ್ರತೆಗೊಳಗಾಗುತ್ತಿರುವುದು ತೀವ್ರ ಆತಂಕಕಾರಿ ಬೆಳವಣಿಗೆಯಾಗಿದೆ.

ಜಲಾಶಯದ ಭದ್ರತೆಗೆ ಧಕ್ಕೆ ಉಂಟುಮಾಡುತ್ತಿರುವ ಎಲ್ಲಾ ರೀತಿಯ ಗಣಿಗಾರಿಕೆಯನ್ನು ಈ ಕೂಡಲೇ ನಿಲ್ಲಿಸುವಂತೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸವಾದಿ) ಕರ್ನಾಟಕ ರಾಜ್ಯ ಸಮಿತಿಯು, ರಾಜ್ಯ ಸರಕಾರವನ್ನು ಬಲವಾಗಿ ಒತ್ತಾಯಿಸಿದೆ.

ಸದರಿ ಜಲಾಶಯಕ್ಕೆ ಅದರಿಂದ ಅಪಾಯವಿದೆಯೆಂದು ತಜ್ಞರ ಸಮಿತಿಗಳು ಹೇಳಿದಾಗಲೂ ಸರಕಾರದ ಶಾಮೀಲಾತಿಯೊಂದಿಗೆ ಅಕ್ರಮ ಚಟುವಟಿಕೆ ಮುಂದುವರೆದಿರುವುದು ಅಕ್ಷಮ್ಯವಾಗಿದೆ.

ಇದು ಸರಕಾರಗಳಿಗೆ ಜನತೆಯ ಹಾಗೂ ರಾಜ್ಯದ ಬಗೆಗೆ ಇರುವ ಖಾಳಜಿಯ ಕೊರತೆಯನ್ನು ಎತ್ತಿ ತೋರುತ್ತದೆ.

ಕಾವೇರಿ ಜಲಾಶಯವು ದಕ್ಷಿಣ ಕರ್ನಾಟಕದ ಬಹುತೇಕ ಜಿಲ್ಲೆಗಳ ಜಲ ಮೂಲವಾಗಿದೆ. ದಶ ಲಕ್ಷಾಂತರ ರೈತ ಕುಟುಂಬಗಳ ಜೀವನಾಧಾರವಾಗಿದೆ. ಬೆಂಗಳೂರು, ಮೈಸೂರು ನಗರಗಳು ಸೇರಿದಂತೆ ಸುಮಾರು ಎರಡು ಕೋಟಿಗೂ ಅಧಿಕ ಜನರು ಇದರ ಹಲವು ವಿಧದ ಫಲಾನುಭವಿಗಳಾಗಿದ್ದಾರೆ.



ಜಲಾಶಯದ ವ್ಯಾಪ್ತಿಯಲ್ಲಿ ಗಣಿಗಾರಿಕೆಯು ಕಾನೂನಾತ್ಮಕವಾಗಿ ನಿಷೇಧಿಸಲ್ಪಟ್ಟಿದ್ದರೂ, ಅಕ್ರಮವಾಗಿ, ಸರಕಾರದ ಕೃಪಾಕಟಾಕ್ಷದಿಂದ, ಅವ್ಯಾಹತವಾಗಿ ಮುಂದುವರೆದಿದೆ. ಒಂದು ನೂರು ಕಂಪನಿಗಳಿಗೆ ಪರವಾನಿಗಿ ನೀಡಲಾಗಿದ್ದರೂ

ಸಾವಿರಾರು ಅಕ್ರಮ ಗಣಿಗಾರಿಕೆಗಳು ನಡೆಯುತ್ತಿವೆ. ಇವುಗಳಲ್ಲಿ ಬಹುತೇಕವುಗಳಿಗೆ ಪರವಾನಿಗಿ ಇಲ್ಲಾ! ದಂಡ ವಿಧಿಸಲಾಗಿದೆ. ಆದಾಗಲೂ ಅವು ನಡೆಯುತ್ತಲೇ ಇವೆ. ಇದು ಹೇಗೆ ಸಾಧ್ಯ? ಮುಖ್ಯಮಂತ್ರಿಗಳು, ಈ ಕುರಿತು ಬಹಿರಂಗವಾಗಿ ಸ್ಪಷ್ಟೀಕರಣ ನೀಡಬೇಕೆಂದು ಸಿಪಿಐಎಂ ಒತ್ತಾಯಿಸಿದೆ.

ಸರಕಾರದ ಕೆಲ ಪ್ರಭಾವಿ ಅಧಿಕಾರವಲಯದವರು, ವಿರೋದ ಪಕ್ಷಗಳ ಕೆಲವರ ಕೈವಾಡಗಳಿವೆಯೆಂಬ ಆರೋಪಗಳಿವೆ. ಸಾವಿರಾರು ಕೋಟಿ ರೂಗಳ ಭಾರೀ ಹಗರಣಗಳಿವೆಯೆನ್ನಲಾಗಿದೆ.

ಆದ್ದರಿಂದ ಈ ಕೂಡಲೇ ಈ ಅಕ್ರಮ ಗಣಿಗಾರಿಕೆಯನ್ನು ಪೂರ್ಣವಾಗಿ ನಿಲ್ಲಿಸಬೇಕು. ಸದರಿ ಅಕ್ರಮ ಗಣಿಗಾರಿಕೆಯನ್ನು ಲೋಕಾಯುಕ್ತ ತನಿಖೆಗೆ ವಹಿಸ ಬೇಕೆಂದು ಸಿಪಿಐಎಂ ಆಗ್ರಹಿಸಿದೆ.

ಪರವಾನಿಗಿ ಹೊಂದಿದ ಕಲ್ಲು ಗಣಿಗಳು ಕೂಡಾ, ಪರವಾನಿಗಿ ಮೀರಿ ಅಕ್ರಮವಾಗಿ, ಭಾರೀ ಬ್ಲಾಸ್ಟಿಂಗ್ ಗಳಿಗೆ ಮುಂದಾಗುತ್ತಿವೆ ಯೆನ್ನಲಾಗಿದೆ.

ಈ ಎಲ್ಲಾ ಭಾರೀ ಅಕ್ರಮ ಬ್ಲಾಸ್ಟಿಂಗ್ ಗಳಿಂದ ಸುತ್ತ–ಮುತ್ತಲ ಗ್ರಾಮಗಳ ಮನೆಗಳಲ್ಲಿ ಬಿರುಕುಗಳುಂಟಾಗಿ ನಾಗರೀರಕರ ವಸತಿಗೆ ಧಕ್ಕೆ ಉಂಟುಮಾಡಿವೆ. ಕೃಷಿ ಮತ್ತು ಕುಡಿಯುವ ನೀರಿಗಾಗಿ ಕೊರೆಸಲಾದ ಬೋರ್ ವೆಲ್ ಗಳು ಬತ್ತಿ ಹೋಗಿವೆ. 600–800 ಅಡಿ ಆಳಕ್ಕಿಳಿದರೂ ಜಲ ಮೂಲವಿಲ್ಲದಂತಾಗಿ ಪ್ರದೇಶ ಬರಡಾಗುವಂತಾಗಿದೆ.

ಇವುಗಳನ್ನು ನಿಲ್ಲಿಸುವ ಜೊತೆಗೆ ಅಲ್ಲಿಯ ಜನತೆಗುಂಟಾದ ನಷ್ಟವನ್ನು ಗಣತಿ ಮಾಡಿಸಿ, ಪರಿಹಾರವನ್ನು ಸರಕಾರವೇ ನೀಡಬೇಕೆಂದು ಸಿಪಿಐಎಂ ಒತ್ತಾಯಿಸಿದೆ.

ಮಾತ್ರವಲ್ಲಾ, ರಾಜ್ಯದ ಎಲ್ಲಾ ರೀತಿಯ ಗಣಿಗಾರಿಕೆಯನ್ನು ರಾಷ್ಟ್ರೀಕರಿಸಿ ಸಾರ್ವಜನಿಕ ರಂಗದ ಸಂಸ್ಥೆಗಳ ಮೂಲಕ ಮುನ್ನಡೆಸಲು ವಿನಂತಿಸಿದೆ.

ಶುಭಾಶಯಗಳು

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರೂ, ವಿಮಾ ನೌಕರರ ಸಂಘದ ಹಿರಿಯ ಮುಖಂಡರೂ ಆಗಿರುವ ಕಾಮ್ರೆಡ್ ಆರ್.ಎಚ್. ಆಯಿರವರ ಪುತ್ರ ಆದಿತ್ಯ ರವರು ಇದೇ ಜುಲೈ 18 ರಂದು ಸೀತಲ್ ಅವರೊಂದಿಗೆ ವಿವಾಹವಾಗಿದ್ದಾರೆ. ವಧುವರರಿಗೆ ಸಿಪಿಐ(ಎಂ) ರಾಜ್ಯ ಸಮಿತಿಯ ಹಾರ್ದಿಕ ಶುಭಾಶಯಗಳು. ಕಾಮ್ರೆಡ್ ಆಯಿಯವರು ತಮ್ಮ ಪುತ್ರನ ವಿವಾಹದ ಸವಿನೆನಪಿಗಾಗಿ ಪಕ್ಷಕ್ಕೆ ಎರಡು ಸಾವಿರ ರೂಪಾಯಿಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಅವರಿಗೆ ಪಕ್ಷದ ಅಭಿನಂದನೆಗಳು.



ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಹಾಸನದಲ್ಲಿ ಕೆಪಿಆರ್‌ಎಸ್ ಪ್ರತಿಭಟನೆ

ರಸಗೊಬ್ಬರ, ಬಿತ್ತನೆ ಬೀಜಗಳು, ಪೈಪುಗಳು ಸೇರಿದಂತೆ ಕೃಷಿ ಉಪಕರಣಗಳು ಹಾಗೂ ಡೀಸೆಲ್, ಪೆಟ್ರೋಲ್ ಮತ್ತು ಅಗತ್ಯ ವಸ್ತುಗಳ ಬೆಲೆಗಳ ಏರಿಕೆ, ಕಾಡುಪ್ರಾಣಿಗಳ ಹಾವಳಿ ಸೇರಿದಂತೆ ರೈತರ ಸ್ಥಳೀಯ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಹಾಸನದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಿದೆ.

ಕೊರೊನಾದಿಂದಾಗಿ ಕಳೆದ ಒಂದು ವರ್ಷದಿಂದ ಇಡೀ ಜಗತ್ತು ಸಂಕಷ್ಟದಲ್ಲಿರುವಾಗಲೇ ದೇಶಕ್ಕೆ ಅನ್ನ ನೀಡುವ ರೈತ ಹೆಚ್ಚು ಸಂಕಷ್ಟಕ್ಕೆ ಒಳಗಾಗಿದ್ದಾನೆ. ಒಂದೆಡೆ ಕೊರೋನಾ ಸೋಂಕಿನಿಂದ ತನ್ನನ್ನು, ತನ್ನ ಕುಟುಂಬವನ್ನು ರಕ್ಷಿಸಿಕೊಳ್ಳಲು ಸರಿಯಾದ ಆರೋಗ್ಯ ವ್ಯವಸ್ಥೆ ಸಿಗದೆ ಪರದಾಡುವು ಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ ಜೀವನಕ್ಕಾಗಿ ನಂಬಿದ್ದ ಕೃಷಿ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ಮತ್ತು ಬೆಲೆ ಸಿಗದೆ ಪರದಾಡುವಂತಾಗಿದೆ.

ಸರಿಯಾದ ಆರೋಗ್ಯ ವ್ಯವಸ್ಥೆ ಸಿಗದೆ ಪರಿತಪಿಸುತ್ತಿರುವ ರೈತರಿಗೆ ಗ್ರಾಮ ಪಂಚಾಯಿತಿಗಳು, ರೈತ ಸಂಪರ್ಕ ಕೇಂದ್ರಗಳು, ಕೃಷಿ ಇಲಾಖೆ, ತೋಟಗಾರಿಕಾ ಇಲಾಖೆ ಮತ್ತು ಪಶುಸಂಗೋಪನಾ ಇಲಾಖೆಗಳು ರೈತರಿಗೆ ಬೇಕಾದ ಅಗತ್ಯ ನೆರವನ್ನು ನೀಡದೇ ನಮಗೂ ರೈತರಿಗೂ ಯಾವ ಸಂಭಂದವೂ ಇಲ್ಲವೆಂಬಂತೆ ವರ್ತಿಸುತ್ತಿವೆ. ಮಾತ್ರವಲ್ಲದೆ ರೈತರಿಗೆ ತಲುಪಿಸಬೇಕಾದ ಯೋಜನೆಗಳನ್ನು ಸರಿಯಾದ ಫಲಾನುಭವಿಗಳಿಗೆ ತಲುಪಿಸದೇ ರೈತರಿಗೆ ದೊಡ್ಡ ಮಟ್ಟದ ಮೋಸ ಮಾಡಲಾಗುತ್ತಿದೆ. ಲಾಕ್ ಡೌನ್‌ನ ಸಂದರ್ಭದಲ್ಲಿ ರೈತರು ಬೆಳೆದ ತರಕಾರಿಗಳಿಗೆ ಜಿಲ್ಲಾಡಳಿತ ಸೂಕ್ತ ಮಾರುಕಟ್ಟೆ ವ್ಯವಸ್ಥೆಯನ್ನು ಕಲ್ಪಿಸದೇ ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತವಾದ ಬೆಲೆ ಸಿಗದಂತಾಯಿತು. ಮುಂಗಾರು ಪ್ರಾರಂಭವಾಗಿ ಬೆಳೆ ಬೆಳೆಯಲು ರೈತರು ಮುಂದಾದರೆ ಜಿಲ್ಲೆಯ ಎಲ್ಲೆಡೆಗಳಲ್ಲಿ ಆನೆ, ಹಂದಿ, ನವಿಲು, ಮಂಗ ಮುಂತಾದ ಕಾಡುಪ್ರಾಣಿಗಳ ಹಾವಳಿಯಿಂದ ಬೆಳೆ ನಷ್ಟಕ್ಕೊಳಗಾಗಿತ್ತಿದೆ.

ಪರಿಸ್ಥಿತಿ ಇಷ್ಟೊಂದು ಹದಗೆಟ್ಟಿರುವಾಗ ನಮ್ಮನ್ನಾಳುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಅನ್ನದಾತನ ಕೈಹಿಡಿಯುವ ಬದಲಾಗಿ ರೈತ ಸಮುದಾಯಕ್ಕೆ ಮತ್ತಷ್ಟು ಸಂಕಷ್ಟಗಳನ್ನು ತಂದೊಡ್ಡಿವೆ. ಒಂದು ಕಡೆ ಕೊರೊನಾ ಲಾಕ್‌ಡೌನ್ ಹೆಸರಲ್ಲಿ ಜನರನ್ನು ಮನೆಗಳಲ್ಲಿ ಕೂರಿಸಿ ರೈತರು ಕೃಷಿಗೆ ಉಪಯೋಗಿಸುವ ಬಿತ್ತನೆ ಬೀಜ, ರಸಗೊಬ್ಬರ, ಪ್ಲಾಸ್ಟಿಕ್ ಪೈಪುಗಳು, ಯಂತ್ರೋಪಕರಣಗಳು. ಡೀಸೆಲ್, ಪೆಟ್ರೋಲ್, ಅಡುಗೆ ಅನಿಲ (ಗ್ಯಾಸ್) ಇವುಗಳ ಜೊತೆಗೆ ಅಗತ್ಯ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸಿದ್ದಾರೆ. ಇದರಿಂದ ರೈತರು ಬೆಳೆವ ಬೆಳೆಗಳ ಉತ್ಪಾದನಾ ವೆಚ್ಚ ಹೆಚ್ಚಾಗಿದೆ. ಈ ದುಬಾರಿ ವೆಚ್ಚಗಳನ್ನು ಪೂರೈಸಲು ರೈತರು ಸಾಲಗಳ ಮೊರೆಹೋಗಬೇಕಾಗಿದೆ. ಎಲ್ಲರೀತಿಯ ಸಂಕಷ್ಟಗಳನ್ನೂ ಎದುರಿಸಿ, ಪ್ರಕೃತಿಯ ಸವಾಲುಗಳನ್ನು ಎದುರಿಸಿ ಕಷ್ಟಪಟ್ಟು ಬೆಳೆಯನ್ನು ಬೆಳೆದರೆ ಅದಕ್ಕೂ ಬೆಲೆ ಸಿಗದಂತಾಗಿದೆ.

ಸಂಕಷ್ಟದಲ್ಲಿರುವ ರೈತರ ಕೈಹಿಡಿದು ಲಾಕ್‌ಡೌನ್ ಅವಧಿಯಲ್ಲಿ ಜೀವನ ನಡೆಸಲು ಅಗತ್ಯವಿರುವ ರೇಷನ್ ಮತ್ತು ತಿಂಗಳಿಗೆ ಕನಿಷ್ಠ 10 ಸಾವಿರ ರೂ ನೇರ ನಗದು ವರ್ಗಾವಣೆ ಮಾಡಬೇಕಾಗಿದ್ದ ಮೋದಿ ಸರ್ಕಾರ ರೈತ ವಿರೋಧಿಯಾದ ಮೂರು ಕೃಷಿ ಕಾಯ್ದೆಗಳನ್ನು ಜಾರಿಕೆ ತರುವ ಮೂಲಕ ಭಾರತದ ರೈತಾಪಿ ಕೃಷಿಯನ್ನ ಕಾರ್ಪೋರೇಟ್ ಕಂಪನಿಗಳಿಗೆ ವರ್ಗಾಯಿಸುವ ಹುನ್ನಾರವನ್ನು ಮಾಡಲಾಗಿದೆ. ಇದರಿಂದಾಗಿ ಇನ್ನು ಮುಂದಿನ ದಿನಗಳಲ್ಲಿ ಬಡ, ಮದ್ಯಮ ರೈತರು ಕೃಷಿ ಮಾಡಲಾಗದೆ ಕೃಷಿಯನ್ನು ಬಿಟ್ಟು ನಗರಗಳಿಗೆ ಹೊಲಸೆ ಹೋಗಬೇಕಾಗುತ್ತದೆ. ಇಂತಹ ಕರಾಳ ಕೃಷಿ ಕಾಯ್ದೆಗಳ ರದ್ದತಿಗಾಗಿ ಕಳೆದ 6 ತಿಂಗಳುಗಳಿಂದ ದೆಹಲಿಯ ಗಡಿಭಾಗಗಳಲ್ಲಿ ನಿತಂತರವಾಗಿ ಐತಿಹಾಸಿಕ ಹೋರಾಟವನ್ನು ನಡೆಸುತ್ತಿರುವ ರೈತರನ್ನು ಕೇಂದ್ರ ಸರ್ಕಾರ ಇದುವರೆಗೂ ಗೌರವಯುತವಾಗಿ ನಡೆಸಿಕೊಂಡು ಮಾತುಕತೆ ಮಾಡಲಿಲ್ಲ.

ಇವುಗಳ ಜೊತೆಗೆ ರೈತರಿಂದ ಬೆಳೆ ವಿಮೆಯ ಹಣವನ್ನು ಕಟ್ಟಿಸಿಕೊಂಡಿದ್ದರೂ ಇದುವರೆಗೂ ರೈತರಿಗೆ ಬೆಳೆವಿಮೆಯ ಹಣ ವಾಪಸ್ ಬಂದಿಲ್ಲ. ಸ್ಥಳೀಯವಾಗಿ ಕೃಷಿ ಕೇಂದ್ರಗಳ ಮೂಲಕ ರೈತರಿಗೆ ನೀಡಬೇಕಾದ ಸೌಲತ್ತುಗಳನ್ನು ಸರಿಯಾದ ಫಲಾನುಭವಿಗಳನ್ನು ಗುರುತಿಸಿ ನೀಡದೇ ದೊಡ್ಡಮಟ್ಟದಲ್ಲಿ ಅವ್ಯವಹಾರಗಳನ್ನು ನಡೆಸಲಾಗುತ್ತಿದೆ.

ಈ ಎಲ್ಲಾ ಪ್ರಶ್ನೆಗಳ ಆಧಾರದ ಮೇಲೆ ರೈತರ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ, ರಾಜ್ಯ ಸರ್ಕಾರಗಳು ಕೂಡಲೇ ಗಮನಹರಿಸಬೇಕು ಮತ್ತು ಹಾಸನ ಜಿಲ್ಲೆಯ ಸ್ಥಳೀಯ ಬೇಡಿಕೆಗಳ ಕುರಿತು ಚರ್ಚಿಸಲು ಮಾನ್ಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ರೈತ ಸಂಘದ ಮುಖಂಡರುಗಳನ್ನು ಮತ್ತು ಸಂಬಂಧಿಸಿದ ಅಧಿಕಾರಿಗಳನ್ನು ಒಳಗೊಂಡ ಸಭೆಯೊಂದನ್ನು ಕರೆಯಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ 19 ಜುಲೈ 2021 ರಂದು ಹಾಸನದ ಜಿಲ್ಲಾಧಿಕಾರಿ ಕಛೇರಿ ಎದುರು ರೈತರ ಪ್ರತಿಭಟನೆ ನಡೆಸಿ ಮನವಿ ಪತ್ರವನ್ನು ಸಲ್ಲಿಸಿದೆ. ■

ಬೆಲೆ ಏರಿಕೆ ಖಂಡಿಸಿ ದ.ಕ. ಜಿಲ್ಲೆಯಲ್ಲಿ ಪ್ರತಿಭಟನೆ

ಗುರುಪುರ:

ಪೆಟ್ರೋಲ್, ಡೀಸಿಲ್, ಅಡುಗೆ ಅನಿಲ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಿಪಿಎಂ ಗುರುಪುರ ವಲಯ ಸಮಿತಿ ಜುಲೈ 20 ರಂದು ಗುರುಪುರ ಕೈಕಂಭ ಜಂಕ್ಷನ್‌ನಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸಿತು. ಸಿಪಿಎಂ ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ಚುನಾವಣೆ ವೇಳೆ ಕಪ್ಪು ಹಣ, ಬೆಲೆ ಏರಿಕೆ ನಿಯಂತ್ರಣ, ಬಡವರ ಕಾಳಜಿಯಂತಹ ಹತ್ತು ಹಲವಾರು ಆಶ್ವಾಸನೆ ನೀಡಿರುವ ಬಿಜೆಪಿಗರು ಅಧಿಕಾರಕ್ಕೆ ಬಂದ ಬಳಿಕ ಎಲ್ಲವನ್ನೂ ಮರೆತಿದ್ದಾರೆ ಎಂದು ಕೇಂದ್ರ ಮತ್ತು ರಾಜ್ಯ ಸರಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಿಪಿಎಂ ಗುರುಪುರ ವಲಯ ಸಮಿತಿ ಕಾರ್ಯದರ್ಶಿ ಸದಾಶಿವ ದಾಸ್ ಮಾತನಾಡಿ, ಮೋದಿ ನಿರ್ದೇಶನದಂತೆ ಬಿಜೆಪಿ ಸಾಧನೆ ಪಟ್ಟಿ ಜನರ ಬಳಿ ಕೊಂಡೊಯ್ಯುವ ಕಾರ್ಯಕರ್ತರು ಆ ಪಟ್ಟಿಯಲ್ಲಿ ಬೆಲೆ ಏರಿಕೆ ಸೇರಿಸಿಕೊಂಡಿದ್ದಾರೆಯೇ? ಮೋದಿಯವರು ಉದ್ಯಮಿಗಳು ಬಂಡವಾಳಶಾಹಿಗಳ ಪರ ಕೆಲಸ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಸಿಪಿಎಂ ಗುರುಪುರ ವಲಯ ಗಂಗಯ್ಯ ಅಮೀನ್, ನೋಣಯ್ಯ ಗೌಡ, ಡಿ.ಅಶೋಕ್, ಬಾಬು ಸಾಲ್ಯಾನ್, ಭವಾನಿ ವಾಮಂಜೂರು, ಪುಷ್ಪಾ ವಾಮಂಜೂರು, ವಸಂತಿ ಕುಪ್ಪೆಪದವು, ವಾರಿಜಾ ಕುಪ್ಪೆಪದವು,ಮನೋಜ್ ವಾಮಂಜೂರು ಮತ್ತಿತರರು ಭಾಗವಹಿಸಿದ್ದರು.

ಮೂಡಬಿದ್ರಿ:

ಸಿಪಿಐ(ಎಂ) ಪಕ್ಷದ ಮೂಡಬಿದ್ರಿ ವಲಯ ಸಮಿತಿ ನೇತೃತ್ವದಲ್ಲಿ ಮೂಡಬಿದ್ರೆ ಮಾರುಕಟ್ಟೆ, ಬಸ್ ನಿಲ್ದಾಣ, ತಾಲೂಕಿನ ಸಂಪಿಗೆ, ತೋಡಾರು ಜಂಕ್ಷನ್, ಬೆಳುವಾಯಿ ಮತ್ತು ಶಿರ್ತಾಡಿಗಳಲ್ಲಿ ತೈಲಬೆಲೆ, ಆಹಾರವಸ್ತುಗಳ ಬೆಲೆ ಏರಿಕೆಯನ್ನು ವಿರೋಧಿಸಿ ಜುಲೈ 16 ರಂದು ಪ್ರತಿಭಟನೆ ನಡೆಸಲಾಯಿತು.

ವರದಿ: ವಾ. ಉಚ್ಚಿಲ್

ಪ್ರತಿಭಟನೆಗಳನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಕೆ.ಯಾದವ ಶೆಟ್ಟಿ, ಮೂಡಬಿದರೆ ಸಿಪಿಐ(ಎಂ) ವಲಯ ಸಮಿತಿ ಕಾರ್‍ಯದರ್ಶಿ ರಮಣಿ ಮೂಡಬಿದರೆ ಮಾತನಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ವಲಯ ಸಮಿತಿ ಅಧ್ಯಕ್ಷ ಸುಂದರ ಶೆಟ್ಟಿ, ಸಿಐಟಿಯು ವಲಯ ಸಮಿತಿ ಮುಖಂಡರಾದ ರಾಧಾ, ಗಿರಿಜಾ, ಲಕ್ಷ್ಮಿ, ಕೃಷ್ಣಪ್ಪ ನಡಿಗುಡ್ಡೆ, ಸೀತಾರಾಮ ಶೆಟ್ಟಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಉಳ್ಳಾಲ:

ಉಳ್ಳಾಲ ವಲಯ ಸಿಪಿಎಂ ಪಕ್ಷದ ನೇತೃತ್ವದಲ್ಲಿ ಜುಲೈ 17 ರಂದು ತೊಕ್ಕೊಟ್ಟು ಜಂಕ್ಷನ್‌ನಲ್ಲಿ ತೈಲ ಬೆಲೆ, ಅಡುಗೆ ಅನಿಲ ಬೆಲೆ ಹಾಗೂ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಪ್ರತಿಭನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್‍ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು.

ಸಿಪಿಎಂ ಜಿಲ್ಲಾ ಸಮಿತಿ ಸದಸ್ಯರಾದ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್, ಸಿಪಿಎಂ ಉಳ್ಳಾಲ ವಲಯ ಸಮಿತಿ ಸದಸ್ಯರಾದ ವಿಲಾಸಿನಿ ತೊಕ್ಕೊಟ್ಟು, ಸುಂದರ ಕುಂಪಲ, ಜನಾರ್ಧನ ಕುತ್ತಾರ್, ಶೇಖರ ಕುಂದರ್, ನಾರಾಯಣ ತಲಪಾಡಿ, ಇಬ್ರಾಹಿಂ ಮದಕ ಮತ್ತಿತರರು ಭಾಗವಹಿಸಿದ್ದರು.

ಲಾಲ್ ಸಲಾಮ್ ಕಾಮ್ರೆಡ್ ನಬೀಸಾಬ್



ಗಂಗಾವತಿಯ ಹಿರಿಯ ಕಾರ್ಮಿಕ ಮುಖಂಡರು, ಸಿಪಿಐ(ಎಂ) ನ ಸಕ್ರೀಯ ಸದಸ್ಯರು ಆಗಿದ್ದ ಕಾಮ್ರೆಡ್ ನಬೀಸಾಬ್‌ರವರು ದಿನಾಂಕ 22–07–2021 ರಂದು ಹೃದಂಯಾಘಾತದಿಂದ ನಿಧನರಾಗಿದ್ದಾರೆ. ಅವರು ನಾಲ್ಕು ಗಂಡು ಮಕ್ಕಳನ್ನು ಮತ್ತು ಮೂವರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಅವರು 1987 ರಿಂದ ವೇರ್ ಹೌಸ್ ಹಮಾಲಿ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಗಂಗಾವತಿ ತಾಲೂಕಿನಲ್ಲಿ ಹಮಾಲಿ ಕಾರ್ಮಿಕರ ಸಂಘಟನೆಯನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾರೆ. ಸಿಐಟಿಯು ರಾಜ್ಯ ಸಮಿತಿ ಸದಸ್ಯರಾಗಿಯೂ ಅವರು ಸೇವೆ ಸಲ್ಲಿಸಿದ್ದಾರೆ. ಹಮಾಲಿ ಕಾರ್ಮಿಕರ ನಡುವೆ ಪಕ್ಷವನ್ನು ಕಟ್ಟಲು ಶ್ರಮಿಸಿದ ಅವರು ಸಿಪಿಐ(ಎಂ) ಗಂಗಾವತಿ ತಾಲೂಕು ಸಮಿತಿಯ ಸದಸ್ಯರಾಗಿಯೂ ಜಿಲ್ಲಾ ಸಮಿತಿಯ ಆಹ್ವಾನಿತ ಸದಸ್ಯರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಪಕ್ಷದ ಪ್ರತಿಯೊಂದು ಸಭೆ ಹಾಗೂ ಹೋರಾಟಗಳಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆ ಮಾತ್ರವಲ್ಲ ವಿದ್ಯಾರ್ಥಿ, ಯುವಜನ, ರೈತ, ಕೃಷಿ ಕೂಲಿಕಾರರ ಸಂಘಟನೆಗಳ ಕಾರ್ಯಕರ್ತರೊಂದಿಗೆ ನಿಕಟ ಸಂಪರ್ಕ ಹೊಂದಿದವರಾಗಿದ್ದರು. ಅಲ್ಲದೆ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಶ್ರಮಿಸುತ್ತಿದ್ದರು.

ಕಾಮ್ರೆಡ್ ನಬೀಸಾಬ್ ಅವರ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಅವರ ಅಂತ್ಯ ಸಂಸ್ಕಾರದಲ್ಲಿ ಸಿಪಿಐ(ಎಂ) ಕೊಪ್ಪಳ ಜಿಲ್ಲಾ ಕಾರ್ಯದರ್ಶಿ ಹಾಗೂ ರಾಜ್ಯ ಸಮಿತಿ ಸದಸ್ಯರಾದ ಕಾ. ಜಿ. ನಾಗರಾಜ, ಸಿಪಿಐ(ಂ) ಗಂಗಾವತಿ ತಾಲ್ಲೂಕ ಕಾರ್ಯದರ್ಶಿ ಮತ್ತು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಕಾ. ನಿರುಪಾದಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಅಧ್ಯಕ್ಷ ಕಾ. ಎಂ. ಬಸವರಾಜ, ಕಾರ್ಯದರ್ಶಿ ಸುಂಕಪ್ಪ ಗದಗ, ತಾಲೂಕ ಕಾರ್ಯದರ್ಶಿಗಳಾದ ಕಾ. ಕೆ. ಹುಸೇನಪ್ಪ, ಕಾ. ಮರಿನಾಗಪ್ಪ, ಕಾ. ಬಾಳಪ್ಪ, ಸಿಐಟಿಯು ತಾಲ್ಲೂಕ್ ಕಾರ್ಯದರ್ಶಿ ಕಾ. ಮಂಜುನಾಥ ಡಗ್ಗಿ, ಬಿಸಿಯೂಟ ನೌಕರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾ. ಲಕ್ಷ್ಮಿದೇವಿ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಶ್ರೀನಿವಾಸ್ ಮತ್ತು ಕಾ. ಶಿವಣ್ಣ ಬೆಣಕಲ್, ಗಂಜ್ ಹಮಾಲಿ ಕಾರ್ಮಿಕರು, ವೇರ್‌ಹೌಸ್ ಹಮಾಲಿ ಕಾರ್ಮಿಕರು, ಬಜಾರ್ ಹಮಾಲಿ ಕಾರ್ಮಿಕರು, ಎಸ್.ಎಫ್.ಐ. ಕಾರ್ಯಕರ್ತರು, ದೇವದಾಸಿ ವಿಮೋಚನಾ ಸಂಘಟನೆಯ ಸದಸ್ಯರು, ಅಂಗನವಾಡಿ ನೌಕರರ ಸಂಘದ ಕಾರ್ಯಕರ್ತರು ಭಾಗವಹಿಸಿದ್ದರು.

ರೈತ ಹುತಾತ್ಮ ದಿನ: ಕೃಷಿ ಕಾಯಿದೆಗಳ ವಾಪಸಾತಿಗಾಗಿ ಪಾದಯಾತ್ರೆಗೆ ಎಸ್.ಆರ್.ಹಿರೇಮಠ ಚಾಲನೆ

ರೋಣ: ಜುಲೈ 21 ರಂದು ರೈತ ಹುತಾತ್ಮ ದಿನಾಚರಣೆಯ ಅಂಗವಾಗಿ ಹಾಗೂ ಕೃಷಿಗೆ ಮಾರಕವಾಗಲಿರುವ ಕೃಷಿಕಾಯ್ದೆಗಳ ವಾಪಾಸ್ಸಾತಿ ಸೇರಿದಂತೆ ಸ್ಥಳೀಯ ಬೇಡಿಕೆಗಳನ್ನೊ ಒಳಗೊಂಡ ರೈತರ ಬೃಹತ್ ಪಾದಯಾತ್ರೆಗೆ ಸಾಮಾಜಿಕ ಹೋರಾಟಗಾರ ಎಸ್.ಆರ್. ಹಿರೇಮಠ ಚಾಲನೆ ನೀಡಿದರು.

ದೇಶದ ಕಾರ್ಪೊರೇಟ್ ಮನೆತನಗಳ ಮಹದಾಸೆಯಂತೆ ರೈತ ವಿರೋಧಿ ಕಾಯ್ದೆಗಳನ್ನು ಜಾರಿಗೆ ತಂದಿರುವ ಕೇಂದ್ರದ ಬಿಜೆಪಿ ಸರ್ಕಾರವು ರೈತರಿಗೆ ಮರಣ ಶಾಸನ ಬರೆದಿದೆ. ಲಾಕ್‌ಡೌನ್ ಸಮಯವನ್ನು ದುರುಪಯೋಗಪಡಿಸಿಕೊಂಡು ದೇಶಕ್ಕೆ ಅನ್ನ ನೀಡುವ ರೈತರಿಗೆ ದ್ರೋಹವೆಸಗಿದೆ. ಕೇಂದ್ರದ ನರೇಂದ್ರ ಮೋದಿ ಸರ್ಕಾರವು ದೇಶದ ಸಂಪತ್ತನ್ನೆ ನುಂಗಿ ಹಾಕುತ್ತಿದೆ. ದೇಶದ ಕಾರ್ಪೊರೇಟ್ ಕಂಪನಿಗಳ ಕರುಣೆಯಿಂದ



ರೈತರು ಬದುಕ ಬೇಕಾಗುತ್ತದೆ. ರೈತರ ವೆಚ್ಚದಲ್ಲಿ ಬಂಡವಾಳಶಾಹಿಗಳಿಗೆ ಅನುಕೂಲವಾಗುವಂತೆ ಈ ಕಾಯಿದೆ ರೂಪಿಸಲಾಗಿದೆ ಕೇಂದ್ರ ಸರಕಾರ ಜಾರಿ ಮಾಡಿದ ಕೃಷಿ ಮಸೂದೆಗಳು ಜಾರಿಯಾದರೆ ಕೋಟ್ಯಂತರ ರೈತರು ತಮ್ಮ ಕೈಯಲ್ಲಿರುವ ಕೃಷಿ ಭೂಮಿಯನ್ನು ಕಳೆದುಕೊಳ್ಳಲಿದ್ದಾರೆ ಎಂದು ಎಸ್. ಆರ್.ಹಿರೇಮಠ ಅವರು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಜಾರಿಗೊಳಿಸಲು ಹೊರಟಿರುವ ಕೃಷಿಕಾಯ್ದೆಗಳು ಕೃಷಿ ನಾಶಗೊಳಿಸಲು ಹೊರಟಿದ್ದು, ದೇಶದ ಆಹಾರ ಭದ್ರತೆಗೆ ಹಾಗೂ ಸ್ವಾಲಂಭನೆಗೆ ತೀವ್ರ ಹಾನಿ ಮಾಡಿ ಕಾರ್ಪೊರೇಟ್ ಕಂಪನಿಗಳಿಗೆ ದೇಶದ ಕೃಷಿ ಭೂಮಿಯನ್ನು ಒತ್ತೆ ಇಡುವ ಹುನ್ನಾರ ಇದಾಗಿದೆ. ಅವುಗಳನ್ನು ಹಿಮ್ಮೆಟ್ಟಿಸುವ ಹಕ್ಕೋತ್ತಾಯಗಳು ಒಳಗೊಂಡು ಅಖಂಡ ರೋಣ ತಾಲ್ಲೂಕಿನಲ್ಲಿ ನೆನೆಗೂದಿಗೆ ಬಿದ್ದಿರುವ ನೀರಾವರಿ ಯೋಜನೆಗಳ ಅನುಷ್ಠಾನಗೊಳಿಸುವಂತೆ ಒತ್ತಾಯಿಸಿ ವಿವಿಧ ರೈತ ಸಂಘಗಳು ಹಾಗೂ ಕಾರ್ಮಿಕ, ದಲಿತಪರ, ಕನ್ನಡಪರ ಸಂಘಟನೆಗಳ ಜಂಟಿ ಆಶ್ರಯದಲ್ಲಿ ರೈತರ ಪಾದಯಾತ್ರೆಗೆ ಚಾಲನೆ ನೀಡಿ ನೀಡಿದರು.



ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ರೈತರ ಹೆಸರಿನಲ್ಲಿ ಹಸಿರು ಶಾಲನ್ನು ಹೊದ್ದುಕೊಂಡು ಅಧಿಕಾರಕ್ಕಾಗಿ ನಿಲ್ಲುತ್ತಿದ್ದಾರೆಯೇ ಹೊರತು ರೈತರ ಹಾಗೂ ದೇಶದ ಅಭಿವೃದ್ಧಿ ಬಗ್ಗೆ ಅವರಿಗೆ ಕಾಳಜಿ ಇಲ್ಲವಾಗಿದೆ. ಮಲಪ್ರಭಾ ನೀರಾವರಿ ಯೋಜನೆಯಿಂದ ರೋಣ ತಾಲ್ಲೂಕಿನ ಕೊನೆ ಅಂಚಿನ ರೈತರು ವಂಚಿತರಾಗಿದ್ದು, ಅವರಿಗೆ ನಿರಾವರಿ ಸೌಲಭ್ಯ ದೊರೆಯಬೇಕು. ಕೃಷ್ಣಾ ಭಿ ಸ್ಕೀಂ ಮೂರನೇಯ ಹಂತದ ಕೊಪ್ಪಳ ಸೂಕ್ಷ್ಮ ಏತ ನೀರಾವರಿ ಯೋಜನೆ ರೋಣ ತಾಲ್ಲೂಕ ಸೇರಿದಂತೆ ಗಜೇಂದ್ರಗಡ ತಾಲ್ಲೂಕಿಗೆ ಶೀಘ್ರವಾಗಿ ಜಾರಿಗೊಳ್ಳಬೇಕು. ಬೆಳೆವಿಮೆ ಪರಿಹಾರ ಎಲ್ಲಾ ಅರ್ಹ ಫಲಾನುಭವಿಗಳಿಗೆ ದೊರೆಯಬೇಕು ಎಂಬ ಸ್ಥಳೀಯ ಬೇಡಿಕೆಗಳನ್ನು ಸಹ ರೈತ ಜಾಥಾದಲ್ಲಿ ಒಳಗೊಂಡಿದೆ ಎಂದು ಕರ್ನಾಟಕ ಪ್ರಾಂತ ಕೃಷಿಕೂಲಿಕಾರ ಸಂಘಟನೆಯ ನಿತ್ಯಾನಂದಸ್ವಾಮಿ ಹೇಳಿದರು.

ಕಾರ್ಮಿಕ ಮುಖಂಡ ಎಮ್.ಎಸ್.ಹಡಪದ ಮಾತನಾಡಿ ಈ ಭಾಗದ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಗದೆ ಇರುವುದರಿಂದ ಸಾಕಷ್ಟು ಕಾರ್ಯಗಳ ನೆನೆಗುದಿಗೆ ಬಿದ್ದಿವೆ. ಕೇರಳ ಮಾದರಿಯ ಎಲ್ಲಾ ರೈತರು ಪಡೆದುಕೊಂಡಿರುವ ಖಾಸಗಿ–ಸರ್ಕಾರಿ ಸಾಲಗಳ ಸಂಪೂರ್ಣವಾಗಿ ಮನ್ನಾ ಮಾಡುವ ಋಣಮುಕ್ತ ಕಾಯ್ದೆ ಜಾರಿಯಾಗಬೇಕು. ಜನತೆಯನ್ನು ತೀವ್ರವಾಗಿ ಬಾಧಿಸುತ್ತಿರುವ ಅಗತ್ಯ ವಸ್ತುಗಳ ಬೆಲೆ ಸೇರಿದಂತೆ ತೈಲ ಬೆಲೆ ಏರಿಕೆಯನ್ನು ಕೇಂದ್ರ–ರಾಜ್ಯ ಸರ್ಕಾರಗಳು ನಿಯಂತ್ರಿಸಬೇಕು. ವೈಜ್ಞಾನಿಕ ಬೆಂಬಲ ಬೆಲೆ ನಿಗದಿಗೊಳಿಸುವ ಕಾನೂನು ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.

ರೋಣ ನಗರದಿಂದ ಪೋತರಾಜನ ಕಟ್ಟಿಯಿಂದ ಪ್ರಾರಂಭಗೊಂಡ ಪಾದಯಾತ್ರೆಯು ನರಗುಂದದ ರೈತ ಹುತಾತ್ಮ ಸ್ಮಾರಕದವರೆಗೆ 2 ದಿನಗಳು ಜಾಥಾ ನಡೆಯಲಿದೆ. ಪಾದಯಾತ್ರೆಯು ಚಿಕ್ಕಮಣ್ಣೂರ, ಮಲ್ಲಾಪೂರ, ಬೆಳವಣಿಕಿ, ಯಾವಗಲ್ಲ ಹಾಗೂ ಮದುಣಕಿ ಗ್ರಾಮಗಳಿಗೆ ತೆರಳಲಿದೆ.

ಪಾದಯಾತ್ರೆಯಲ್ಲಿ ಮುತ್ತಣ್ಣ ಚೌಡರೆಡ್ಡಿ, ಮೇಘರಾಜ ಬಾಯಿ, ಸಂಗಣ್ಣ ದಂಡಿನ, ಸಂಕಪ್ಪ ಕುರಹಟ್ಟಿ, ಕಾರ್ಮಿಕ ಮುಖಂಡರಾದ ಮಹೇಶ ಹಿರೇಮಠ, ಎಂ.ಎಸ್.ಹಡಪದ ಸೇರಿದಂತೆ ನೂರಾರು ರೈತರು ಪಾಲ್ಗೊಂಡಿದ್ದರು.

ವರದಿ: ದಾವಲ್‌ಸಾಬ ತಾಳಿಕೋಟಿ ■

ರೈತರು–ಸಾರ್ವಜನಿಕರಿಂದ ಲೂಟಿಗೆ ಮುಂದಾಗಿರುವ ಜೆಸ್ಕಾಂ: ಕೆಪಿಆರ್‌ಎಸ್ ಪ್ರತಿಭಟನೆ

ಲಿಂಗಸಗೂರು: ತಾಲೂಕಿನ ರೈತರಿಗೆ ಹಾಗೂ ಸಾರ್ವಜನಿಕರಿಗೆ ಜೆಸ್ಕಾಂ ಇಲಾಖೆಯಿಂದ ಸರಿಯಾದ ಸ್ಪಂದನೆ ಮತ್ತು ಸೇವೆ ನೀಡದೇ ಇರುವುದರಿಂದ ರೈತರಿಗೆ ಭಾರೀ ನಷ್ಟ ಉಂಟಾಗುತ್ತಿದೆ. ಅಲ್ಲದೇ ಟಿಸಿ ಸುಟ್ಟರೆ ರೈತರಿಗೆ 6,000–10,000 ರೂಪಾಯಿ ವರೆಗೆ ಹಣಕ್ಕೆ ಬೇಡಿಕೆ ಇಡಲಾಗುತ್ತಿದೆ ಎಂದು ಆರೋಪಿಸಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ವತಿಯಿಂದ ಪ್ರತಿಭಟನೆ ಹಮ್ಮಿಕೊಂಡರು.

ಹಣ ಕೊಟ್ಟರೂ ರೈತರ ಕೆಲಸ ಮಾಡದೇ ಸತಾಯಿಸಿ ಕಚೇರಿಗೆ ಅಲೆಯುವಂತೆ ಮಾಡಲಾಗುತ್ತಿದೆ. ಕೆಲವರಿಗೆ ಬ್ಲಾಕ್‌ಮೇಲ್ ಮಾಡಿ ಹಣ ವಸೂಲಿ ಮಾಡಲಾಗುತ್ತಿದೆ. ರೈತರು ಹಾಗೂ ಸಾರ್ವಜನಿಕರು ಸಮಸ್ಯೆ ತಿಳಿಸಲು ಫೋನ್ ಮಾಡಿದರೆ ಅವರ ಸಂಪರ್ಕ ಸಂಖ್ಯೆಯನ್ನು ಕಪ್ಪುಪಟ್ಟಿಗೆ ಸೇರಿಸಲಾಗುತ್ತದೆ. ಇದು ರೈತ ಮತ್ತು ಜನವಿರೋಧಿ ನೀತಿಯಾಗಿದೆ ಎಂದು ಕೆಪಿಆರ್‌ಎಸ್ ತಾಲೂಕು ಸಮಿತಿಯು ತೀವ್ರವಾಗಿ ಖಂಡಿಸಿದೆ.

ಜೆಸ್ಕಾಂನ ಹಟ್ಟಿ ಶಾಖಾ ಅಧಿಕಾರಿ ಬಸಪ್ಪ ಅವರು ಕೂಡಾ ಈ ರೀತಿಯ ದುರ್ವರ್ತನೆ, ಬೇಜವಾಬ್ದಾರಿತನ ತೋರಿಸಿದ್ದು, ಹಲವು ಬಾರಿ ಈ ಬಗ್ಗೆ ದೂರು ನೀಡಲಾಗಿದೆ. ಒಂದು ಟಿಸಿ ನೀಡಲು ತಿಂಗಳು ವರ್ಷಗಟ್ಟಲೇ ಸತಾಯಿಸುತ್ತಾರೆ. ಟಿಸಿ ಬೇಕಿದ್ರೆ ನಿಮ್ಮದೇ ಗಾಡಿ ಹಾಗೂ ಲೇಬರ್ ಕೊಡಬೇಕು ಅನ್ನುತ್ತಾರೆ. ಆಗ ಮಾತ್ರ ಟಿಸಿ ಕೋಡ್ತೀವಿ ಎಂದು ಬೇಜವಾಬ್ದಾರಿಯಾಗಿ ಮಾತನಾಡುತ್ತಾರೆ. ಕಂಬಗಳು ಶಿಥಿಲಾವಸ್ಥೆ ತಲುಪಿ ಜನರ ಮೇಲೆ ಬೀಳುವ ಸ್ಥಿತಿ ತಲುಪಿದ್ರೂ ಹೊಸ ಕಂಬದ ವ್ಯವಸ್ಥೆ ಮಾಡೋದಿಲ್ಲ. ವಿದ್ಯುತ್ ತಂತಿಗಳು ನೆಲಕ್ಕೆ ಜೋತು ಬಿದ್ದರೂ ಸಹ ಅದನ್ನು ಸರಿಪಡಿಸಲು ಮುಂದಾಗುವುದಿಲ್ಲ. ರೈತರಿಂದ ಮಾತ್ರ ಸಾವಿರಾರು ರೂಪಾಯಿಗಳನ್ನು ಪಡೆದುಕೊಳ್ಳುತ್ತಾರೆ ಎಂದು ಅಧಿಕಾರಿಗಳ ನಿರ್ಲಕ್ಷ್ಯವನ್ನು ಕೆಪಿಆರ್‌ಎಸ್ ಮುಖಂಡರು ಖಂಡಿಸಿದ್ದಾರೆ.

ಇವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಬೇಕು. ಗೆಜ್ಜಲಗಟ್ಟಾ ಗ್ರಾಮ ಪಂಚಾಯಿತಿಗೆ ಲೈನ್‌ಮನ್ ಅನ್ನು ನಿಯೋಜಿಸಿಲ್ಲ. ಈ ಕೂಡಲೇ ಲೈನ್‌ಮನ್ ನಿಯೋಜಿಸಿ ಒಎಂ ಕಾಫಿ ನೀಡಿ. ಇವತ್ತೇ ನಿರ್ಧಾರ ಮಾಡಿ ಎಂದು ಆಗ್ರಹಿಸಿದರು. ಈಗಲೇ ಗೆಜ್ಜಲಗಟ್ಟಾ ಗ್ರಾಮ ಪಂಚಾಯ್ತಿಯಿಂದ ಸೂಕ್ತವಾದ ಕ್ರಮವನ್ನು ಕೈಗೊಂಡು ಆ ಪ್ರತಿಯನ್ನು ಎಇಇ ಗೆ ನೀಡಿ ಒಂದು ವಾರ ಕಳೆದರೂ ಲೈನ್ ಮನ್ ಕೊಟ್ಟಿರುವುದಿಲ್ಲ. ಅದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ನಿಗದಿತ ಸಮಯದೊಳಗೆ ಪರಿಹಾರ ನೀಡಬೇಕೆಂದು ಆಗ್ರಹಿಸಿದ್ದಾರೆ.



ಅಲ್ಲದೆ, ನಾರಾಯಣ ಪೇಟೆ ಓಣಿಗೆ 25 ಕೆವಿಎಯ ಟಿಸಿ ನೀಡಬೇಕು. ನಿಲೋಗಲ್ ವಿಲೇಜ್ ನ 100 ಕೆವಿಎ ನ ಟಿಸಿ ಇದ್ದದ್ದನ್ನು 63ಕ್ಕೆ ಅಳವಡಿಸಿದ್ದು ಕೂಡಲೇ ವಾಪಸ್ಸು ಪಡೆಯಬೇಕು. ಟಿಸಿ ಸುಟ್ಟರೆ ಹೆಚ್ಚುವರಿ ಹಣ ಪಡೆದರೆ, ಸೂಕ್ತ ಪರೀಶಿಲಿಸಿ ಹಣ ವಾಪಿಸ್ ನೀಡಬೇಕು. ವೀರಭದ್ರ ಪ್ಪ ಅವರ ಮನೆಮೇಲೆ ವಿದ್ಯುತ್ ತಂತಿ ಇದ್ದು ಅದನ್ನು ಕೂಡಲೇ ತೆರವುಗೊಳಿಸಬೇಕು. ನಿಲೋಗಲ್ ಗ್ರಾಮದ ಅಗಸಿ ಮುಂದಿರುವ ಎಲ್‌ಟಿ ತಂತಿಗಳನ್ನು ಬದಲಿಸಬೇಕು. ಹರುಜನ ಓಣಿಯ ಶೌಚಾಲಯ ಹತ್ತಿರ ಕಂಬ ತೆರವುಗೊಳಿಸಬೇಕು.

ಗೆಜ್ಜಲಗಟ್ಟಾದ ಅಂಗಡಿಯವರ ಹೊಲದಲ್ಲಿ ವಿದ್ಯುತ್ ಸಂಬಂಧಿಸಿದ ಕಾರ್ಯಗಳು ದುರಸ್ತಿಯಲ್ಲಿದೆ. ವಾರ ಕಳೆದರೂ ಕಾಮಗಾರಿ ಪೂರ್ಣಗೊಂಡಿಲ್ಲ. ಈ ಪ್ರದೇಶದಲ್ಲಿ ರೈತರಿಗಷ್ಟೇ ಅಲ್ಲ, ಹೊಲಗಳಲ್ಲೇ 8–10 ಮನೆಗಳಿದ್ದು ಇಲ್ಲಿಯ ನಿವಾಸಿಗಳು ಕತ್ತಲ್ಲಲ್ಲೇ ಕಾಲ ಕಳೆಯಬೇಕಾಗುತ್ತಿದೆ.

ವೀರಾಪೂರು ಕ್ರಾಸ್ ಬಳಿ ಎಸ್‌ಸಿ–ಎಸ್‌ಟಿ ಮನೆಗಳು ಇದ್ದು 15 ವರ್ಷಗಳಿಂದ ಕತ್ತಲೆಯಲ್ಲೇ ವಾಸುಸುತ್ತಿದ್ದಾರೆ. ಕೂಡಲೇ ಅಲ್ಲಿ ಟಿಸಿ ಹಾಕಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕು. ಇಲ್ಲಿನ ಅನೇಕ ಓಣಿಗಳಿಗೆ ವಿದ್ಯುತ್ ಕಂಬಗಳು ಇಲ್ಲ. ಕೂಡಲೇ ಕಂಬಗಳನ್ನು ಅಳವಡಿಸಬೇಕು. ಗ್ರಾಮದ ನೀರು ಸರಬರಾಜು ಮಾಡುವ ಟಿಸಿ ನಾಪತ್ತೆಯಾಗಿದೆ. ತನಿಖೆಯನ್ನು ಕೈಗೊಂಡು ಕಳ್ಳರನ್ನು ಬಂಧಿಸಬೇಕು ಮತ್ತು ಇಲ್ಲಿ ಕೂಡಲೇ ಟಿಸಿ ಹಾಕಬೇಕು.

ಗೋನವಾಟ್ಲ ತಾಂಡಾದಲ್ಲಿ ಟಿಸಿ ಸುಟ್ಟು 3 ತಿಂಗಳು ಕಳೆದರೂ ಟಿಸಿ ಅಳವಡಿಸಿಲ್ಲ. ಸಗರಪ್ಪನ ದೊಡ್ಡಿಯ 25 ಮನೆಗಳಿಗೆ ಟಿಸಿ ಅಳವಡಿಸಬೇಕು. ಕಾಳಾಪೂರದ 1ನೇ ವಾರ್ಡಿನ ಎಸ್‌ಸಿ ಓಣಿಯ ಟಿಸಿ ಸ್ಥಳಾಂತರ ಮಾಡಬೇಕು. ರೈತರ ಹಾಗೂ ಸಾರ್ವಜನಿಕರ ಕರೆ ಹಾಗೂ ದೂರು ಗಳಿಗೆ ಕೂಡಲೇ ಸ್ಪಂಧಿಸಬೇಕು ಎಂದು ಪ್ರತಿಭಟನೆಯ ಮೂಲಕ ಕೆಪಿಆರ್‌ಎಸ್ ಸಂಘಟನೆಯು ಆಗ್ರಹಿಸಿದೆ.

ವಿಸ್ಟಡೋಮ್ ಕೋಚ್ ಸಹಿತ ಕಾರವಾರ–ಬೆಂಗಳೂರು ಹಗಲು ರೈಲು ಆರಂಭಿಸಲು ಸಿಪಿಐ(ಎಂ) ಒತ್ತಾಯ

ವಾರದಲ್ಲಿ 3 ದಿನ ಚಲಿಸುತ್ತಿದ್ದ ಕಾರವಾರ – ಯಶವಂತಪುರ ರೈಲನ್ನು ಲಾಭದಾಯಕ ಅಲ್ಲ ಎಂಬ ಕಾರಣ ನೀಡಿ ಸುಮಾರು 1 ವರ್ಷದಿಂದ ರದ್ದುಗೊಳಿಸಲಾಗಿದೆ. ಈ ರೈಲನ್ನು ಆರಂಭಿಸಬೇಕು ಹಾಗೂ ವಿಸ್ಟಾಡೋಮ್ ಕೋಚ್ ಅಳವಡಿಸಬೇಕು ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ರೈಲ್ವೆ ಸಚಿವಾಲಯವನ್ನು ಒತ್ತಾಯಿಸಿದೆ.

ಉಡುಪಿ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಹೆಚ್ಚಿಸುವ ಮೂಲಕ ಕೋವಿಡ್ ನಂತರದ ಕಾಲಘಟ್ಟದಲ್ಲಿ ಉದ್ಯೋಗ ಸ್ರಷ್ಟಿ ಮಾಡುವತ್ತ ಸರಕಾರ ಮತ್ತು ಜನ ಪ್ರತಿನಿಧಿಗಳು ಚಿಂತಿಸಬೇಕು. ರೈಲು ಸಂಚಾರ ಪುನರ್ ಆರಂಭ ಮತ್ತು ವಿಸ್ಟಾಡೋಮ್ ಕೋಚ್ ಅಳವಡಿಕೆ ಪ್ರವಾಸೋದ್ಯಮ ಹೆಚ್ಚಿಸಲು ಸಹಾಯ ಮಾಡುತ್ತದೆ. ಅಲ್ಲದೆ ಆಸ್ಪತ್ರೆ ಮತ್ತು ಕಚೇರಿಗಳಿಗೆ ತೆರಳುವವರಿಗೆ ಸಹಾಯವಾಗುತ್ತದೆ.

ಜಿಲ್ಲೆಯ ಹಿತದ್ರಷ್ಟಿಯಿಂದ ಕಾರವಾರ – ಯಶವಂತಪುರ ರೈಲು ಪುನರಾರಂಭಕ್ಕೆ ಜಿಲ್ಲೆಯ ಸಂಘ ಸಂಸ್ಥೆಗಳು ಮತ್ತು ಜನತೆ ಒತ್ತಾಯಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಕೇಂದ್ರ ಸಹಕಾರಿ ಸಚಿವಾಲಯವೊಂದು ಬೇಕಿತ್ತೇ?

ಸಹಕಾರಿ ಎಂಬುದು ರಾಜ್ಯಪಟ್ಟಿಯಲ್ಲಿರುವ ವಿಷಯವಾಗಿರುವಾಗ ಕೇಂದ್ರದಲ್ಲಿ ಒಂದು ಸಹಕಾರದ ಸಚಿವಾಲಯ ಎಂಬುದು ನಿಜವಾಗಿಯೂ ಬೇಕಿತ್ತೇ? ಬೇಕಿದ್ದರೆ ಕೃಷಿಯಂತಹ ಮಂತ್ರಾಲಯದ ಜತೆಗಿರುವ ಬದಲು ಗೃಹಮಂತ್ರಾಲಯದ ಜೊತೆಗೇ ಏಕೆ? ನೂತನ ಸಹಕಾರಿ ಸಚಿವಾಲಯದ ಸ್ಥಾಪನೆಯು ಸಹಕಾರಿ ರಂಗವನ್ನು ಬಿಜೆಪಿ ತೆಕ್ಕೆಗೆ ತರುವ ಕುತಂತ್ರದ ಭಾಗವಾಗಿರಬಹುದು ಎಂಬ ಶಂಕೆ ಸಹಜವಾಗಿ ಬರುತ್ತದೆ. ದೇಶದ ಉನ್ನತ ಸಹಕಾರಿ ಸಂಸ್ಥೆಯಾಗಿ ಗುಜರಾತಿನಲ್ಲಿ ಅಮುಲ್ ಸಹಕಾರಿ ಸಂಸ್ಥೆಯನ್ನು ಕಟ್ಟಿ, ಬೆಳೆಸಿದ್ದರೂ, ನಂತರ ಅಲ್ಲಿಂದಲೇ ಹೊರ ದೂಡಲ್ಪಟ್ಟಿದ್ದ ವರ್ಗಿಸ್ ಕುರಿಯನ್ 2000 ದ ಪ್ರಾರಂಭದಲ್ಲಿ ವ್ಯಕ್ತಪಡಿಸಿದ್ದ ಆತಂಕಗಳು ನಿಜವಾಗುತ್ತಿವೆಯೇ?



ಪ್ರೊ. ಟಿ.ಎಂ. ಥಾಮಸ್ ಐಸಾಕ್
ಕೇರಳದ ಹಿಂದಿನ ಹಣಕಾಸು ಮಂತ್ರಿಗಳು
–ಅನು: ಶ್ರೈ.ಶಂ.ನಾ.

ಕೇಂದ್ರದಲ್ಲಿ ಸಹಕಾರಕ್ಕೆ ಒಂದು ಪ್ರತ್ಯೇಕ ಸಚಿವಾಲಯದ ಸ್ಥಾಪನೆ ಮತ್ತು ಅಮಿತ್ ಶಾ ರವರನ್ನು ಭಾರತದ ಪ್ರಥಮ ಸಹಕಾರ ಮಂತ್ರಿಯಾಗಿ ನೇಮಿಸಿರುವುದು ದೇಶದ ಒಕ್ಕೂಟ ವ್ಯವಸ್ಥೆ ಮತ್ತು ಸಹಕಾರಿಗಳ ಬೆಳವಣಿಗೆಗೆ ಸಂಬಂಧಪಟ್ಟಂತೆ ಹಲವು ಅಹಿತಕರ ಪ್ರಶ್ನೆಗಳನ್ನು ಎತ್ತುತ್ತಿದೆ. ನಮ್ಮ ಸಂವಿಧಾನದ ಶೆಡ್ಯೂಲ್ 7 ರ ಅನುಸಾರ ಸಹಕಾರಿಗಳು ಒಂದು ರಾಜ್ಯದ ವಿಚಾರ. ಇಲ್ಲಿಯುವರೆಗೂ ಆಯಾ ರಾಜ್ಯಗಳ ಸಹಕಾರಿ ರಿಜಿಸ್ಟ್ರಾರ್‌ಗಳ ನಿಯಂತ್ರಣದಲ್ಲಿ ಸಹಕಾರಿಗಳು ಕಾರ್ಯ ನಿರ್ವಹಿಸುತ್ತಿವೆ. ಸುಮಾರು ನೂರರಷ್ಟು ಬಹು ರಾಜ್ಯ ಸಹಕಾರಿಗಳು (ಎಂ.ಎಸ್.ಸಿ.ಗಳು) ಅಸ್ತಿತ್ವದಲ್ಲಿವೆ. ಆದರೆ ಇದು ಕೇಂದ್ರದಲ್ಲಿ ಒಂದು ಪ್ರತ್ಯೇಕ ಸಚಿವಾಲಯದ ಅಗತ್ಯವಿರುವಷ್ಟು ಗಣನೀಯ ಸಂಖ್ಯೆಯಲ್ಲ. ಪ್ರತ್ಯೇಕ ಸಚಿವಾಲಯವನ್ನು ರಚಿಸುವ ಮೊದಲು ರಾಜ್ಯಗಳನ್ನು ಸಂಪರ್ಕಿಸಿಲ್ಲ. ಕೇಂದ್ರ ಸರ್ಕಾರದ ಆದೇಶವನ್ನು ನೋಡಿದಾಗ ಇದು ಎಷ್ಟು ಅಸ್ಪಷ್ಟವಾಗಿದೆ ಎಂಬುದು ತಿಳಿಯುತ್ತದೆ. ಮೇಲಾಗಿ ಸಹಯೋಗವನ್ನು ಸ್ಥಾಪಿಸಲು ಬೇಕಾದಲ್ಲಿ ಈ ಸಚಿವಾಲಯವನ್ನು ಕೃಷಿಯಂತಂಹ ಬಲವಾದ ಕ್ಷೇತ್ರವನ್ನು ನೋಡಿಕೊಳ್ಳುತ್ತಿರುವ ಮಂತ್ರಿಗಳಿಗೆ ನೀಡಬಹುದಿತ್ತು. ಸಹಕಾರಿ ಬೆಳೆಸುವಲ್ಲಿ ಗೃಹ ಸಚಿವಾಲಯಕ್ಕೆ ಏನು ಪಾತ್ರವಿದೆ? ಇದು ಅಮಿತ್ ಶಾ ರಿಗೆ ವಿಶೇಷವಾಗಿ ವಹಿಸಿರುವ ಕಾರ್ಯವಾಗಿದೆ.

ಗುಜರಾತಿನಲ್ಲಿ ಅಮಿತ್ ಶಾ

ಗುಜರಾತಿನಲ್ಲಿ ಕಾಂಗ್ರೆಸ್ ಸಹಕಾರಿಗಳನ್ನು ಓಡಿಸಿ ಬಿಜೆಪಿಗೆ ಇವುಗಳ ನಿಯಂತ್ರಣವನ್ನು ತರುವಲ್ಲಿ ಅಮಿತ್ ಶಾ ಕಾರಣಕರ್ತರಾಗಿದ್ದರು. ದೇಶದ ಉನ್ನತ ಸಹಕಾರಿ ಸಂಸ್ಥೆಯಾಗಿ ಅಮುಲ್ ಸಹಕಾರಿ ಸಂಸ್ಥೆಯನ್ನು ಕಟ್ಟಿ, ಬೆಳೆಸಿದ್ದ ಮತ್ತು ಅದೇ ಅಮುಲ್ ನಿಂದ ಹೊರ ದೂಡಲ್ಪಟ್ಟಿದ್ದ ವರ್ಗಿಸ್ ಕುರಿಯನ್ ರವರು 2000 ದ ಪ್ರಾರಂಭದಲ್ಲಿ ವ್ಯಕ್ತಪಡಿಸಿದ್ದ ಆತಂಕಗಳು ಮತ್ತೆ ನನ್ನ ನೆನಪಿಗೆ ಬರುತ್ತಿವೆ.

ಕುರಿಯೆನ್ ಬಗ್ಗೆ ಎಷ್ಟು ದ್ವೇಷ ಇತ್ತೆಂದರೆ ಜೀವನಪೂರ್ತಿ ನಾಸ್ತಿಕರಾಗಿದ್ದ ಇವರ ಮೇಲೆ ಮತಾಂತರ ಮಾಡುತ್ತಾರೆ ಎಂಬ ಅಪಪ್ರಚಾರ ನಡೆದಿತ್ತು. ಭಾರತದ ಕ್ಷೀರ ಕ್ರಾಂತಿಯ ಈ ಹರಿಕಾರ ನಿಧನರಾದಾಗ, ಹತ್ತಿರದ ಪಟ್ಟಣದಲ್ಲಿಯೇ ಇದ್ದ ಮೋದಿ ಅಂತಿಮ ನಮನಗಳನ್ನು ಸಲ್ಲಿಸಲು ಬರಲಿಲ್ಲ. ಗುಜರಾತ್ ಸಹಕಾರಿ ರಂಗವು ಬಿಜೆಪಿಯ ಬಿಗಿ ಹಿಡಿತದಲ್ಲಿದೆ ಮತ್ತು ಇದರ ರಾಜಕೀಯ ಪ್ರಭಾವದ ಪ್ರಮುಖ ಬುನಾದಿಯಾಗಿದೆ.

ನೂತನ ಸಹಕಾರಿ ಸಚಿವಾಲಯದ ಸ್ಥಾಪನೆಯು ಸಹಕಾರಿ ರಂಗವನ್ನು ಬಿಜೆಪಿ ತೆಕ್ಕೆಗೆ ತರುವ ಕುತಂತ್ರದ ಭಾಗವಾಗಿರಬಹುದು ಎಂಬ ಶಂಕೆ ನನಗಿದೆ. ಮಹಾರಾಷ್ಟ್ರ ಸಹಕಾರಿಯಲ್ಲಿ ಎನ್.ಸಿ.ಪಿ.ಮತ್ತು ಶರದ್ ಪವಾರ್ ರವರ ಹಿತ್ತಾಸಕ್ತಿ ಇರುವುದು ಎಲ್ಲರಿಗೂ ತಿಳಿದಿದೆ. ಕೇವಲ ಮಹಾರಾಷ್ಟ್ರ ಮಾತ್ರವಲ್ಲ, ಬಿಜೆಪಿಯೇತರ ರಾಜ್ಯಗಳ ಸಹಕಾರಿ ರಂಗದಲ್ಲಿ ಒಂದು ಕೇಂದ್ರ ಸಚಿವಾಲಯದ ಮೂಲಕ ಮಧ್ಯ ಪ್ರವೇಶಿಸಲು ಬಿಜೆಪಿ ತರಾತುರಿಯಲ್ಲಿದೆ. ಕೇಂದ್ರದಲ್ಲಿ ಅಧಿಕಾರದ ರುಚಿ ಹಿಡಿದ ದಿನದಿಂದಲೇ ಬಿಜೆಪಿಯು ಸಹಕಾರಿ ವಿಷಯದಲ್ಲಿ ಅತೀವ ಆಸಕ್ತಿ ತೋರಿಸುತ್ತಿದೆ.

ವಾಜಪೇಯಿ ಯವರು ಪ್ರಧಾನಿಗಳಾಗಿದ್ದಾಗ 2002 ರಲ್ಲಿ ಸಂಸತ್ತು ಬಹು ರಾಜ್ಯ ಸಹಕಾರಿ ಸಂಸ್ಥೆಗಳ ಕಾಯಿದೆ 2002 ಅನ್ನು ಜಾರಿ ಮಾಡಿತು ಮತ್ತು ಹಲವು ರಾಜ್ಯಗಳಲ್ಲಿ ಸಹಕಾರಿಗಳ ರಚನೆ ಮತ್ತು ಸದಸ್ಯತ್ವವನ್ನು ಇದು ಅನುವು ಮಾಡಿತು. 2014 ರಲ್ಲಿ ಕಂಪೆನಿ ಕಾಯಿದೆ 2013 ರ ವಿಧಿ 406 ರ ಮೂಲಕ ಮಾನ್ಯತೆ ಪಡೆದಿರುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ (ಎನ್.ಬಿ.ಎಫ್.ಸಿ.)ಗಳನ್ನು ಸ್ಥಾಪಿಸಲು 'ನಿಧಿ ನಿಯಮಾವಳಿ' ರೂಪಿಸಲಾಯಿತು. 2020 ರಲ್ಲಿ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಗೆ ತಿದ್ದುಪಡಿ ತರುವ ಮೂಲಕ ನಗರ ಸಹಕಾರಿ ಬ್ಯಾಂಕುಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಿಯಂತ್ರಣದಡಿ ತರಲಾಯಿತು. ಈ ತಿದ್ದುಪಡಿಯು ಪ್ರಾಥಮಿಕ ಕೃಷಿ ಸಹಕಾರಿ(ಪಿ.ಎ.ಸಿ.) ಗಳಿಗೆ ನೇರ ದುಷ್ಪರಿಣಾಮ ಬೀರದ್ದಿದರೂ, ಈ ಪಿ.ಎ.ಸಿ. ಗಳು 'ಬ್ಯಾಂಕ್' ಪದವನ್ನು ಬಳಕೆ ಮಾಡುವಂತಿಲ್ಲ ಎಂಬ ನಿಷೇಧದ ಭಯ ಅವುಗಳ ತಲೆ ಮೇಲೆ ತೂಗುವ ಕತ್ತಿಯಾಗಿ ನಂತಿದೆ.

ಈಗ ರಾಜ್ಯ ಕಾನೂನುಗಳು ಮತ್ತು ರಾಜ್ಯ ಸಹಕಾರಿಗಳ ರಿಜಿಸ್ಟ್ರಾರ ರವರ ಅವಗಾಹನೆಯಲ್ಲಿರುವ ರಾಜ್ಯ ಸಹಕಾರಿ ಸಂರಚನೆಯ ಮೇಲೆ ಸದ್ಯಕ್ಕೆ ನೂತನ ಕೇಂದ್ರ ಸಚಿವಾಲಯಕ್ಕೆ ಯಾವುದೇ ನಿಯಂತ್ರಣಾಧಿಕಾರ ಇಲ್ಲ. ನೂತನ ಸಚಿವಾಲಯದ ಅಧಿಕಾರವು ಕೇವಲ ಬಹು ರಾಜ್ಯ ಸಹಕಾರಿಗಳಿಗೆ ಮಾತ್ರ ಸೀಮಿತವಾಗಿರುತ್ತದೆ ಮತ್ತು ಇಂತಹ ಸೊಸೈಟಿಗಳಿಗೆ ವಿಶೇಷ ಬೆಂಬಲ ನೀಡುವುದಾಗಿರುತ್ತದೆ.

ಹಿಂದೂ ಬ್ಯಾಂಕ್‌ಗಳ ಪ್ರಸಂಗ:

ಹಿಂದೂಗಳ ದುಡ್ಡು ಹಿಂದೂಗಳಿಗೆ ಎಂಬ ಘೋಷಣೆಯೊಂದಿಗೆ ಬಿಜೆಪಿಯು ತಾನು "ಹಿಂದೂ ಬ್ಯಾಂಕುಗಳು" ಎಂದು ಕರೆಯುತ್ತಿರುವ ಬ್ಯಾಂಕುಗಳನ್ನು ಇತ್ತೀಚೆಗೆ ಸ್ಥಾಪಿಸುತ್ತಿದೆ. ವಾಸ್ತವವಾಗಿ ಇವುಗಳು ಬ್ಯಾಂಕ್‌ಗಳಲ್ಲ, ನಿಧಿ ನಿಯಮಗಳು, 2014 ರ ಅಡಿ ಬರುವ ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ(ಎನ್.ಬಿ.ಎಫ್.ಸಿ.)ಗಳು. ಕೇರಳದಲ್ಲಿ ಇಂತಹ 870 ಸಂಸ್ಥೆಗಳನ್ನು ನೋಂದಾಯಿಸಿರುವುದಾಗಿ ಹೇಳಿಕೊಳ್ಳಲಾಗುತ್ತಿದೆ. ಒಂದು ತೀವ್ರವಾದ ಕೋಮು ಪ್ರಚಾರದಿಂದಾಗಿ ಇವು ಗಮನ ಸೆಳೆದವು. ಆನ್‌ಲೈನ್ ಸುದ್ದಿ Portal ಆದ 'ಫೆಡರಲ್' ಗೆ ನೀಡಿರುವ ಸಂದರ್ಶನದಲ್ಲಿ ಹಿಂದೂ ಬ್ಯಾಂಕ್ ಆಂದೋಲನದ ಹಿರಿಯ ಆಯೋಜಕರಲ್ಲಿ ಒಬ್ಬರಾಗಿರುವವರು ಈ ಆಂದೋಲನದ ತರ್ಕವನ್ನು ಹೀಗೆ ವಿವರಿಸಿದ್ದಾರೆ: "ಕೋವಿಡ್–19 ಸಾಂಕ್ರಾಮಿಕದಿಂದ ಹೊಮ್ಮಿರುವ ಆರ್ಥಿಕ ಹೊರೆಯಿಂದಾಗಿ ಬಹಳಷ್ಟು ಹಿಂದೂಗಳು ನರಳುತ್ತಿದ್ದಾರೆ. ಕೇರಳದಲ್ಲಿ ಸಹಕಾರಿ ರಂಗದಲ್ಲಿ ಸಿಪಿಐ(ಎಂ) ನ ಏಕಸ್ವಾಮ್ಯವಿದೆ. ಇವು ಸಿಪಿಐ(ಎಂ) ನ ರಾಜಕೀಯ ವಿರೋಧಿಗಳಿಗೆ ಸಾಲ ನಿರಾಕರಿಸುತ್ತಿವೆ. ಹೀಗಾಗಿ ಇಂತಹ ಸಂಸ್ಥೆಗಳನ್ನು ತಮ್ಮದೇ ಕಲ್ಯಾಣಕ್ಕಾಗಿ ಸ್ಥಾಪಿಸುವಂತೆ ನಾವು ಹಿಂದೂಗಳನ್ನು ಅಣಿನೆರೆಸುತ್ತಿದ್ದೇವೆ". ಕೇರಳದ ಸಹಕಾರಿ ರಂಗದಲ್ಲಿ ಏನೇ ಇತಿಮಿತಿಗಳಿದ್ದರೂ, ಇವುಗಳು "ಸಾಲ ನೀಡುವ ಸಂದರ್ಭದಲ್ಲಿ ಈ ತರಹದ ಭೇದ ಮಾಡುವುದಿಲ್ಲ" ಎಂದು ವಿರೋಧ ಪಕ್ಷದ ನಾಯಕರೇ ಹೇಳಿದ್ದಾರೆ.

ಕೇರಳ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿರುವ ಸಹಕಾರಿಗಳಲ್ಲಿ (ಸಾಲ ಮತ್ತು ಸಾಲವಿಲ್ಲದ) ಬಿಜೆಪಿ ಗೆ ಯಾವುದೇ ಪ್ರಭಾವವಿಲ್ಲ ಎಂದೇ ಹೇಳಬಹುದು. ಆದ್ದರಿಂದಲೇ, ಸಹಕಾರಿಗಳು ಕಪ್ಪು ಹಣ ಮತ್ತು ಭ್ರಷ್ಟಾಚಾರಕ್ಕೆ ವಾಹಕಗಳು, ಪ್ರಮುಖ ರಾಜಕೀಯ ಪಕ್ಷಗಳಿಗೆ ಹಣಕಾಸು ನೀಡುವಂಥವು ಮುಂತಾದ ಆಧಾರರಹಿತ ಆಪಾದನೆಗಳನ್ನು ಬಿಜೆಪಿ ಮಾಡುತ್ತಿದೆ. ನೋಟುರದ್ಧತಿ ಸಮಯದಲ್ಲಂತೂ ಇವರುಗಳು ಸಹಕಾರಿಗಳ ದೈನಂದಿನ ಚಟುವಟಿಕೆಗಳನ್ನು ನಿರ್ಬಂಧಿಸುವ ಮೂಲಕ ಸಹಕಾರಿಗಳಿಗೆ ತಡೆಗೋಡೆ ನಿರ್ಮಿಸಲು ಮುಂದಾಗಿದ್ದರು. ಇವರ ಹಿಂದೂ ಬ್ಯಾಂಕ್‌ಗಳು ಸಹಕಾರಿಗಳಿಗೆ ಪರ್ಯಾಯ ಎನ್ನುವಂತೆ ಬಿಂಬಿಸಲಾಗುತ್ತಿದೆ. ಇಷ್ಟೆಲ್ಲಾ ಮಾಡಿದರೂ, ಠೇವಣಿದಾರರ ದುಡ್ಡನ್ನು ದುರುಪಯೋಗ ಪಡಿಸಿಕೊಂಡ ಕಾರಣಕ್ಕೆ ಮುಚ್ಚಿ ಹೋದ ಹಿಂದೂ ಬ್ಯಾಂಕ್ ಕುರಿತಂತೆ ವಿವಾದ ಎಬ್ಬಿಸಿದ್ದು ಬಿಟ್ಟರೆ, ಇವರಿಗೆ ಬೇರೆ ಯಾವುದೇ ಪರಿಣಾಮ ಬೀರಲು ಸಾಧ್ಯವಾಗಿಲ್ಲ.

ಕೆಲವು ರಾಜ್ಯಗಳಲ್ಲಿ ಬಿಜೆಪಿ ಹುಟ್ಟು ಹಾಕುತ್ತಿರುವ ಈ ಹಣಕಾಸು ಸಮೂಹಗಳಿಗೆ ಹೇಗೆ ನೂತನ ಸಚಿವಾಲಯವನ್ನು ತಳುಕು ಹಾಕಲಾಗುತ್ತದೆ ಎಂಬುದರ ಬಗ್ಗೆ ಸದ್ಯಕ್ಕೆ ಸ್ಪಷ್ಟತೆ ಇಲ್ಲ. ಇವುಗಳನ್ನು ಕೇಂದ್ರದ ಅಡಿಯಲ್ಲಿ ಬಹುರಾಜ್ಯ ಬ್ಯಾಂಕ್‌ಗಳ ಶಾಖೆಗಳನ್ನಾಗಿ ಪರಿವರ್ತಿಸಬಹುದು, ಇಲ್ಲವೇ ಒಂದು ಕೇಂದ್ರ ಸಹಕಾರಿ ಹಣಕಾಸು ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಇವುಗಳಿಗೆ ಹಣಕಾಸು ಒದಗಿಸಬಹುದು. ಅದಕ್ಕೆ ಕಾರ್ಯವಿಧಾನ ಅಸ್ಪಷ್ಟವಾಗಿದೆ.

ತಾಳ ಹಾಕುತ್ತಿರುವ ಆರ್‌ಬಿಐ

ಈ ನಡುವೆ ಕಳೆದ ವರ್ಷ ಜಾರಿಗೊಂಡ ಬ್ಯಾಂಕಿಂಗ್ ನಿಯಂತ್ರಣ ತಿದ್ದುಪಡಿಯಿಂದ ಬಲಗೊಂಡಿರುವ ಆರ್‌ಬಿಐ, ಪಿ.ಎ..ಸಿ. ಗಳು 'ಬ್ಯಾಂಕ್' ಎಂಬ ಶಿರೋನಾಮೆಯನ್ನು ಬಳಸುತ್ತಿರುವುದರ ವಿರುದ್ಧ ಸಹಕಾರಿಗಳ ರಿಜಿಸ್ಟ್ರಾರ್‌ಗೆ ನೋಟಿಸ್ ನೀಡಿದೆ. ಬ್ಯಾಂಕ್ ಶಿರೋನಾಮೆ ತೆಗೆದುಹಾಕಲ್ಪಟ್ಟರೆ, ಪಿ.ಎ.ಸಿ.ಗಳು ಚೆಕ್ ಹಾಳೆಗಳನ್ನು ನೀಡುವಂತಿಲ್ಲ ಮತ್ತು ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವಂತಿಲ್ಲ. ಕೇವಲ ಎ–ಕ್ಲಾಸ್ ಸದಸ್ಯರು ಮಾತ್ರ ಠೇವಣಿ ಇಡಬಹುದು.

ಎ–ಕ್ಲಾಸ್ ಅಲ್ಲದ ಸದಸ್ಯರು ಈವರೆಗೆ ಇಟ್ಟಿರುವ ಠೇವಣಿಗಳ ಮೊತ್ತ ಸುಮಾರು ರೂ. 60,000 ಕೋಟಿಯಷ್ಟಿದೆ. ಕೇರಳ ಬ್ಯಾಂಕ್‌ಪಿ.ಎ.ಸಿ.ಗಳ ಗ್ರಾಹಕರು ದರ್ಪಣ ಖಾತೆಗಳನ್ನು ಹೊಂದದಿರುವಂತೆ ಆರ್‌ಬಿಐ ನಿರ್ಬಂಧಿಸಬಹುದು. ಕೇರಳದ ಬಲಿಷ್ಟ ಸಹಕಾರಿ ಬ್ಯಾಂಕುಗಳನ್ನು ಹೆದರಿಸಲಾಗುತ್ತಿದೆ. ಬಿಜೆಪಿ ಹೊರತುಪಡಿಸಿ ಕೇರಳದ ಉಳಿದ ಎಲ್ಲಾ ರಾಜಕೀಯ ಪಕ್ಷಗಳು ವೈದ್ಯನಾಥನ್ ಸಮಿತಿಯು ಮೊದಲಿಗೆ ಸೂಚಿಸಿದ್ದ ಈ ಸುಧಾರಣೆಗಳನ್ನು ಒಗ್ಗಟ್ಟಾಗಿ ವಿರೋಧಿಸುತ್ತಿವೆ. ಮುಂದಿನ ದಿನಗಳಲ್ಲಿ ಇದೊಂದು ಬೃಹತ್ ಸಂಘರ್ಷದ ಕಣವಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

ಸಂಕ್ಷಿಪ್ತವಾಗಿ ಹೇಳುವುದಾದರೆ, ನೂತನ ಸಚಿವಾಲಯಕ್ಕೆ ತಾನಾಗಿಯೇ ಈಗಿರುವ ಸಹಕಾರಿ ಸಂರಚನೆಯನ್ನು ಕಡೆಗಣಿಸಲು ಸಾಧ್ಯವಾಗುವುದಿಲ್ಲ ಆದರೆ ಆರ್.ಬಿ.ಐ. ಇದಕ್ಕೆ ತಾಳ ಹಾಕುವಂತೆ ನಡೆದುಕೊಳ್ಳುತ್ತಿರುವುದರಿಂದ ಶಸ್ತ್ರಾಗಾರ ಮಾರಕವಾಗುತ್ತದೆ. ಇದು ಅಮಿತ್ ಶಾ ರಿಗೆ ಮತ್ತು ಇವರ ನೂತನ ಸಚಿವಾಲಯಕ್ಕೆ ತಮ್ಮ ಪರ್ಯಾಯ ಬಹು ರಾಜ್ಯ ಸಹಕಾರಿಗಳು ಮತ್ತದರ ಶಾಖೆಗಳ ಮೂಲಕ ಕೇರಳದ ಸಹಕಾರಿ ರಂಗಕ್ಕೆ ಪ್ರವೇಶಿಸಲು ಒಂದು ಅವಕಾಶ ಒದಗಿಸುತ್ತದೆ.

ಕೇರಳದ ಪರ್ಯಾಯವನ್ನು ಕಡೆಗಣಿಸುವುದು

ಕೇರಳದಲ್ಲಿ ಪಿ.ಎ.ಸಿ.ಗಳು ಸಾಲ ಚಟುವಟಿಕೆಗಳಷ್ಟೇ ಅಲ್ಲದೆ ಆರ್ಥಿಕತೆಯಲ್ಲಿ ಬಹಳ ಪ್ರಮುಖ ಪಾತ್ರ ನಿರ್ವಹಿಸುತ್ತಿವೆ. ಇವು ರೈತರಿಗೆ ಕೃಷಿ ಹೂಡುವಳಿ ಒದಗಿಸುತ್ತವೆ ಮತ್ತು ಕೃಷಿ ಉತ್ಪಾದನೆಗಳನ್ನು ಸಂಗ್ರಹಿಸಲು, ಸಂಸ್ಕರಿಸಲು ಮತ್ತು ಮಾರುವ ಹೆಚ್ಚಿನ ಜವಾಬ್ದಾರಿ ಹೊಂದಿವೆ. ಇವು ಸ್ಥಳೀಯ ಹಣಕಾಸು ಉಳಿತಾಯವನ್ನು ಸ್ಥಳೀಯ ಅಭಿವೃದ್ಧಿಗಾಗಿ ಸರಾಗವಾಗಿ ಒದಗಿಸುವ ಸಂಸ್ಥೆಗಳು. ಗ್ರಾಮದ ಅಭಿವೃದ್ಧಿಗೆ ಇರುವ ಸೂತ್ರವೆಂದರೆ ಪಂಚಾಯತಿ, ಸಾರ್ವಜನಿಕ ಶಾಲೆ ಮತ್ತು ಸ್ಥಳೀಯ ಸಹಕಾರಿ ಬ್ಯಾಂಕು ಎಂಬ ನೆಹರೂ ರವರ ಹೇಳಿಕೆ ಪ್ರಖ್ಯಾತವಾಗಿದೆ. ಕೇರಳ ರಾಜ್ಯವು ಕೃಷಿ ಮತ್ತು ಸಣ್ಣ ಉತ್ಪಾದಕ ಘಟಕಗಳ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಸೇವೆ ಒದಗಿಸಲು ಈ ವಿಕೇಂದ್ರೀಕೃತ ಅಭಿವೃದ್ಧಿ ಪಥ ಹಿಡಿದಿದೆ. ಈ ಯೋಜನೆಯಲ್ಲಿ ಸಹಕಾರಿ ಕ್ಷೇತ್ರವು ಒಂದು ವಿಶೇಷವಾದ ಪ್ರಮುಖ ಪಾತ್ರ ನಿರ್ವಹಿಸಬೇಕಿದೆ.

ದೀರ್ಘಕಾಲೀನ ಪ್ರಯತ್ನಗಳ ನಂತರ ರಾಜ್ಯದಲ್ಲಿರುವ ರಾಜ್ಯ ಮತ್ತು ಜಿಲ್ಲಾ ಸಹಕಾರಿ ಬ್ಯಾಂಕುಗಳನ್ನು ವಿಲೀನಗೊಳಿಸಿ ಒಂದು ಕೇರಳ ಬ್ಯಾಂಕ್ ಸ್ಥಾಪಿಸುವಲ್ಲಿ ಕೇರಳ ಯಶಸ್ವಿಯಾಯಿತು. ಸುಮಾರು ರೂ. 61,000 ಕೋಟಿ ಠೇವಣಿ ತಳಪಾಯ ಹೊಂದಿರುವ ಈ ಬ್ಯಾಂಕು ಕೇರಳದ ಎರಡನೇ ಅತಿ ದೊಡ್ಡ ಬ್ಯಾಂಕ್ ಆಗಿದೆ. ಆರ್‌ಬಿಐ ನ ಸಂಪೂರ್ಣ ನಿಯಂತ್ರಣ ಅಧಿಕಾರದಡಿಯಲ್ಲಿಯೇ ಕಾರ್ಯ ನಿರ್ವಹಿಸುತ್ತಲೇ, ಒಂದು ಶೆಡ್ಯೂಲ್ಡ್ ಬ್ಯಾಂಕ್ ಆಗಿ ಇದು ಸುಮಾರು 1.6 ಲಕ್ಷ ಕೋಟಿ ಠೇವಣಿ ತಳಪಾಯ ಹೊಂದಿರುವ ಪಿ.ಎ.ಸಿ. ಗಳಿಗೆ ಒಂದು ಮೇರು ಸಂಸ್ಥೆಯಾಗಿಯೇ ಇರುತ್ತದೆ. ಕಾರ್ಯತತ್ಪರತೆಯಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳದೆ ಇದು ಕೃಷಿ ಚಟುವಟಿಕೆಗಳಿಗೆ ಮಾತ್ರವಲ್ಲದೆ ಈಗ ಸ್ಥಾಪಿಸಲಾಗುತ್ತಿರುವ ಕೃಷಿ–ಉತ್ಪಾದಕ ಘಟಕಗಳಿಗೂ ಸಹ ಹಣಕಾಸು ಒದಗಿಸುವ ಪ್ರಮುಖ ಮೂಲವಾಗಿದೆ. ಇಂತಹ ಒಂದು ಪರ್ಯಾಯವನ್ನೇ ಕೇಂದ್ರ ಸರ್ಕಾರವು ಪ್ರತಿಬಂಧಿಸಲು ಹೊರಟಿದೆ. ○



ಪೆಗಾಸಸ್: ಸರ್ವಾಧಿಕಾರಶಾಹಿಯ ಸೈಬರ್ ಆಯುಧ



ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಖರೀದಿಸಿದ್ದನ್ನು ಮೆಕ್ಸಿಕೋ ಸರ್ಕಾರ ಒಪ್ಪಿಕೊಂಡಿದೆ.' ಆದರೆ 'ಕ್ರೊನೋಲಜಿ' ಸ್ಪಷ್ಟವಾಗಿದ್ದರೂ ಭಾರತ ಸರ್ಕಾರ ನಿರಾಕರಿಸುತ್ತಿದೆ. ಇಸ್ರೇಲ್‌ನ ಶಸ್ತ್ರಾಸ್ತ್ರಗಳಿಗೆ ಭಾರತವೇ ಅತಿ ದೊಡ್ಡ ಗಿರಾಕಿಯಾಗಿದ್ದು, ಆಂತರಿಕ ಭದ್ರತಾ ಉದ್ದೇಶಗಳಿಗೆ ಭಾರತಕ್ಕೆ ಇಸ್ರೇಲ್ ಮಹತ್ವದ ಉಪಕರಣಗಳು ಮತ್ತು ತಂತ್ರಜ್ಞಾನ ಒದಗಿಸುತ್ತಿದೆಯಾದ್ದರಿಂದ ಈ ಭಾರೀ ದುಬಾರಿಯಾದ ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಭಾರತದ ಯಾವ ಭದ್ರತಾ ಸಂಸ್ಥೆ ಬಳಸುತ್ತಿದೆ ಎನ್ನುವುದಷ್ಟೇ ಸ್ಪಷ್ಟವಾಗಬೇಕಿರುವ ವಿಷಯವಾಗಿದೆ. ಆದ್ದರಿಂದ ಒಂದು ಉನ್ನತ ಮಟ್ಟದ ತನಿಖೆ ನಡೆಸುವುದು ತೀರಾ ಅವಶ್ಯವಾಗಿದೆ. ಸುಪ್ರೀಂ ಕೋರ್ಟ್ ಇಂಥ ತನಿಖೆಯ ಮುತುವರ್ಜಿ ಮತ್ತು ಉಸ್ತುವಾರಿ ವಹಿಸಬೇಕು.



* ಪ್ರಕಾಶ್ ಕಾರಟ್

ದೇಶದ ರಾಜಕೀಯ ಕ್ಷೇತ್ರದಲ್ಲಿ ಅಲೋಲ ಕಲ್ಲೋಲಕ್ಕೆ ಕಾರಣವಾಗಿರುವ ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಹಗರಣ ಕೇವಲ ಜನರ ಖಾಸಗಿತ್ವದ ಉಲ್ಲಂಘನೆ ಅಥವಾ ಭದ್ರತಾ ಸಂಸ್ಥೆಗಳು ಕಾನೂನುಬಾಹಿರವಾಗಿ ಬೇಹುಗಾರಿಕೆ ನಡೆಸುವುದು ಅಥವ ಕದ್ದಾಲಿಸುವುದಷ್ಟಕ್ಕೆ ಸೀಮಿತವಾದ ಒಂದು ಪ್ರಕರಣವಲ್ಲ. ಅದಕ್ಕೂ ಹೆಚ್ಚಿನ ಆಯಾಮ ಅದಕ್ಕಿದೆ. ಪೆಗಾಸಸ್ ಮಿಲಿಟರಿ ಮಟ್ಟದ ಗೂಢಚರ್ಯೆ ತಂತ್ರಾಂಶ ಆಗಿದ್ದು ಕಣ್ಗಾವಲು ಮತ್ತು ಬೇಧನೆ(ಹ್ಯಾಕಿಂಗ್)ಯನ್ನು ಒಂದು ಹೊಸ ಮಟ್ಟಕ್ಕೇ ಒಯ್ಯುತ್ತದೆ. ಈ ವಿಶಾಲ ಚಿತ್ರ ಮಸುಕಾಗದಂತೆ ನೋಡಿಕೊಳ್ಳಬೇಕು.

ಪೆಗಾಸಸ್ ಬಳಕೆಯು ವಿಸ್ತೃತ ಸರ್ವಾಧಿಕಾರಶಾಹಿ ಸಂರಚನೆಯ ಭಾಗವಾಗಿದ್ದು ಕಳೆದ ಏಳು ವರ್ಷಗಳಿಂದ ಅದನ್ನು ರೂಪಿಸಲಾಗುತ್ತಿದೆ. ಅಂದರೆ ಸರ್ವಾಧಿಕಾರಶಾಹಿ ಹಿಂದುತ್ವ ಆಡಳಿತವನ್ನು ಸ್ಥಾಪಿಸಲು ಹಾಗೂ ಅದನ್ನು ಇನ್ನಷ್ಟು ಕ್ರೋಡೀಕರಿಸಲು ಯಾವ ಮಾರ್ಗವನ್ನದರೂ ಬಳಸಬಹುದು ಎನ್ನುವುದೇ ಇದರ ಸಾರಸರ್ವಸ್ವ ಸಂದೇಶವಾಗಿದೆ. ಕಾನೂನು ಬಾಹಿರ ಚಟುವಟಿಕೆ ತಡೆ ಕಾನೂನು(ಯುಎಪಿಎ), ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿಗಳ ಕಂಪ್ಯೂಟರ್‌ಗಳನ್ನು ಬೇಧಿಸಿ ಅವರ ವಿರುದ್ಧ ಸಾಕ್ಷಿ ಸೃಷ್ಟಿಸಲು ಕುತಂತ್ರಾಂಶವನ್ನು ಅವುಗಳಲ್ಲಿ ಹಾಕುವುದು, ಬೆದರಿಸಲು ಹಾಗೂ ಜೈಲಿಗೆ ಹಾಕಲು ಜಾರಿ ನಿರ್ದೇಶನಾಲಯ (ಇ.ಡಿ.) ಮತ್ತಿತರ ಕೇಂದ್ರೀಯ ಸಂಸ್ಥೆಗಳ ಬಳಕೆ ಮುಂತಾದ ಪ್ರಕರಣಗಳಂತೆ ಸಂಭಾವ್ಯ ರಾಜಕೀಯ ವಿರೋಧಿಗಳು ಮತ್ತು ಬೆದರಿಕೆಗಳ ವಿರುದ್ಧ ಪೆಗಾಸಸ್ ಒಂದು ಸೈಬರ್ ಆಯುಧವಾಗಿದೆ.

ಇಸ್ರೇಲ್ ಕಂಪನಿ ಎನ್‌ಎಸ್‌ಓ ತಯಾರಿಸಿರುವ ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಭಾರತದಲ್ಲಿ ಬಳಕೆ ಆಗಿರುವುದು ಏನನ್ನು ಸೂಚಿಸುತ್ತದೆ?. ಎನ್‌ಎಸ್‌ಓ ದತ್ತಾಂಶ ಭಂಡಾರದಿಂದ ಒಂದು ಫ್ರೆಂಚ್ ಎನ್‌ಜಿಓಗೆ ಸೋರಿಕೆ ಮಾಡಿರುವ ಜಗತ್ತಿನಾದ್ಯಂತದ 50,000 ಫೋನ್ ನಂಬರ್‌ಗಳಲ್ಲಿ ಸುಮಾರು 1,000 ಭಾರತದ್ದಾಗಿದೆ. ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಸ್ಥಾಪಿಸುವ ಸಂಭಾವ್ಯ ಗುರಿಗಳ ಪಟ್ಟಿಯಲ್ಲಿ ಅವರಿದ್ದಾರೆ. ಆ ಪೈಕಿ 300 ಸಂಖ್ಯೆಗಳನ್ನು ಪರಿಶೀಲಿಸಲಾಗಿದೆ. ಆ ಪಟ್ಟಿ ನೋಡಿದರೇ ಉದ್ದೇಶ ಸ್ಪಷ್ಟವಾಗುತ್ತದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ತೃಣ ಮೂಲ ಕಾಂಗ್ರೆಸ್ (ಟಿಎಂಸಿ) ನಾಯಕ ಅಭಿಷೇಕ್ ಬ್ಯಾನರ್ಜಿ ಹಸರು ಅದರಲ್ಲಿವೆ. ಕರ್ನಾಟಕದ ಹಿಂದಿನ ಕಾಂಗ್ರೆಸ್–ಜೆಡಿಎಸ್ ಮೈತ್ರಿಕೂಟ ಸರ್ಕಾರದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯ ಸಹಾಯಕರು, ಇಬ್ಬರು ಹಾಲಿ ಕೇಂದ್ರ ಸಚಿವರು (ಆ ಪೈಕಿ ಒಬ್ಬರು 2017ರಲ್ಲಿ ಎಂಪಿ ಕೂಡ ಆಗಿರಲಿಲ್ಲ) ಪಟ್ಟಿಯಲ್ಲಿದ್ದಾರೆ. 40 ಪತ್ರಕರ್ತರ ಹೆಸರುಗಳೂ ಇವೆ. ಭಾರತ ಚುನಾವಣೆ ಆಯೋಗದ ಒಬ್ಬ ಸದಸ್ಯ, ಉಮರ್ ಖಾಲಿದ್‌ರಂಥ ವಿದ್ಯಾರ್ಥಿ ಕಾರ್ಯಕರ್ತರು, ಒಬ್ಬ ರೈಲ್ವೆ ಟ್ರೇಡ್ ಯೂನಿಯನ್ ನಾಯಕ ಹೀಗೆ ಅನೇಕ ಜನರ ಹೆಸರುಗಳು ಅದರಲ್ಲಿವೆ.

ಉದ್ದೇಶ ಸುಸ್ಪಷ್ಟ

ಗೂಢಚರ್ಯೆ ತಂತ್ರಾಂಶದ ಉದ್ದೇಶ ಮತ್ತು ಬಳಕೆಯ ವಿನ್ಯಾಸವೇ ಅದರ ಕಾರ್ಯಸೂಚಿಯನ್ನು ಸ್ಪಷ್ಟಪಡಿಸುತ್ತದೆ. ಅಧಿಕಾರದಲ್ಲಿರುವವರನ್ನು ಉಳಿಸುವುದು ಮತ್ತು ಪ್ರತಿಪಕ್ಷಗಳನ್ನು ಅಸ್ಥಿರಗೊಳಿಸುವುದು, ಮಾಧ್ಯಮದಲ್ಲಿನ ತನಿಖಾತ್ಮಕ ದನಿಗಳ ಮೇಲೆ ಕಣ್ಗಾವಲು ಇಡುವುದು ಅದರ ಗುರಿಯಾಗಿದೆ.

ಅಂದಿನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ವಿರುದ್ಧ ಲೈಂಗಿಕ ಕಿರುಕುಳದ ದೂರು ನೀಡಿದ್ದ ಮಹಿಳೆ ಸಹಿತ 11 ವ್ಯಕ್ತಿಗಳ ಸಂಖ್ಯೆ ಕೂಡ ಇರುವುದು ಪ್ರಮುಖ ಹುದ್ದೆಯಲ್ಲಿರುವ ಯಾರನ್ನೋ ರಕ್ಷಿಸುವುದು ಉದ್ದೇಶ ಎಂಬುದನ್ನು ದೃಢಪಡಿಸುತ್ತದೆ. ಬಹುಶಃ ನ್ಯಾಯಾಂಗವನ್ನು ಮಂಡಿಯೂರುವಂತೆ ಮಾಡಲು ಆ ಮಾಹಿತಿಯನ್ನು ಬಳಸಿಕೊಳ್ಳುವ ಉದ್ದೇಶವೂ ಇರಬಹುದು.

ನರೇಂದ್ರ ಮೋದಿ ಆಡಳಿತದಲ್ಲಿ ಸಂಸದೀಯ ಸಂಸ್ಥೆಗಳ ಮಹತ್ವವನ್ನು ಕಡೆಗಣಿಸಲಾಗುತ್ತಿದೆ ಎಂಬ ಟೀಕೆ ಸರ್ವೇಸಾಮಾನ್ಯವಾಗಿದೆ. ಮೋದಿ ಪರವಾದ ಚುನಾವಣಾ ಆಯೋಗದ ಕೆಲವು ನಿರ್ಧಾರಗಳಿಗೆ ಭಿನ್ನಮತ ವ್ಯಕ್ತಪಡಿಸಿದ್ದ ಚುನಾವಣಾ ಆಯುಕ್ತ ಅಶೋಕ್ ಲವಾಸಾ ಅವರನ್ನು ಗುರಿ ಮಾಡಿರುವುದು, ಸಾಂವಿಧಾನಿಕ ಸಂಸ್ಥೆಗಳ ಅಧಿಕಾರಿಗಳಿಗೆ ಕಿರುಕುಳ ನೀಡಲು ಹಾಗೂ ಸಾಧ್ಯವಾದರೆ ಬ್ಲಾಕ್‌ಮೇಲ್ ಮಾಡಲು ಕೂಡ ಗೂಢಚರ್ಯೆ ತಂತ್ರಾಂಶವನ್ನು ಹೇಗೆ ಬಳಸಿಕೊಳ್ಳಲಾಗುತ್ತಿದೆ ಎನ್ನುವುದನ್ನು ತೋರಿಸುತ್ತದೆ.

ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಪಿತೂರಿಯ ಭಾಗವಾಗಿ ಪೆಗಾಸಸ್ ಈ ಎಲ್ಲ ಸಂಖ್ಯೆ ಹಾಗೂ ಹೆಸರುಗಳನ್ನು ಬಹಿರಂಗ ಪಡಿಸಿದೆ ಎಂದು ಮೋದಿ ಸರ್ಕಾರ ಇದನ್ನು ತಳ್ಳಿ ಹಾಕಿದೆ. ನಮ್ಮ "ಪ್ರಜಾಪ್ರಭುತ್ವಕ್ಕೆ ಮಸಿ ಬಳಿಯುವುದು" ಇದರ ಉದ್ದೇಶವಾಗಿದೆ ಎಂದಿದೆ. ಮಾಹಿತಿ ತಂತ್ರಜ್ಞಾನ ಸಚಿವ ವೈಷ್ಣವ್ ಸಂಸತ್‌ನಲ್ಲಿ ನೀಡಿದ ಹೇಳಿಕೆಯಲ್ಲಿ ಇಸ್ರೇಲಿ ಕಂಪನಿಯ ಎನ್‌ಎಸ್‌ಓದ ಒಂದು ಹೇಳಿಕೆಯನ್ನೇ ಸರ್ಕಾರದ ಸಮರ್ಥನೆಗೆ ಬಳಸಿಕೊಂಡು ಪಟ್ಟಿ ಆಧಾರರಹಿತ ಎಂದಿದ್ದಾರೆ. ಆದರೆ, ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಖರೀದಿಗೆ ಸರ್ಕಾರದ ಯಾವುದಾದರೂ ಸಂಸ್ಥೆ ಎನ್‌ಎಸ್‌ಓ ದಿಂದ ಗುತ್ತಿಗೆ ಪಡೆದಿತ್ತೇ ಎನ್ನುವುದನ್ನು ಸಚಿವರು ಸ್ಪಷ್ಟಪಡಿಸಿಲ್ಲ. ದೇಶದಲ್ಲಿ ಅನಧಿಕೃತವಾಗಿ ಕಣ್ಗಾವಲು ಇರಿಸಲು ಸಾಧ್ಯವಿಲ್ಲ ಎಂದಷ್ಟೇ ಸರ್ಕಾರ ಹೇಳಿದೆ.

ಎನ್‌ಎಸ್‌ಓದಿಂದ ಗೂಢಚರ್ಯೆ ತಂತ್ರಾಂಶ ಬಳಕೆಯಾಗುತ್ತಿರುವ ಬಗ್ಗೆ ತನಗೇನೂ ಗೊತ್ತಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಭಾರತದಲ್ಲಿ ಪೆಗಾಸಸ್ ಬಳಸಿ 121 ವ್ಯಕ್ತಿಗಳ ಫೋನ್‌ಗಳನ್ನು ಬೇಧಿಸಲಾಗಿದೆ ಎಂದು 2019ರಲ್ಲಿ ವಾಟ್ಸ್‌ಆ್ಯಪ್ ಹೇಳಿದ್ದಾಗಲೂ ಆ ಕುರಿತ ಮಾಹಿತಿ ತನಗಿಲ್ಲ ಎಂದು ಸರ್ಕಾರ ತಿಳಿಸಿತ್ತು. ಆ ಪೈಕಿ ಕೆಲವು ಸಂಖ್ಯೆಗಳು ಭೀಮಾ ಕೋರೆಗಾಂವ್ ಪ್ರಕರಣದ ಆರೋಪಿಗಳದ್ದಾಗಿತ್ತು.

ಮೋದಿ ಸರಕಾರದತ್ತವೇ ಬೆರಳು

'ಭಯೋತ್ಪಾದನೆ ಮತ್ತು ಗಂಭೀರ ಅಪರಾಧಗಳನ್ನು ತಡೆಯುವ ಏಕೈಕ ಉದ್ದೇಶದಿಂದ ಸರ್ಕಾರಿ ಬೇಹುಗಾರಿಕೆ ಹಾಗೂ ಕಾನೂನು ಅನುಷ್ಠಾನದ ಸಂಸ್ಥೆಗಳಿಗೆ ಮಾತ್ರವೇ ತನ್ನ ಉತ್ಪನ್ನಗಳ ಬಳಕೆಗೆ ಲೈಸೆನ್ಸ್ ನೀಡಲಾಗುತ್ತದೆ' ಎಂದು ಸ್ವತಃ ಸ್ಪೈವೇರ್ ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಸ್ಪಷ್ಟಪಡಿಸಿದೆ. ಇಸ್ರೇಲ್‌ನ ರಕ್ಷಣಾ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ರಕ್ಷಣಾ ರಫ್ತು ನಿಯಂತ್ರಣ ಸಂಸ್ಥೆಯ ಉಸ್ತುವಾರಿಯಲ್ಲಿ ಮಾತ್ರವೇ ಇಂಥ ಲೈಸೆನ್ಸ್ ನೀಡಲಾಗುತ್ತದೆ ಎನ್ನುವುದು ಕೂಡ ತಿಳಿದಿರುವ ವಿಚಾರವೇ ಆಗಿದೆ. ಆದ್ದರಿಂದ ಭಾರತದಲ್ಲಿ ಯಾವುದೇ ಖಾಸಗಿ ಸಂಸ್ಥೆ ಗೂಢಚರ್ಯೆ ತಂತ್ರಾಂಶ ಪಡೆದುಕೊಂಡಿರುವ ಸಾಧ್ಯತೆ ಇಲ್ಲವೇ ಇಲ್ಲ. ಇನ್ನೂ ಹೇಳಬೇಕೆಂದರೆ, ಎಚ್.ಡಿ. ಕುಮಾರಸ್ವಾಮಿಯ ಸಹಾಯಕನ ಅಥವಾ ಆದಿವಾಸಿಗಳನ್ನು ಅವರ ಜಮೀನಿನಿಂದ ಒಕ್ಕಲೆಬ್ಬಿಸಿದ್ದನ್ನು ಬಯಲು ಮಾಡಿದ ಜಾರ್ಖಂಡ್‌ನ ಒಬ್ಬ ಪತ್ರಕರ್ತನ ಫೋನ್ ನಂಬರ್ ಬಗ್ಗೆ ಯಾವ ವಿದೇಶಿ ಸರ್ಕಾರ ಅಥವಾ ಸಂಸ್ಥೆಗೆ ಆಸಕ್ತಿ ಇರುತ್ತದೆ ಹೇಳಿ ನೋಡೋಣ.

ನಿಸ್ಸಂಶಯವಾಗಿಯೂ ಮೋದಿ ಸರ್ಕಾರ ಮತ್ತು ಅದರ ಭದ್ರತಾ ಸಂಸ್ಥೆಗಳತ್ತಲೇ ಬೆರಳು ಹೋಗುತ್ತದೆ. ಇತರ ದೇಶಗಳಲ್ಲಿ ಸಾಕ್ಷ್ಯಗಳ ಹಾದಿಯನ್ನು ಗಮನಿಸಿದರೆ ಇದು ಇನ್ನಷ್ಟು ಸ್ಫುಟವಾಗುತ್ತದೆ. ಮೆಕ್ಸಿಕೋದಲ್ಲಿ ಸುಮಾರು 15,000 ಜನರ ಫೋನ್ ನಂಬರ್ ಮೇಲೆ ಗುರಿಯಿಟ್ಟಿದ್ದು, ಆ ಪೈಕಿ 50 ಜನರು ಹಾಲಿ ಅಧ್ಯಕ್ಷ ಮಾನ್ಯುಯೆಲ್ ಲೊಪೆಜ್ ಒಬ್ರೇಡರ್ ಅವರ ಆಪ್ತರಾಗಿದ್ದಾರೆ. ಅಧ್ಯಕ್ಷರ ಪತ್ನಿ, ಮಕ್ಕಳು, ಸಹಾಯಕರು ಮತ್ತು ವೈದ್ಯರು ಕೂಡ ಸೇರಿದ್ದಾರೆ. ಆದರೆ ಒಬ್ರೇಡರ್ 2017ರಲ್ಲಿ ಪ್ರಮುಖ ಪ್ರತಿಪಕ್ಷ ನಾಯಕನಾಗಿದ್ದಾಗ ತಯಾರಿಸಿದ್ದ ಪಟ್ಟಿಯಿದು.

2011ರಲ್ಲಿ ಮೊದಲಿಗೆ ರಕ್ಷಣಾ ಇಲಾಖೆ ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಖರೀದಿಸಿತ್ತು. ನಂತರ ರಾಷ್ಟ್ರೀಯ ಭದ್ರತಾ ಬೇಹುಗಾರಿಕೆ ಸಂಸ್ಥೆ ಮತ್ತಿತರ ಸರ್ಕಾರಿ ಭದ್ರತಾ ಸಂಸ್ಥೆಗಳು ಅದನ್ನು ಪಡೆದಿದ್ದವು ಎಂದು ಮೆಕ್ಸಿಕೊ ಸರ್ಕಾರ ದೃಢಪಡಿಸಿದೆ. ಪೆಗಾಸಸ್ ಗೂಢಚರ್ಯೆ ತಂತ್ರಾಂಶ ಖರೀದಿಸಿದ್ದನ್ನು ಮೆಕ್ಸಿಕೋ ಸರ್ಕಾರ ಒಪ್ಪಿಕೊಂಡಂತೆ ಕಾಣುತ್ತಿದೆ. ಆದರೆ ಅದನ್ನು ಒಪ್ಪಿಕೊಳ್ಳಲು ಭಾರತ ಸರ್ಕಾರ ನಿರಾಕರಿಸುತ್ತಿದೆ.

"ಕ್ರೊನೋಲಜಿ" ಸ್ಪಷ್ಟವಾಗಿದೆ

ಆದರೆ ವಿದ್ಯಮಾನಗಳ 'ಕಾಲಾನುಕ್ರಮಣಿಕೆ' (ಕ್ರೊನೋಲಜಿ) ತುಂಬಾ ಸ್ಪಷ್ಟವಾಗಿದೆ. ನರೇಂದ್ರ ಮೋದಿ 2017 ಜುಲೈನಲ್ಲಿ ಇಸ್ರೇಲ್‌ಗೆ ಭೇಟಿ ನೀಡಿದ್ದನ್ನು ಕೆಲವು ಮಾಧ್ಯಮದವರು ನೆನಪಿಸಿದ್ದಾರೆ. ಇಸ್ರೇಲ್‌ಗೆ ಭೇಟಿ ಕೊಟ್ಟ ಭಾರತದ ಮೊದಲ ಪ್ರಧಾನಿ ಮೋದಿ. ಸರಿಸುಮಾರು ಆ ವೇಳೆಗೆ, ಭಾರತದಲ್ಲಿ ಗೂಢಚರ್ಯೆ ತಂತ್ರಾಂಶ ಬಳಕೆಯಲ್ಲಿತ್ತು ಎಂದು ಹೇಳಲಾಗಿದೆ. ಆದರೆ ಮೋದಿ ಭೇಟಿಗೂ ಮುನ್ನ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಪ್ರಧಾನಿ ಮೋದಿ ಭೇಟಿಗೆ ರಂಗ ಸಜ್ಜುಗೊಳಿಸಲು ಮಾರ್ಚ್‌ನಲ್ಲಿ ಇಸ್ರೇಲ್‌ಗೆ ತೆರಳಿದ್ದರು. ಆಗಿನ 'ಕ್ರೊನೋಲಜಿ' ಗಮನಿಸಿದರೆ, 'ಭದ್ರತಾ' ಸಹಯೋಗಕ್ಕೆ ಆಗಲೇ ಹೊಸ ಹೆಜ್ಜೆಗಳನ್ನು ಚರ್ಚಿಸಲಾಗಿತ್ತು ಎನ್ನುವುದು ಗೊತ್ತಾಗುತ್ತದೆ. ದೋವಲ್‌ರ ಭೇಟಿ "ಭಯೋತ್ಪಾದನೆ ಮತ್ತು ಭದ್ರತಾ ಕ್ಷೇತ್ರದಲ್ಲಿ ಭಾರತ–ಇಸ್ರೇಲ್ ನಡುವೆ ಹೆಚ್ಚು ಕ್ರಿಯಾಶೀಲ, ಬಲಿಷ್ಠ ಬಾಂಧವ್ಯಕ್ಕೆ ರಂಗ ಸಜ್ಜುಗೊಳಿಸಿದೆ" ಎಂದು ಆಗ ಮಾಧ್ಯಮಗಳಲ್ಲಿ ಪ್ರಕಟವಾದ ಸರ್ಕಾರದ ಅಧಿಕೃತ ವಿವರ ತಿಳಿಸಿತ್ತು.

ಇಸ್ರೇಲ್‌ನ ಶಸ್ತ್ರಾಸ್ತ್ರಗಳಿಗೆ ಭಾರತವೇ ಅತಿ ದೊಡ್ಡ ಗಿರಾಕಿಯಾಗಿದೆ. ಆಂತರಿಕ ಭದ್ರತಾ ಉದ್ದೇಶಗಳಿಗೆ ಭಾರತಕ್ಕೆ ಇಸ್ರೇಲ್ ಮಹತ್ವದ ಉಪಕರಣಗಳು ಮತ್ತು ತಂತ್ರಜ್ಞಾನ ಒದಗಿಸುತ್ತಿದೆ. ಹಾಗಾಗಿ ಈ ಭಾರೀ ದುಬಾರಿಯಾದ ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಭಾರತದ ಯಾವ ಭದ್ರತಾ ಸಂಸ್ಥೆ ಬಳಸುತ್ತಿದೆ ಎನ್ನುವುದಷ್ಟೇ ಸ್ಪಷ್ಟವಾಗಬೇಕಿರುವ ವಿಷಯವಾಗಿದೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯ ರಕ್ಷಣೆ ಮತ್ತು ನಾಗರಿಕರ ಹಕ್ಕುಗಳ ರಕ್ಷಣೆ ದೃಷ್ಟಿಯಿಂದ ಕಾನೂನುಗಳನ್ನು ಮೀರಿ ಹೋದವರು, ಹಾಗೂ ಕಾನೂನಿನ ಎಲ್ಲ ಗಡಿಗಳನ್ನು ಉಲ್ಲಂಘಿಸಿದವರು ಯಾರು ಎಂದು ಹೊಣೆಯನ್ನು ನಿಗದಿಪಡಿಸುವುದು ಅತಿ ಅಗತ್ಯವಾಗಿದೆ. ಮೋದಿ ಸರ್ಕಾರ ಇದಕ್ಕೆ ನಿರಾಕರಿಸುವ ಮನೋಭಾವ ತೋರಿಸುತ್ತಿದೆ ಮತ್ತು ತಪ್ಪಿತಸ್ಥರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆಯಾದ್ದರಿಂದ ಒಂದು ಉನ್ನತ ಮಟ್ಟದ ತನಿಖೆ ನಡೆಸುವುದು ತೀರಾ ಅವಶ್ಯವಾಗಿದೆ. ಸುಪ್ರೀಂ ಕೋರ್ಟ್ ಇಂಥ ತನಿಖೆಯ ಮುತುವರ್ಜಿ ಮತ್ತು ಉಸ್ತುವಾರಿ ವಹಿಸಬೇಕು.

ಅನು: ವಿಶ್ವ

..ಉದ್ಯೋಗ......ಬಡತನ.....ಲಸಿಕೆ...

ಅರ್ಥವ್ಯವಸ್ಥೆ....ಪೆಟ್ರೋಲ್....ಭದ್ರತೆ...

ಸರ್,ಇದು ಒಂದು ಅಂತರ್‌ರಾಷ್ಟ್ರೀಯ ಪಿತೂರಿಯ ಹಾಗೆ ಕಾಣುತ್ತಿದೆ.



ವ್ಯಂಗ್ಯಚಿತ್ರ: ಸಂದೀಪ ಅಧ್ವರ್ಯು, ಟೈಂಸ್ ಆಫ್ ಇಂಡಿಯ





ಇದೇ ಜುಲೈ 1 ರಂದು ಚೀನಾದ ಕಮ್ಯುನಿಸ್ಟ್ ಪಕ್ಷ ಸ್ಥಾಪನೆಯಾಗಿ ನೂರು ವರ್ಷಗಳು ಸಂದಿವೆ. ಚೀನಾದಾದ್ಯಂತ ಇದನ್ನು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಅತ್ಯಂತ ಅವಮಾನಕರ ದುರ್ಭರ ಸ್ಥಿತಿಯಲ್ಲಿ ಜೀವಿಸುತ್ತಿದ್ದ ಚೀನಾದ ಜನತೆಯ ನಾಯಕನಾಗಿ ಈ ನೂರು ವರ್ಷಗಳಲ್ಲಿ, ಕಡು ಬಡತನ ನಿರ್ಮೂಲನ ಮಾಡಿ ಎಲ್ಲರಿಗೂ ಸಾಕಷ್ಟು ನೆಮ್ಮದಿಯ ಜೀವನ ಮಟ್ಟ ಒದಗಿಸಿದ, ಸಮೃದ್ಧವಾದ ಮತ್ತು ಎರಡನೆಯ ಅತಿ ದೊಡ್ಡ ಆರ್ಥಿಕತೆ ಉಳ್ಳ ದೇಶವಾಗಿಸಿದ ಈ ಸಂದರ್ಭದಲ್ಲಿ, ಈ ಪಕ್ಷದ ಇತಿಹಾಸ ಅರಿತುಕೊಳ್ಳುವುದು ಅಗತ್ಯ. ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸವನ್ನು ಸಾಮಾನ್ಯವಾಗಿ ನಾಲ್ಕು ಹಂತಗಳಾಗಿ ವಿಂಗಡಿಸಲಾಗುತ್ತದೆ. 1921-1934ರ ಮೊದಲ ಹಂತ ಪಕ್ಷ ಚೀನಾದ ಜನತೆಯ ನಾಯಕನಾಗಲು ಆಶಾದೀಪವಾಗಲು ನಡೆಸಿದ ಹಲವು ಪ್ರಯೋಗಗಳ ಏಳು-ಬೀಳುಗಳ ದೀರ್ಘ ಪಯಣದ ಹಂತ. ಎರಡನೆಯ ಹಂತ ಚೀನಾದ ಜನತೆಯ ಮನಗಳನ್ನು ಗೆದ್ದ ಪಕ್ಷವು, ಗಂಭೀರವಾಗಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗಿದ 1935-1949ರ ಅವಧಿ. ಕ್ರಾಂತಿಯ ನಂತರ ಸಮಾಜವಾದಿ ಸಮಾಜ ಕಟ್ಟುವತ್ತ ಹಲವು ಪ್ರಯೋಗಗಳಲ್ಲಿ ಕೆಲವು ಬಾರಿ ದಾರಿ ತಪ್ಪಿ ಅದನ್ನು ಸರಿಪಡಿಸಿಕೊಂಡು ಮುನ್ನಡೆದ 1950-1978ರ ಮೂರನೆಯ ಹಂತ. ಹಿಂದಿನ ಪ್ರಮಾದಗಳನ್ನು ಸರಿಪಡಿಸಿಕೊಂಡು ಆಧುನಿಕ ಸಮೃದ್ಧ ಸಮಾಜ ಕಟ್ಟುವುದರಲ್ಲಿ ಗಮನಾರ್ಹ ಯಶಸ್ಸು ಗಳಿಸಿದ 1979-2021ರ ನಾಲ್ಕನೆಯ ಹಂತ. ಈ ನಾಲ್ಕು ಹಂತಗಳಲ್ಲಿ ಪಕ್ಷದ ಇತಿಹಾಸವನ್ನು ಸ್ಥೂಲವಾಗಿ ಈ ಲೇಖನ ಸರಣಿಯಲ್ಲಿ ಕೊಡಲಾಗುತ್ತಿದೆ. ಮೊದಲ ಮೂರುಹಂತಗಳಇತಿಹಾಸದ ಸ್ಥೂಲ ನಿರೂಪಣೆಯನ್ನು ಕಳೆದ ಮೂರು ಸಂಚಿಕೆಗಳಲ್ಲಿ ಕೊಡಲಾಗಿದೆ. ನಾಲ್ಕನೆಯ ಮತ್ತು ಕೊನೆಯ ಹಂತದ ನಿರೂಪಣೆ ಇಲ್ಲಿದೆ.

ಚೀನಾ ಕಮ್ಯುನಿಸ್ಟ್ ಪಕ್ಷದ ಇತಿಹಾಸ ಹಂತ-4

ಆಧುನಿಕ ಸಮೃದ್ಧ ಸಮಸಮಾಜವನ್ನು ಕಟ್ಟುವತ್ತ

ಮೂಲ: ಆರ್.ಅರುಣ ಕುಮಾರ್
ಅನುವಾದ : ವಿಜಯ ಕುಮಾರ್

ಡಿಸೆಂಬರ್ 1978 ರಲ್ಲಿ ನಡೆದ ಚೀನಾ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಸಿ) ಹನ್ನೊಂದನೆಯ ಕೇಂದ್ರ ಸಮಿತಿಯ ಮೂರನೇ ಅಧಿವೇಶನವು ಐತಿಹಾಸಿಕವಾಗಿತ್ತು. ಈ ಸಭೆಯು ಎಡ ಮಾರ್ಗಚ್ಯುತಿಗಳನ್ನು ಸರಿಪಡಿಸಲು ಹಲವಾರು ಪ್ರಮುಖ ತೀರ್ಮಾನಗಳನ್ನು ಕೈಗೊಂಡಿತು. ಅಲ್ಲದೇ ಪಕ್ಷವನ್ನು ರಾಜಕೀಯವಾಗಿ ಮತ್ತು ಸಂಘಟನಾತ್ಮಕವಾಗಿ ಸರಿಯಾದ ದಾರಿಯಲ್ಲಿ ಹಿಂತಿರುಗಿಸುವ ಕಾರ್ಯಕ್ಕೆ ಮುಂದಾಯಿತು. ಇದನ್ನು ಚೀನಾಜನತಾ ಗಣರಾಜ್ಯ ರಚನೆಯ ನಂತರ ಸಾಧಿಸಲಾದ ಆರಂಭಿಕ ಪ್ರಗತಿಯ ಮೇಲೆ ಚೀನಾದ ಸಮಾಜವಾದಿ ನಿರ್ಮಾಣವು ಚೀನಾದ ಗುಣಲಕ್ಷಣಗಳಿಗೆ ಅನುಗುಣವಾಗಿರುತ್ತದೆ ಎಂದು ಸಿ.ಪಿ.ಸಿ ಯು ನಿರ್ಧರಿಸಿತು. ಸಮಾಜವಾದಿ ದಾರಿ, ಜನತೆಯ ಪ್ರಜಾಸತ್ತಾತ್ಮಕ ಸರ್ವಾಧಿಕಾರ, ಕಮ್ಯೂನಿಸ್ಟ್ ಪಕ್ಷದ ನಾಯಕತ್ವ ಮತ್ತು ಮಾರ್ಕ್ಸ್‌ವಾದ-ಲೆನಿನ್‌ವಾದ ಹಾಗೂ ಮಾವೋ-ತ್ಸೆ-ತುಂಗ್ ರವರ ವಿಚಾರಧಾರೆ - ಈ ನಾಲ್ಕು ಪ್ರಧಾನ ತತ್ವಗಳಿಗೆ ಬದ್ಧತೆಗೆ ಪಕ್ಷತನ್ನನ್ನು ಸಮರ್ಪಿಸಿಕೊಂಡಿತು. ಚೀನಾವು ಇನ್ನೂ ಸಮಾಜವಾದಿ ನಿರ್ಮಾಣದ ಪ್ರಾಥಮಿಕ ಘಟ್ಟದಲ್ಲಿದೆ ಎಂದು ಸಿ.ಪಿ.ಸಿ ಅಂದಾಜಿಸಿತು. ಪ್ರತಿಯೊಂದು ಘಟ್ಟದಲ್ಲೂ ಹಲವಾರು ಹಂತಗಳಿವೆ ಎಂದು ಅದು ಹೇಳಿತು. ಸಮಾಜವಾದಿ ನಿರ್ಮಾಣದ ಪ್ರಾಥಮಿಕ ಘಟ್ಟದ ರಚನೆಗೆ ಹಲವು ದಶಕಗಳೇ ಬೇಕಾಗಬಹುದು ಎಂದು ತೀರ್ಮಾನಿಸಿತು. "ಇದನ್ನು ಸಾಧಿಸಲು ನಮ್ಮ ಆರ್ಥಿಕತೆಯನ್ನು ವಿದೇಶಿ ಹೂಡಿಕೆಗೆ ತೆರೆಯುವ ಮೂಲಕ ಸುಧಾರಿಸಬೇಕು. ನಾವು ಸ್ವಾವಲಂಬನೆಯ ಆಧಾರದ ಮೇಲೆ ವಿಶ್ವದ ಇತರ ದೇಶಗಳೊಂದಿಗೆ ಸಮಾನ ಮತ್ತು ಪರಸ್ಪರ ಲಾಭದಾಯಕ ಆರ್ಥಿಕ ಸಹಕಾರವನ್ನು ಬೆಳೆಸಿಕೊಳ್ಳಬೇಕು. ಸುಧಾರಿತ ತಂತ್ರಜ್ಞಾನಗಳು ಮತ್ತು ಸಾಧನಗಳನ್ನು ವಿದೇಶದಿಂದ ಪರಿಚಯಿಸಬೇಕು ಮತ್ತು ಅಧುನೀಕರಣಕ್ಕೆ ಅಗತ್ಯವಾದ ವಿಜ್ಞಾನ ಹಾಗೂ ಶಿಕ್ಷಣದಲ್ಲಿ ಕೆಲಸವನ್ನು ಸುಧಾರಿಸಲು ಹೆಚ್ಚಿನ ಪ್ರಯತ್ನಗಳನ್ನು ಮಾಡಬೇಕು."

ಆರ್ಥಿಕತೆಯನ್ನು ವಿದೇಶಿ ಹೂಡಿಕೆಗೆ ತೆರೆಯುವುದು

1979 ರಲ್ಲಿ, ಪ್ರಭುತ್ವದ ನಾಯಕತ್ವದ ಅಡಿಯಲ್ಲಿ ಹೊಸ ಹಣಕಾಸು ನಿರ್ವಹಣೆಯ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ನಡೆಸಲು -ಶೆನ್‌ಜೆನ್ ಮತ್ತು ಝುಹಾಯಿ ಗಳಲ್ಲಿ ವಿಶೇಷ ರಫ್ತು ವಲಯಗಳೊಂದಿಗೆ- ಗುವಾನ್‌ಡೊಂಗ್ ಮತ್ತು ಫುಜಿಯನ್ ಪ್ರಾಂತ್ಯಗಳನ್ನು ಆರಿಸಲಾಯಿತು.

ಸಿ.ಪಿ.ಸಿ ಯು ತ್ವರಿತ ಫಲಿತಾಂಶಗಳಿಗಾಗಿ ಅತಿಯಾದ ಆತಂಕಕ್ಕೊಳಗಾಗುವ ತಪ್ಪು ಪ್ರವೃತ್ತಿಯನ್ನು ಸರಿಪಡಿಸಿತು ಮತ್ತು ಆರ್ಥಿಕತೆಯ ಪ್ರಮುಖ ಶಾಖೆಗಳ ನಡುವಿನ ಗಂಭೀರ ಅಸಮತೋಲನದ ಸಮಸ್ಯೆಯನ್ನು ಸರಿಪಡಿಸಲು ಪ್ರಾರಂಭಿಸಿತು. ಇದು ಆರ್ಥಿಕ ಕ್ಷೇತ್ರಗಳ ಅನುಪಾತವನ್ನು ಮರುಹೊಂದಿಸಲು ಮತ್ತು ಅತಿಯಾಗಿ ಕೇಂದ್ರೀಕೃತವಾದ ಆರ್ಥಿಕ ನಿರ್ವಹಣಾಸಂರಚನೆಯನ್ನು ಸುಧಾರಿಸಲು ಕ್ರಮಗಳನ್ನು ತೆಗೆದುಕೊಂಡಿತು.

ಕೃಷಿಯನ್ನು ಆಧುನೀಕರಣಗೊಳಿಸಲು ರೈತರಿಗೆ ಭೌತಿಕ ಸವಲತ್ತುಗಳನ್ನು ಖಾತ್ರಿಗೊಳಿಸುವ, ಅವರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಖಚಿತಪಡಿಸುವ ಮತ್ತು ತಾಂತ್ರಿಕ ಸಾಧನಗಳೂ ಒಳಗೊಂಡಂತೆ ಪರಿಣಾಮಕಾರಿ ಭೌತಿಕ ಬೆಂಬಲವನ್ನು ಒದಗಿಸುವ ತೀರ್ಮಾನವನ್ನುಸಿ.ಪಿ.ಸಿ ಯು ಕೈಗೊಂಡಿತು. ಧಾನ್ಯಗಳ ಉತ್ಪಾದನೆಯಲ್ಲದೆ ಕೃಷಿ, ಅರಣ್ಯ, ಪಶುಸಂಗೋಪನೆ, ಪೂರಕ ಕಿರು ಉತ್ಪಾದನೆ ಮತ್ತು ಮೀನುಗಾರಿಕೆಯನ್ನು ಪ್ರೋತ್ಸಾಹಿಸಲಾಯಿತು.

'ಕುಟುಂಬ ಗುತ್ತಿಗೆ ಜವಾಬ್ದಾರಿ ವ್ಯವಸ್ಥೆ'ಯು, ರೈತರಿಗೆ ಗ್ರಾಮೀಣ ಸಾಮೂಹಿಕ ಭೂಮಿಯನ್ನು ದೀರ್ಘಕಾಲೀನ ಒಪ್ಪಂದಗಳ ಮೂಲಕ ಕೃಷಿಗೆ ಬಳಸಲು ಮತ್ತು ತೆರಿಗೆ ಪಾವತಿಯ ನಂತರ ಉತ್ಪನ್ನಗಳನ್ನು ಉಳಿಸಿಕೊಳ್ಳಲು ಅವಕಾಶ ನೀಡಿತು. ಇದು ಉತ್ಪಾದಕತೆಯನ್ನು ವೃದ್ಧಿಸಿತು ಮತ್ತು ಕೃಷಿಯ ಉತ್ಪಾದನೆಯನ್ನು ಹೆಚ್ಚಿಸಿತು. ಇದು ಕೈಗಾರಿಕೀಕರಣ ಮತ್ತು ನಗರೀಕರಣಕ್ಕೆ ದಾರಿ ಮಾಡಿಕೊಟ್ಟಿತು.

ಸಿ.ಪಿ.ಸಿ ಯು ಅಂತರ್ರಾಷ್ಟ್ರೀಯ ಸಂಬಂಧಗಳಲ್ಲಿ ಅಧಿಪತ್ಯದ ಪ್ರವೃತ್ತಿಗಳನ್ನು ವಿರೋಧಿಸಲು, ವಿಶ್ವಶಾಂತಿಯನ್ನು ಕಾಪಾಡಲು ಮತ್ತು ಮಾತೃಭೂಮಿಯ ಪುನರ್-ಏಕೀಕರಣಕ್ಕಾಗಿ ಶ್ರಮಿಸಲು ನಿರ್ಧರಿಸಿತು. ಈ ಉದ್ದೇಶಗಳ ಈಡೇರಿಕೆಗೆ ನಾಲ್ಕು ಅಂಶಗಳಿಗೆ ಡೆಂಗ್‌ಕ್ಸಿಯಾವೋ ಪಿಂಗ್ ಒತ್ತು ನೀಡುತ್ತಾರೆ. ಒಂದು ದೃಢ ಮತ್ತು ಸುಸಂಗತವಾದ ರಾಜಕೀಯ ಮಾರ್ಗ; ಎರಡನೆಯದು ರಾಜಕೀಯ ಸ್ಥಿರತೆ ಮತ್ತು ಐಕ್ಯತೆ; ಮೂರನೆಯದು ಕಠಿಣ ಶ್ರಮ ವಹಿಸುವ ಕಾರ್ಯಕರ್ತರು ಮತ್ತು ಪ್ರವರ್ತಕ ಮನೋಭಾವ; ನಾಲ್ಕನೆಯದು ಸಮಾಜವಾದಿ ದೃಷ್ಟಿಕೋನ, ವೃತ್ತಿಪರ ಜ್ಞಾನ ಮತ್ತು ಸಕ್ಷಮತೆಗಳೊಂದಿಗೆ ನಿರಂತರ ಕ್ರಿಯಾಶೀಲರಾಗಿರುವ ಕಾರ್ಯಕರ್ತರ ಸಮೂಹ.

ಪಕ್ಷವನ್ನು ಬಲಪಡಿಸಲು ಸಂಘಟನಾ ಕ್ರಮಗಳನ್ನು ಕೈಗೊಳ್ಳಲಾಯಿತು. ಕ್ರಿಯಾಶೀಲ ಕಾರ್ಯಕರ್ತರು ಬೂರ್ಜ್ವಾ ಸಿದ್ಧಾಂತದಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವಂತೆ ಮತ್ತು ಉಳಿದ ಊಳಿಗಮಾನ್ಯ ಪ್ರಭಾವಗಳಿಂದ ಮುಕ್ತರಾಗಬೇಕೆಂದು ಹೇಳಲಾಯಿತು. ಪ್ರಮುಖ ಹುದ್ದೆಗಳಲ್ಲಿ ವಸ್ತುತಃ ಅಜೀವ ಪರ್ಯಂತ ಅವಧಿಯನ್ನು ರದ್ದು ಗೊಳಿಸಲಾಯಿತು. ಮತ್ತು ತಮಗೆ ನಿರ್ವಹಿಸಲಾದಜವಾಬ್ದಾರಿಗಳನ್ನು ಪೂರೈಸಲು ಕಾರ್ಯಕರ್ತರನ್ನು 'ಇನ್ನಷ್ಟು ಹೆಚ್ಚು ಕ್ರಾಂತಿಕಾರಕ, ಸುಶಿಕ್ಷಿತರಾದಮತ್ತು ಉತ್ತಮ ವಿದ್ಯಾರ್ಹತೆಯಿರುವ ಕಾರ್ಯಕರ್ತರು ಹಾಗೂ ಇನ್ನಷ್ಟು ಹೆಚ್ಚು ಯುವ ಕಾರ್ಯಕರ್ತರು ಇರುವಂತೆ ಮಾಡಲು ನಿರ್ಧರಿಸಲಾಯಿತು. ಕ್ರಾಂತಿಯ ಅನೇಕ ಹಿರಿಯ ನಾಯಕರನ್ನು ಅವರ ವಯಸ್ಸಿನ ಕಾರಣದಿಂದಾಗಿ ಕರ್ತವ್ಯ ಮುಕ್ತಗೊಳಿಸಲಾಯಿತು ಮತ್ತು ಯುವ ಕಾರ್ಯಕರ್ತರಿಗೆ ಕ್ರಮೇಣವಾಗಿ ಬಡ್ತಿ ನೀಡಲಾಯಿತು. ಸಮಾಜವಾದಿ ಪ್ರಜಾಪ್ರಭುತ್ವವನ್ನು ಆಳಗೊಳಿಸಲು ಕೌಂಟಿ (ಜಿಲ್ಲಾ) ಮಟ್ಟದಲ್ಲಿ ನೇರ ಚುನಾವಣೆಗಳನ್ನು 1981 ರಲ್ಲಿ ದೇಶವ್ಯಾಪಿ ಜಾರಿ ಮಾಡಲಾಯಿತು.

'ಒಂದು ದೇಶ, ಎರಡು ವ್ಯವಸ್ಥೆ'

ಸಿ.ಪಿ.ಸಿ ಯು 1981ರಲ್ಲಿ 'ಒಂದು ದೇಶ, ಎರಡು ವ್ಯವಸ್ಥೆ' ಎನ್ನುವ ಪರಿಕಲ್ಪನೆಯಡಿ ಹಾಂಗ್‌ಕಾಂಗ್, ಮಕಾವು ಮತ್ತು ತೈವಾನ್‌ಗಳನ್ನು ಚೀನಾದೊಂದಿಗೆ ಒಂದಾಗಿಸಲು ಪ್ರಯತ್ನಗಳನ್ನು ಪ್ರಾರಂಭಿಸಿತು. ಚೀನಾ 1997 ರಲ್ಲಿ ಹಾಂಗ್‌ಕಾಂಗ್ ಮತ್ತು 1999 ರಲ್ಲಿ ಮಕಾವು ಮೇಲೆ ತನ್ನ ಸಾರ್ವಭಾಮತೆಯನ್ನು ಪುನರ್ ಸ್ಥಾಪಿಸಿತು.

1982 ರಲ್ಲಿ ಸಿ.ಪಿ.ಸಿ ಯು ಆರ್ಥಿಕತೆಯನ್ನು ತೆರೆಯುವ, ದೇಶ ಮತ್ತು ವಿದೇಶಗಳಲ್ಲಿ ಲಭ್ಯವಿರುವ

ಪುಟ 10 ಕ್ಕೆ







ಕಾಂ.ಎನ್. ಶಂಕರಯ್ಯ ಶತಾಯುಷಿ ಸ್ವಾತಂತ್ರ್ಯ ಹೋರಾಟಗಾರ

೯೦ ವರ್ಷಗಳ ಹಿಂದೆ ಭಗತ್‌ಸಿಂಗ್ ರವರ ಬಲಿದಾನದಿಂದ ಪ್ರೇರಣೆ ಪಡೆದು ಹೋರಾಟಕ್ಕೆ ಧುಮುಕಿ ಮುಂದೆ ದುಡಿಯುವ ಜನಗಳ ಹಲವಾರು ಹೋರಾಟಗಳಿಗೆ, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಯಾಗಿ, ಅಧ್ಯಕ್ಷರಾಗಿ, ಸಿಪಿಐ(ಎಂ) ತಮಿಳುನಾಡು ಕಾರ್ಯದರ್ಶಿಯಾಗಿ ಹಾಗೂ ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯರಾಗಿ ನೇತೃತ್ವ ನೀಡಿರುವ ಕಾಂ. ಎನ್. ಶಂಕರಯ್ಯ ಇದೇ ಜುಲೈ 15ರಂದು ತಮ್ಮ ಹೋರಾಟಮಯ ಬದುಕಿನ ನೂರನೇ ವರ್ಷಕ್ಕೆ ಕಾಲಿಟ್ಟಿದ್ದಾರೆ, ೯ ವರ್ಷದ ಬಾಲಕನ ಆ ಚೇತನವನ್ನು ಈಗಲೂ ಹಾಗೆಯೇ ಉಳಿಸಿಕೊಂಡಿದ್ದಾರೆ.

ಅವರ ಹೋರಾಟಗಳ ಬದುಕಿನ ಒಂದು ನೋಟ–ಜುಲೈ 15, 2020ರಂದು 'ಪೀಪಲ್ಸ್ ಆರ್ಕೈವ್ ಆಫ್ ರೂರಲ್ ಇಂಡಿಯ'ದಲ್ಲಿ ಪ್ರಕಟವಾದ ಪಿ.ಸಾಯಿನಾಥ್ ಅವರ ಲೇಖನ ಮತ್ತು ಜುಲೈ 18, 2021ರ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಪ್ರಕಟವಾಗಿರುವ ಜಿ.ರಾಮಕೃಷ್ಣನ್ ಅವರ ಲೇಖನದಿಂದ.

ಸಂಗ್ರಹಾನುವಾದ: ಟಿ.ಸುರೇಂದ್ರ ರಾವ್

ಭಗತ್ ಸಿಂಗ್‌ರನ್ನು ನೇಣುಗಂಬಕ್ಕೆ ಏರಿಸಿದ ದಿನ– ತಮಿಳುನಾಡಿನ ಹಲವಾರು ಕಡೆಗಳಲ್ಲಿ ಜನರು ಭಾವಾವೇಶದಿಂದ ಕಣ್ಣೀರಿಟ್ಟಿದ್ದರು. ಆಕ್ರೋಶದಿಂದ ಪ್ರತಿಭಟನೆಗೆ ಇಳಿದಿದ್ದರು. ತೂತುಕ್ಕುಡಿ ಪಟ್ಟಣದಲ್ಲಿ ಬೀದಿ ಬೀದಿಗಳಲ್ಲಿ ಜನಜಂಗುಳಿ ನೆರೆದಿತ್ತು. ಆಗ ಆ ಪ್ರತಿಭಟನೆಗೊಬ್ಬ ಪುಟ್ಟ ಹುಡುಗ ಓಡಿ ಬಂದು ಸೇರಿಕೊಂಡ. ಆಗ ಅವನಿಗೆ ಕೇವಲ ಒಂಭತ್ತು ವರ್ಷ. ಆ ಬಾಲಕ, ಎನ್.ಶಂಕರಯ್ಯ ಈ ಜುಲೈ 15ರಂದು ತಮ್ಮ ಕ್ರಾಂತಿಕಾರಿ, ಹೋರಾಟಮಯ ಬದುಕಿನ ನೂರನೇ ವರ್ಷಕ್ಕೆ ಕಾಲಿಟ್ಟಿದ್ದಾರೆ.

ಈ ಇಳಿವಯಸ್ಸಿನಲ್ಲಿಯೂ ಕೆಚ್ಚೆದೆಯ ಕಿಡಿ ಹಾಗೂ ಚೇತನ ಅವರಲ್ಲಿ ತುಂಬಿ ತುಳುಕುತ್ತಿದೆ. ಆ ಧೈರ್ಯ ಶೌರ್ಯಗಳೇ ಅವರನ್ನು ಸ್ವಾತಂತ್ರ್ಯ ಹೋರಾಟಗಾರನನ್ನಾಗಿಸಿತು; ಭೂಗತ ಕ್ರಾಂತಿಕಾರಿಯನ್ನಾಗಿಸಿತು; ಒಬ್ಬ ಬರಹಗಾರ, ಉತ್ತಮ ವಾಗ್ಮಿ ಹಾಗೂ ಪ್ರಖರ ಮೇಧಾವಿಯನ್ನಾಗಿಸಿತ್ತು ಕೂಡ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ ಕಾರಣ ತಮ್ಮ ಪದವಿ(ಬಿ.ಎ.) ಪರಿಕ್ಷೇಯಲ್ಲಿ ಭಾಗವಹಿಸಲಾಗದಿದ್ದಾಗ್ಯೂ, ಅವರು ಅನೇಕ ರೀತಿಯ ವಿಶ್ಲೇಷಣೆಗಳನ್ನು, ಹೊತ್ತಿಗೆಗಳನ್ನು, ಕರಪತ್ರಗಳನ್ನು ಹಾಗೂ ಪತ್ರಿಕಾ ಲೇಖನಗಳನ್ನು ಬರೆದಿದ್ದಾರೆ.

1941 ರಲ್ಲಿ ಪರೀಕ್ಷೆಗೆ ಕೇವಲ ಎರಡು ವಾರಗಳಿದ್ದಾಗ ಮಧುರೈನ ಅಮೆರಿಕನ್ ಕಾಲೇಜಿನಲ್ಲಿ ಬಿ.ಎ. (ಇತಿಹಾಸ) ಅಧ್ಯಯನ ಮಾಡುತ್ತಿದ್ದ ಶಂಕರಯ್ಯ ಬ್ರಿಟಿಷ್ ಆಳರಸರ ವಿರುದ್ಧದ ಚಳುವಳಿಯಲ್ಲಿ ಕ್ರಿಯಾಶೀಲರಾಗಿದ್ದರು. ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗುವುದರ ಜತೆಯಲ್ಲೇ ಕ್ಯಾಂಪಸ್‌ನಲ್ಲಿ ಕವಿಗಳ ಸಂಘ ರಚಿಸಿದ್ದರು. ಕಾಲೇಜಿನ ವಿದ್ಯಾರ್ಥಿ ಸಂಘದಲ್ಲಿ ಸಹ ಕಾರ್ಯದರ್ಶಿಯಾಗಿ ಸಕ್ರಿಯರಾಗಿದ್ದರು. ಅದೇ ಸಮಯದಲ್ಲಿ ಎಡಪಂಥೀಯ ಸಿದ್ಧಾಂತದ ಅನೇಕರ ಜತೆ ಸ್ನೇಹ ಸಂಪಾದನೆ ಮಾಡಿದ್ದರು. ಭಾರತಕ್ಕೆ ವಿಮೋಚನೆ ದೊರಕದೇ ಸಾಮಾಜಿಕ ಸುಧಾರಣೆ ಸಂಪೂರ್ಣವಾಗದು ಎಂದು ಸ್ಪಷ್ಟ ತಿಳುವಳಿಕೆ ಅವರದ್ದಾಗಿತ್ತು.

1941 ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಮೀನಾಕ್ಷಿಯನ್ನು ಬ್ರಿಟಿಷ್ ವಿರೋಧಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾರಣ ಬಂಧಿಸಲಾಗಿತ್ತು. ಅದನ್ನು ಖಂಡಿಸಲು ಮಧುರೈನಲ್ಲಿ ಒಂದು ಸಭೆ ನಡೆಸಲಾಯಿತು. "ಒಂದು ಕರಪತ್ರ ಹೊರತಂದೆವು. ನಮ್ಮ ಹಾಸ್ಟೆಲ್ ಕೊಠಡಿಗಳನ್ನು ತಪಾಸಣೆಗೆ ಒಳಪಡಿಸಲಾಯಿತು. ನಮ್ಮ ಗೆಳೆಯ ನಾರಾಯಣಸ್ವಾಮಿಯನ್ನು ಕರಪತ್ರ ಹೊಂದಿದ್ದ ಕಾರಣಕ್ಕಾಗಿ ಬಂಧಿಸಲಾಯಿತು. ಆ ನಂತರ ಆ ಬಂಧನವನ್ನು ಖಂಡಿಸಲು ಕೂಡ ನಾವು ಸಭೆ ನಡೆಸಿದೆವು. ಅದಾದ ಸ್ವಲ್ಪ ದಿನಗಳಲ್ಲೇ, ಫೆಬ್ರವರಿ 28, 1941 ರಂದು ನನ್ನನ್ನೂ ಬಂಧಿಸಿದರು. ನನ್ನ ಪದವಿಯ ಅಂತಿಮ ಪರೀಕ್ಷೆ ಕೇವಲ 15 ದಿನಗಳಲ್ಲಿ ನಡೆಯುವುದಿತ್ತು. ಎಂದಿಗೂ ನಾನು ಹಿಂತಿರುಗಲಿಲ್ಲ, ಮತ್ತೆಂದಿಗೂ ನನ್ನ ಪದವಿ ಪೂರ್ಣಗೊಳಿಸಲಾಗಲಿಲ್ಲ" ಎನ್ನುತ್ತಾರೆ ದಶಕಗಳ ನಂತರ ಆ ಕುರಿತು ನೆನಪು ಮಾಡಿಕೊಂಡ ಶಂಕರಯ್ಯ, "ಭಾರತದ ಸ್ವಾತಂತ್ರ್ಯಕ್ಕಾಗಿ ಜೈಲಿಗೆ ಹೋಗಿದ್ದರ ಬಗ್ಗೆ, ಸ್ವಾತಂತ್ರ್ಯ ಚಳುವಳಿಯ ಭಾಗವಾಗಿದ್ದರ ಬಗ್ಗೆ ಹೆಮ್ಮೆಯಾಗುತ್ತದೆ. ನಮ್ಮ ತಲೆ ತುಂಬಾ ಅದೇ ತುಂಬಿಕೊಂಡಿತ್ತು. ನಾವು ಉದ್ಯೋಗ ಅರಸುವವರಲ್ಲ, ಸ್ವಾತಂತ್ರ್ಯವನ್ನು ಅರಸುವವರು ಎಂಬ ಯುವಜನರ ಘೋಷಣೆಗೆ ಅನುಗುಣವಾಗಿ ನಮ್ಮ ವಿದ್ಯಾರ್ಥಿ ಜೀವನ ಹಾಳಾಗಿದ್ದರ ಬಗ್ಗೆ ನಮಗೆ ಬೇಸರವೆನಿಸಲಿಲ್ಲ" ಎಂದಿದ್ದಾರೆ.

ಮಧುರೆಯ ಜೈಲಿನಲ್ಲಿ 15 ದಿನಗಳು ಕಳೆದ ಮೇಲೆ, ಬಂಧಿತ ವಿದ್ಯಾರ್ಥಿಗಳನ್ನು ವೆಲ್ಲೂರು ಜೈಲಿಗೆ ಕಳುಹಿಸಿದರು. ಅಲ್ಲಿ ತಮಿಳುನಾಡು, ಆಂಧ್ರಪ್ರದೇಶ, ಕೇರಳ ರಾಜ್ಯಗಳ ಹಲವಾರು ಹೋರಾಟಗಾರರ ಪರಿಚಯವಾಯಿತು. ಕೇರಳದ ಖ್ಯಾತ ಕಮ್ಯುನಿಸ್ಟ್ ಹೋರಾಟಗಾರ ಎ.ಕೆ. ಗೋಪಾಲನ್, ಇಂಬಿಚ್ಚಿ ಭಾವ, ವಿ. ಸುಬ್ಬಯ್ಯ, ಜೀವನಾನಂದಂ ಅವರನ್ನು ಕೂಡ ಬಂಧಿಸಲಾಗಿತ್ತು. ಮದರಾಸು ಸರ್ಕಾರವು ಕೈದಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಲು ಬಯಸಿತ್ತು. ಅದರಲ್ಲಿ ಒಂದು ಗುಂಪಿಗೆ 'ಸಿ' ದರ್ಜೆಯ ರೇಷನ್ ಕೊಡುವುದಾಗಿತ್ತು, ಆ ರೀತಿಯಲ್ಲಿ ಸಾಮಾನ್ಯವಾಗಿ ಅಪರಾಧಿಗಳಿಗೆ ಮಾತ್ರ ಕೊಡಲಾಗುತ್ತಿತ್ತು. ಇದರ ವಿರುದ್ಧ ಜೈಲಿನಲ್ಲೇ 19 ದಿನಗಳ ಉಪವಾಸ ಮುಷ್ಕರ ನಡೆಯಿತು. ಉಪವಾಸ ಮುಷ್ಕರದ 10ನೇ ದಿನ ಜೈಲಿನ ಇನ್ಸ್‌ಪೆಕ್ಟರ್ ಜನರಲ್ ಈ ವಿದ್ಯಾರ್ಥಿ ಇದ್ದ ಸೆಲ್ ಬಳಿ ಬಂದಾಗ ಆತ ಮ್ಯಾಕ್ಸಿಂ ಗಾರ್ಕಿಯವರ "ತಾಯಿ" ಕಾದಂಬರಿಯನ್ನು ಓದುತ್ತಿರುವುದನ್ನು ನೋಡಿ 10ದಿನಗಳ ಉಪವಾಸದ ನಂತರವೂ ಉಳಿಸಿಕೊಂಡಿದ್ದ ಮಾನಸಿಕ ಶಕ್ತಿಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದರಂತೆ.

ಆಗ ಅವರ ಜತೆ ಜೈಲಿನಲ್ಲಿ ಇದ್ದ ಗಣ್ಯ ವ್ಯಕ್ತಿಗಳಲ್ಲಿ ಮುಂದೆ ಹತ್ತು ವರ್ಷಗಳ ಕಾಲ ತಮಿಳುನಾಡಿನ ಮುಖ್ಯಮಂತ್ರಿಗಳಾಗಿದ್ದ ಕೆ. ಕಾಮರಾಜ್, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಪಟ್ಟಾಭಿ ಸೀತಾರಾಮಯ್ಯ ಮತ್ತು ಇನ್ನೂ ಕೆಲವರಿದ್ದರು.

ಜೈಲುವಾಸಗಳೂ ರಾಜಕೀಯ ಸಮರದ ಭಾಗ

ಅವರ ಅನೇಕ ಜೈಲುಗಳ ಪಯಣದಲ್ಲಿ ಒಂದು ಕಡೆ, ಕಾಂ. ಶಂಕರಯ್ಯ, ಮುಂದೆ ಭಾರತದ ರಾಷ್ಟ್ರಪತಿಗಳಾದ ಆರ್. ವೆಂಕಟರಾಮನ್ ಅವರನ್ನು ಭೇಟಿ ಮಾಡುತ್ತಾರೆ, "ಅವರು ಜೈಲಿನಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷದ ಕಡೆ ಇದ್ದರು, 1943 ರಲ್ಲಿ ಸದಸ್ಯರಾಗಿದ್ದರು. ತದನಂತರ, ಸಹಜವಾಗಿ ಅವರು ಕಾಂಗ್ರೆಸ್ ಪಕ್ಷ ಸೇರಿದರು. ಆದಾಗ್ಯೂ, ಹಲವಾರು ವರ್ಷಗಳ ಕಾಲ ನಾವು ಒಟ್ಟಿಗೇ ಕೆಲಸ ಮಾಡಿದೆವು" ಎನ್ನುತ್ತಾರೆ ಶಂಕರಯ್ಯ.

ಮಧುರೈನ ಅಮೇರಿಕನ್ ಕಾಲೇಜಿನಲ್ಲಿದ್ದ ಅವರ ಅನೇಕ ಸಹಪಾಠಿಗಳು ಮತ್ತು ವಿಶಾಲ ವಿದ್ಯಾರ್ಥಿ ಚಳುವಳಿಯಲ್ಲಿನ ಸಮಕಾಲೀನರು ಪದವಿ ಪಡೆದ ನಂತರ ಪ್ರಮುಖ ಹುದ್ದೆಗಳಿಗೇರಿದರು. ಒಬ್ಬರು ತಮಿಳುನಾಡಿನ ಮುಖ್ಯ ಕಾರ್ಯದರ್ಶಿಯಾದರೆ, ಮತ್ತೊಬ್ಬರು ನ್ಯಾಯಾಧೀಶರಾದರು, ಮಗದೊಬ್ಬರು ಐಎಎಸ್ ಅಧಿಕಾರಿಯಾಗಿ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಯಾದರು.

ಶಂಕರಯ್ಯ ವಸಾಹತುಶಾಹಿ ಆಳ್ವಿಕೆಯಲ್ಲಿ ನಾಲ್ಕು ವರ್ಷಗಳ ಕಾಲ ಜೈಲುವಾಸ ಅನುಭವಿಸಿದರೆ, ಸ್ವಾತಂತ್ರ್ಯದ ನಂತರವೂ ಒಟ್ಟು ನಾಲ್ಕು ವರ್ಷಗಳ ಕಾಲ ಜೈಲುವಾಸ ಅನುಭವಿಸಬೇಕಾಯಿತು. ಮೂರು ವರ್ಷಗಳು ಭೂಗತರಾಗಿರಬೇಕಾಯಿತು. ಆದರೆ ಅವರಿಗೆ ಈ ಬಗ್ಗೆ ಬೇಸರವಿಲ್ಲ, ವಿಶೇಷವಾಗಿ ಸ್ವಾತಂತ್ರ್ಯದ ನಂತರ, ಸಂಬಂಧಪಟ್ಟವರ ಮೇಲೆ ದ್ವೇಷವೂ ಇಲ್ಲ. ಅವರ ಮಟ್ಟಿಗೆ, ಎಲ್ಲಾ ಹೋರಾಟಗಳೂ ರಾಜಕೀಯ ಸಮರಗಳಾಗಿದ್ದವು, ಸ್ವಂತಕ್ಕೆಂದು ಹೇಳುವ ಯಾವುದೂ ಇರಲಿಲ್ಲ. ಎಲ್ಲವೂ ದಟ್ಟದರಿದ್ರರ ಪರವಾಗಿ ಮಾಡಿದ ಆಂದೋಲನಗಳಾಗಿದ್ದವು.

ಹದಿನೇಳನೆಯ ವಯಸ್ಸಿಗಾಗಲೇ ಅವರು ಭಾರತ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದಾಗ ಕಮ್ಯೂನಿಸ್ಟ್ ಪಕ್ಷ ನಿಷೇಧಕ್ಕೆ ಒಳಪಟ್ಟು ಭೂಗತವಾಗಿ ಕೆಲಸದಲ್ಲಿ ತೊಡಗಿತ್ತು. 1948 ರಲ್ಲಿ ಕಮ್ಯೂನಿಸ್ಟ್ ಪಕ್ಷ ನಿಷೇಧಕ್ಕೊಳಪಟ್ಟಾಗ, ಅವರು ಮತ್ತೊಮ್ಮೆ ಭೂಗತರಾದರು.

1947 ಕ್ಕೆ ಮುಂಚೆ ಕಂಡಿದ್ದ ಜೈಲುಗಳಲ್ಲದೆ ಮಧುರೈ, ವೆಲ್ಲೂರು, ರಾಜಮಂಡ್ರಿ, ಕಣ್ಣೂರು, ಸೇಲಂ, ತಂಜಾವೂರು ಇತ್ಯಾದಿ ಜೈಲುಗಳನ್ನು ನೋಡಿದರು. 1950 ರಲ್ಲಿ ಬಂಧಿಸಲ್ಪಟ್ಟು ಒಂದು ವರ್ಷದ ನಂತರ ಬಿಡುಗಡೆಯಾದರು. ನಂತರ 1962 ರಲ್ಲಿ ಭಾರತ–ಚೈನಾ ಯುದ್ಧವಾದಾಗ ಅನೇಕ ಕಮ್ಯೂನಿಸ್ಟರ ಜತೆ ಕಾಂ. ಶಂಕರಯ್ಯ ಕೂಡ ಜೈಲು ಸೇರಿದರು, ಏಳು ತಿಂಗಳು ಅಲ್ಲಿದ್ದರು. ಕಮ್ಯುನಿಸ್ಟ್ ಚಳುವಳಿಗಾರರ ಮೇಲೆ 1965 ರಲ್ಲಿ ಮತ್ತೊಮ್ಮೆ ದಾಳಿ ನಡೆದಾಗ ಅವರು 17 ತಿಂಗಳ ಕಾಲ ಜೈಲಿನಲ್ಲಿ ಕಳೆದರು.

ದಶಕಗಳ ಕಾಲ ನಡೆಸಿದ ಹೋರಾಟಗಳು ಮತ್ತು ಎಡ ರಾಜಕೀಯಕ್ಕೆ ಅವರ ಬದ್ಧತೆಯು ಅಂತಿಮವಾಗಿ ಅವರನ್ನು ಕಮ್ಯುನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತನನ್ನಾಗಿ ಪರಿವರ್ತಿಸಿತು.

1944 ರಲ್ಲಿ ತಂಜಾವೂರು ಜೈಲಿನಿಂದ ಬಿಡುಗಡೆಯಾದ ಮೇಲೆ ಅವರು ಭಾರತ ಕಮ್ಯುನಿಸ್ಟ್ ಪಕ್ಷದ ಮಧುರೈ ಜಿಲ್ಲಾ ಸಮಿತಿಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಭಾರಿ ಸಂಖ್ಯೆಯಲ್ಲಿ ಜನರನ್ನು ಅಣಿನೆರೆಸುವಲ್ಲಿ ಕಾಂ. ಶಂಕರಯ್ಯ ಅವರ ಪಾತ್ರ ಗಮನಾರ್ಹವಾದುದು. 1940 ಹೊತ್ತಿಗೆಲ್ಲ ಮಧುರೈ ಎಡ ಚಳುವಳಿಯ ಪ್ರಮುಖ ನೆಲೆಯಾಗಿತ್ತು. ಅಂದಿನ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ. ಪಿ.ಸಿ. ಜೋಶಿ ಯವರು 1946 ರಲ್ಲಿ ಮಧುರೈಗೆ ಭೇಟಿ ನೀಡಿದ ಸಮಯದಲ್ಲಿ ಬಹಿರಂಗ ಸಭೆಯಲ್ಲಿ ಒಂದು ಲಕ್ಷ ಜನರು ಭಾಗವಹಿಸಿದ್ದರು.

"ಮಧುರೈ ಪಿತೂರಿ ಮೊಕದ್ದಮೆ"

ಕಮ್ಯುನಿಸ್ಟರ ಜನಪ್ರಿಯತೆ ಹೆಚ್ಚಾದಾಗ ವಸಾಹತುಶಾಹಿ ಸರಕಾರ ಅವರ ಮೇಲೆ "ಮಧುರೈ ಪಿತೂರಿ ಮೊಕದ್ದಮೆ" ಹಾಕಿ ಕಾಂ. ಪಿ. ರಾಮಮೂರ್ತಿಯವರನ್ನು ಮೊದಲ ಆರೋಪಿಯನ್ನಾಗಿ ಮಾಡಿತು ಬ್ರಿಟಿಷ್ ಸರ್ಕಾರ. ಎರಡನೇ ಆರೋಪಿಯನ್ನಾಗಿ ಶಂಕರಯ್ಯ ಅವರ

ಪುಟ 12 ನೋಡಿ



2018ರಲ್ಲಿ ಸಿಪಿಐ(ಎಂ)ನ 22ನೇ ಮಹಾಧಿವೇಶನದಲ್ಲಿ ಎನ್. ಶಂಕರಯ್ಯ ಹಾಗೂ ವಿ ಎಸ್ ಅಚ್ಯುತಾನಂದನ್ ರವರಿಗೆ ಪ್ರಧಾನ ಕಾರ್ಯದರ್ಶಿಗಳಿಂದ ಸನ್ಮಾನ



2011ರಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿರುವ ಕಾಂ. ಶಂಕರಯ್ಯ

ಆಧುನಿಕ ಸಮೃದ್ಧ ಸಮಸಮಾಜವನ್ನು ಕಟ್ಟುವತ್ತ.........

ಪುಟ 8 ರಿಂದ

ಸಂಪನ್ಮೂಲಗಳನ್ನು ಬಳಸಿಕೊಳ್ಳುವ, ವಿದೇಶೀ ಹೂಡಿಕೆಯನ್ನು ಬಳಸಿಕೊಳ್ಳುವ, ವಿದೇಶಗಳಿಂದ ಸುಧಾರಿತ ತಂತ್ರಜ್ಞಾನವನ್ನು ಪರಿಚಯಿಸುವ ಮತ್ತು ಚೀನಾದ ರಫ್ತನ್ನು ಹೆಚ್ಚಿಸುವ ತನ್ನ ತೀರ್ಮಾನವನ್ನು ನಿರ್ದಿಷ್ಟಗೊಳಿಸಿತು. ಸಿ.ಪಿ.ಸಿ ಯು ವಿದೇಶೀ ಅನುಭವ ಮತ್ತು ಮಾದರಿಗಳನ್ನು ಯಾಂತ್ರಿಕವಾಗಿ ನಕಲು ಮಾಡುವುದರ ಕುರಿತು ಎಚ್ಚರಿಸಿತು. ಇದು ಸಮಾಜವಾದಿ ರಚನೆಯ ಹಾದಿಯಲ್ಲಿಯೇ ಉಳಿಯುವಂತಾಗಲು ಹಲವಾರು ಕ್ರಮಗಳನ್ನು ಸೂಚಿಸಲಾಯಿತು. ಸುಧಾರಣೆಯ ಮೂಲ ಉದ್ದೇಶವು ಚೀನಾದ ಪರಿಸ್ಥಿತಿಗಳಿಗೆ ಸೂಕ್ತವಾದ ಸಮಾಜವಾದಿ ಆರ್ಥಿಕ ಸಂರಚನೆಯನ್ನು ಸ್ಥಾಪಿಸುವದಾಗಿತ್ತು. ಇದು ಉತ್ಪಾದಕ ಶಕ್ತಿಗಳ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಸಮಾಜವಾದಿ ಸಂಸ್ಕೃತಿ ಮತ್ತು ಸಿದ್ಧಾಂತವನ್ನು ಕಟ್ಟುವುದಕ್ಕೆ, ಆರ್ಥಿಕ ಅಪರಾಧಿ ಚಟುವಟಿಕೆಗಳ ವಿರುದ್ಧ ಹೋರಾಡಲು ಮತ್ತು ಪಕ್ಷದ ಕಾರ್ಯಶೈಲಿಯನ್ನು ಸರಿಪಡಿಸಲು, ಶಿಸ್ತನ್ನು ಬಿಗಿಗೊಳಿಸಲು, ಪಕ್ಷದ ನಾಯಕತ್ವವನ್ನು ಎತ್ತಿ ಹಿಡಿಯಲು ಮತ್ತು ಸುಧಾರಿಸಲು ಒತ್ತು ನೀಡಲಾಯಿತು.

1983ರಲ್ಲಿ ಸಿಪಿಐ(ಎಂ) ಪಕ್ಷದ ನಿಯೋಗವು ಪ್ರಧಾನ ಕಾರ್ಯದರ್ಶಿ ಇ.ಎಂ.ಎಸ್ ನಂಬೂದರಿಪಾಡ್ ನೇತೃತ್ವದಲ್ಲಿ ಚೀನಾಗೆ ಭೇಟಿ ನೀಡಿ ಸಿ.ಪಿ.ಸಿ ನಾಯಕತ್ವದ ಜೊತೆಗೆ ವಿಸ್ತೃತ ಚರ್ಚೆಯನ್ನು ನಡೆಸಿತು. ಎರಡೂ ಪಕ್ಷಗಳ ನಡುವೆ ಸಂಬಂಧಗಳು ಪುನರಾರಂಭಗೊಂಡವು.

1985ರಲ್ಲಿ ಸಿ.ಪಿ.ಸಿ ಯು ಆರ್ಥಿಕ ಬೆಳವಣಿಗೆಯ ಪ್ರಕ್ರಿಯೆಯನ್ನು ವಿಮರ್ಶಿಸಿತು. ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಯ ರಣನೀತಿಯಲ್ಲಿ ಉತ್ಪಾದನೆಯಲ್ಲಿ ಹೆಚ್ಚಳವನ್ನು, ಅದರಲ್ಲೂ ವಿಶೇಷವಾಗಿ ಭಾರಿ ಕೈಗಾರಿಕೆಯ ಹೆಚ್ಚಿದ ಉತ್ಪಾದನೆಯನ್ನು, ಬೆಂಬತ್ತಿ ಹೋಗುವುದರ ಮೇಲೆ ಇದ್ದ ಒತ್ತನ್ನು ಬದಲಾಯಿಸಲಾಯಿತು. ಕೃಷಿ, ಸಣ್ಣ ಮತ್ತು ಭಾರಿ ಕೈಗಾರಿಕೆಗಳಒಂದು ಸಮತೋಲಿತ ಅಭಿವೃದಿಗಾಗಿ ಮತ್ತು ಹಾಗೆಯೇ ಆರ್ಥಿಕ, ವೈಜ್ಞಾನಿಕ, ತಾಂತ್ರಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಸರ್ವಾಂಗೀಣ ಬೆಳವಣಿಗೆಗಾಗಿ ಒತ್ತು ಕೊಡುವತ್ತ ಬೆಳವಣಿಗೆಯ ರಣನೀತಿಯನ್ನು ಬದಲಾಯಿಸಲಾಯಿತು. ಕೃಷಿ ಮತ್ತು ಕೈಗಾರಿಕಾ ಅಗತ್ಯಗಳೊಂದಿಗೆ ಸಂಶೋಧನೆ ಮತ್ತು ತಂತ್ರಜ್ಞಾನಗಳ ಅಭಿವೃದ್ಧಿಯನ್ನು ಸಂಯೋಜಿಸಲು, ಚೀನಾದ ವಿಜ್ಞಾನ ಅಕಾಡೆಮಿ ಮತ್ತು ವಿವಿಧ ಕೈಗಾರಿಕೆಗಳ ನಡುವೆ ನಿಕಟ ಸಂಪರ್ಕವನ್ನು ಸ್ಥಾಪಿಸಲಾಯಿತು. ಒಂಬತ್ತು ವರ್ಷಗಳ ಒಂದು ಕಡ್ಡಾಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು.

ಬಂಡವಾಳಶಾಹಿ ಉದಾರವಾದದ ಅಪಾಯಗಳ ಕುರಿತು ಎಚ್ಚರ

ಬಂಡವಾಳಶಾಹಿ ಉದಾರವಾದದ ಅಪಾಯಗಳ ವಿರುದ್ಧ, ಸಿ.ಪಿ.ಸಿ ನಾಯಕತ್ವವು ಪದೇ ಪದೇ ಎಚ್ಚರಿಸುತ್ತಿತ್ತು. ಡೆಂಗ್ ಕ್ಸಿಯಾವೋ ಪಿಂಗ್ ಕೇಂದ್ರ ಸಮಿತಿ ಸಭೆ (1986) ಯೊಂದರಲ್ಲಿ ಮಾತನಾಡುತ್ತ, ಬಂಡವಾಳಶಾಹಿ ಉದಾರವಾದವು ಚೀನಾದ ನೀತಿಗಳನ್ನು ಬಂಡವಾಳಶಾಹಿಯ ದಿಕ್ಕಿನಲ್ಲಿ ತಿರುಗಿಸುವ ಒಂದು ಪ್ರಯತ್ನವಾಗಿದೆ ಮತ್ತು ಉದಾರೀಕರಣದ ಸೈದ್ಧಾಂತಿಕ ಪ್ರವೃತ್ತಿಯನ್ನು ಅದು ವ್ಯಾಪಿಸಲು ಅವಕಾಶ ನೀಡಿದರೆ, ಅದು ರಾಜಕೀಯ ಸ್ಥಿರತೆ ಮತ್ತು ಏಕತೆಯನ್ನು ಕಡೆಗಣಿಸುತ್ತದೆ. ಇದು ಸಮಾಜವಾದದ ನಿರ್ಮಾಣಕ್ಕೆ ಹಾನಿಕಾರಕವಾಗಿದೆ. ಎಂದು ಹೇಳಿದರು. ಕಮ್ಯೂನಿಸ್ಟ್ ಪಕ್ಷದ ನಾಯಕತ್ವವನ್ನು ಎತ್ತಿ ಹಿಡಿಯುವ ನಾಲ್ಕು ಪ್ರಮುಖ ತತ್ವಗಳ ತಿರುಳನ್ನು ಅವರು ಪುನರುಚ್ಚರಿಸಿದರು. ಆದರೆ ಬಂಡವಾಳಶಾಹಿ ಉದಾರವಾದದ ಪ್ರಮುಖ ಅಂಶವೇನೆಂದರೆ, ಕಮ್ಯುನಿಸ್ಟ್ ಪಕ್ಷದ ನಾಯಕತ್ವಕ್ಕೆ ಅದಕ್ಕೆ ಇರುವ ವಿರೋಧ. ಬಂಡವಾಳಶಾಹಿ ಪ್ರಜಾಪ್ರಭುತ್ವವನ್ನು ನಕಲು ಮಾಡದೇ, ಸಮಾಜವಾದಿ ಪ್ರಜಾಪ್ರಭುತ್ವ ಮತ್ತು ಸಮಾಜವಾದಿ ನ್ಯಾಯಾಂಗ ವ್ಯವಸ್ಥೆಯನ್ನು ಬಲಪಡಿಸಲು ತೀರ್ಮಾನಿಸಲಾಯಿತು.

ಉದಾರವಾದದ ಮೊದಲ ಪ್ರತಿಕೂಲ ಪರಿಣಾಮವು ಬೀಜಿಂಗ್‌ನಲ್ಲಿ ವಿದ್ಯಾರ್ಥಿಗಳು ತಿಯಾನನ್ಮೆನ್ ಚೌಕವನ್ನು ಆಕ್ರಮಿಸಿಕೊಂಡು ಸಮಾಜವಾದಿ ಕ್ರಮವನ್ನು ಅಡ್ಡಿಪಡಿಸಿದ ಸಂದರ್ಭದಲ್ಲಿ ಗೋಚರಿಸಿತು.

ಈ ರೀತಿಯ ಘಟನೆಗಳು ಮರುಕಳಿಸದಂತೆ ತಡೆಯಲು, 1990 ರಲ್ಲಿ ನಡೆದ ಸಿ.ಪಿ.ಸಿ ಯ ಕೇಂದ್ರ ಸಮಿತಿ ಸಭೆಯು, ಜನತೆಯೊಂದಿಗೆ ಪಕ್ಷದ ಸಂಬಂಧವನ್ನು ಇನ್ನಷ್ಟುಗಟ್ಟಿಗೊಳಿಸಲು ನಿರ್ಧರಿಸಿತು. ಅದು ಇಡಿಯಾಗಿ ಎಲ್ಲ ಶ್ರೇಣಿಯ ನಾಯಕರು, ಕಾರ್ಯಕರ್ತರನ್ನು 'ಜನರಿಂದ ಜನರಿಗಾಗಿ' ಎನ್ನುವ ತತ್ವಕ್ಕೆ ಬದ್ಧರಾಗಿರಲು ಉತ್ತೇಜಿಸಿತು. ಜನರ ಹಿತಾಸಕ್ತಿಗೆ ಅನುಗುಣವಾಗಿ ನೀತಿಗಳು ಮತ್ತು ಅವುಗಳ ಜಾರಿಯನ್ನು ಖಾತ್ರಿಪಡಿಸುವಂತೆ, ಎಲ್ಲ ಹಂತದ ನಾಯಕರು ತಳಮಟ್ಟದ ಮತ್ತು ಜನರ ಜೊತೆ ಆಗಾಗ ಹೋಗುವಂತೆ; ವಾಸ್ತವಿಕ ರೀತಿಯಲ್ಲಿ ಕೆಲಸ ಮಾಡುತ್ತಾ ಮತ್ತು ಪಕ್ಷದ ಮಾರ್ಗಸೂಚಿಯನ್ನು, ನೀತಿಗಳನ್ನು ಜಾರಿಗೊಳಿಸುವಂತೆ; ಪಕ್ಷದ ಮತ್ತು ಪಕ್ಷದ ಒಳಗಿನ ಮೇಲ್ವಿಚಾರಣೆಯನ್ನು ಗಟ್ಟಿಗೊಳಿಸುವಂತೆ; ಪ್ರಜ್ಞೆಯನ್ನು ಎತ್ತರಿಸಲು, ಜನತೆಯನ್ನು ಸಂಘಟಿಸಿ ನಾಯಕತ್ವ ನೀಡಿ ಜೊತೆಯಾಗಿ ಮುನ್ನಡೆಯುವಂತೆ ನಾಯಕರು ಮತ್ತು ಕಾರ್ಯಕರ್ತರಿಗೆ ಸಿ.ಪಿ.ಸಿ ಯ ಕೇಂದ್ರ ಸಮಿತಿ ಕರೆ ನೀಡಿತು.

ಸಮಾಜವಾದಿ ಮಾರುಕಟ್ಟೆ ಆರ್ಥಿಕತೆ

ಸಿ.ಪಿ.ಸಿ ಯ ಕೇಂದ್ರ ಸಮಿತಿಯ ಹದಿನಾಲ್ಕನೇ ಮಹಾಧಿವೇಶನವು (1992) ಸಮಾಜವಾದಿ ಮಾರುಕಟ್ಟೆ ಆರ್ಥಿಕತೆಯನ್ನು ನಿರ್ಮಿಸುವ ಗುರಿಯನ್ನು ನಿಗದಿಪಡಿಸಿತು. ಕೈಗಾರಿಕೆ ಮತ್ತು ಕೃಷಿ ಉತ್ಪಾದನೆಯ ಬೆಳವಣಿಗೆಯ ನಂತರ ಹೆಚ್ಚಿನ ಅಗತ್ಯ ಸರಕುಗಳು ಜನರ ಕೈಗೆಟುಕುವಂತಾದಾಗ, ಚೀನಾ 1993 ರಲ್ಲಿ ಪಡಿತರ ವ್ಯವಸ್ಥೆಯನ್ನು ಸ್ಥಗಿತಗೊಳಿಸಿತು. 5000 ವರ್ಷಗಳಿಗೂ ಮೀರಿ ಸಂಗ್ರಹಿಸಲಾಗುತ್ತಿದ್ದ ಕೃಷಿಯ ಮೇಲಿನ ತೆರಿಗೆಯನ್ನು 2005 ರಲ್ಲಿ ರದ್ದು ಗೊಳಿಸಲಾಯಿತು. ರೈತರಿಗೆ ಹೊಸ ಸಬ್ಸಿಡಿಯನ್ನುನೀಡಲಾಯಿತು. 2009 ರಲ್ಲಿ ಒಂದು ರಾಷ್ಟ್ರವ್ಯಾಪಿ ಗ್ರಾಮೀಣ ಸಹಕಾರಿ ವೈದ್ಯಕೀಯ ಕಾರ್ಯಕ್ರಮವನ್ನು ಮೂಲ ಗ್ರಾಮೀಣ ಆರೋಗ್ಯ ರಕ್ಷಣಾ ವ್ಯವಸ್ಥೆಯಾಗಿ ಸ್ಥಾಪಿಸಲಾಯಿತು.

1978 ರಿಂದ ಅನುಸರಿಸಲಾದ ನೀತಿಗಳು ಉತ್ಪಾದಕ ಶಕ್ತಿಗಳ ಪ್ರಚಂಡ ಬೆಳವಣಿಗೆಗೆ ಕಾರಣವಾಯಿತು. ಚೀನಾ ಕ್ಷಿಪ್ರ ಕೈಗಾರಿಕೀಕರಣದತ್ತ ದಾಪುಗಾಲಿಟ್ಟಿತು. ಅದರ ಜೆ.ಡಿ.ಪಿ ವೇಗವಾಗಿಬೆಳೆಯಿತು. ತೀವ್ರ ಬಡತನವನ್ನು ಸಂಪೂರ್ಣವಾಗಿ ಹೋಗಲಾಡಿಸಲಾಯಿತು. ವ್ಯಾಪಾರವು ಹಲವಾರು ಪಟ್ಟು ಬೆಳೆಯಿತು. ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಪ್ರಗತಿಯನ್ನು ಸಾಧಿಸಲಾಯಿತು. 1997 ರಲ್ಲಿ ಚೀನಾ ಜಗತ್ತಿನ ಏಳನೆಯ ಬೃಹತ್ ಆರ್ಥಿಕತೆಯಾಯಿತು ಮತ್ತು 2010 ರಲ್ಲಿ ಎರಡನೆಯ ಸ್ಥಾನಕ್ಕೆ ಬಂದಿತು.

1978 ರಿಂದ ಸುಮಾರು 85ಕೋಟಿಗೂ ಮೀರಿದ ಜನರನ್ನು 'ಎರಡು ಭರವಸೆಗಳು ಮತ್ತು ಮೂರು ಖಾತ್ರಿಗಳು' ಜೊತೆಗೆ ತೀವ್ರ ದಾರಿದ್ರ್ಯದಿಂದ ಮೇಲೆತ್ತಲಾಯಿತು. (ಅವರ ಆಹಾರ, ಬಟ್ಟೆಗಳ ಅವಶ್ಯಕತೆಗಳನ್ನು ಪೂರೈಸುವ ಭರವಸೆ, ಕಡ್ಡಾಯ ಶಿಕ್ಷಣದ ಪ್ರವೇಶ ಖಾತ್ರಿ, ಮೂಲಭೂತ ಆರೋಗ್ಯ ಸೇವೆಗಳು ಮತ್ತು ಸುರಕ್ಷಿತ ವಸತಿ). 1970 ರ ಉತ್ತರಾರ್ಧದಿಂದ ಜಾಗತಿಕ ಮಟ್ಟದಲ್ಲಿ ಬಡತನದ ಶೇ. 70 ರಷ್ಟು ಕಡಿತಕ್ಕೆ ಚೀನಾ ಕೊಡುಗೆ ನೀಡಿತು.

ಚೀನಾದ ಒಟ್ಟು ತಲಾವಾರು ರಾಷ್ಟ್ರೀಯ ಆದಾಯವು 200 (1978) ಡಾಲರುಗಳಿಂದ 10,410 (2019) ಡಾಲರುಗಳಿಗೆ ಏರಿತು. ಪ್ರಸ್ತುತ ವಿಶ್ವಬ್ಯಾಂಕ್ ಮಿತಿ 12,536 ಡಾಲರುಗಳ ಮಿತಿ ದಾಟಿ, 2023 ರ ವೇಳೆಗೆ ಉನ್ನತ ಮಟ್ಟದ ಆದಾಯದ ದೇಶದ ಮಟ್ಟ ಮುಟ್ಟಲಿದೆ.

1978 ರಲ್ಲಿ ಚೀನಾದ ಜಿ.ಡಿ.ಪಿಯು 367.87 ಶತಕೋಟಿ (ಬಿಲಿಯನ್) ಯುವಾನ್ (57.38 ಶತಕೋಟಿ ಡಾಲರು) ಇದ್ದದ್ದು 2020 ರಲ್ಲಿ 1.02 ಲಕ್ಷ ಶತಕೋಟಿ ಯುವಾನ್ (14.7ಸಾವಿರ ಶತಕೋಟಿ ಡಾಲರು) ಗೆ ಹೆಚ್ಚಿತು. ಇದು ಜಾಗತಿಕ ಆರ್ಥಿಕತೆಯ ಅಂದಾಜು 17 ಪ್ರತಿಶತದಷ್ಟಾಗುತ್ತದೆ. ಚೀನಾದ ವಿದೇಶಿ ವಿನಿಮಯ ಸಂಗ್ರಹವು 3.2 ಸಾವಿರ ಶತಕೋಟಿ ಡಾಲರಿ (2020) ನಷ್ಟಿದ್ದು ಇದು ಜಗತ್ತಿನಲ್ಲಿಯೇ ಅತ್ಯಧಿಕವಾಗಿದೆ.

ದೇಶಿಯ ಬೇಡಿಕೆ ಆಧಾರಿತ ಅಭಿವೃದ್ಧಿಯತ್ತ

2008ರ ಜಾಗತಿಕ ಆರ್ಥಿಕ ಬಿಕ್ಕಟ್ಟಿಗೆ ಪ್ರತಿಕ್ರಿಯಿಸುತ್ತ, ಚೀನಾ ದೇಶಿಯ ಬೇಡಿಕೆ ಆಧಾರಿತ ಅಭಿವೃದ್ಧಿಯತ್ತ ತನ್ನ ಆರ್ಥಿಕ ರಣನೀತಿಯನ್ನು ಬದಲಾಯಿಸಿತು. ಚೀನಾದ ಆರ್ಥಿಕ ಪ್ರಗತಿಯ ಜೊತೆಗೆ ವೈಯಕ್ತಿಕ ಆದಾಯದ ಹೆಚ್ಚಳವು ಆಯಿತು. 2020ರ ವೇಳೆಗೆ ವೆಚ್ಚ ಮಾಡಬಹುದಾದ ರಾಷ್ಟ್ರೀಯ ತಲಾ ಆದಾಯವು 2010ಕ್ಕೆ ಹೋಲಿಸಿದರೆ ನಿಜ ಬೆಲೆಗಳಲ್ಲಿ ಶೇ.100.8 ರಷ್ಟು ಹೆಚ್ಚಾಗಿದೆ. (10 ವರ್ಷಗಳಲ್ಲಿ ಇಮ್ಮಡಿಯಾಗಿದೆ) ನಗರವಾಸಿಗಳಿಗಿಂತ ಗ್ರಾಮೀಣ ವಾಸಿಗಳ ಆದಾಯವು ವೇಗವಾಗಿ ಬೆಳೆಯಿತು. ಮತ್ತು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಭಿವೃದ್ಧಿಯ ಅಂತರವನ್ನು ಮತ್ತಷ್ಟು ಕಡಿಮೆಗೊಳಿಸಿತು. ನಗರ ಮತ್ತು ಗ್ರಾಮೀಣ ವಾಸಿಗಳ ತಲಾ ವೆಚ್ಚ ಮಾಡಬಹುದಾದ ಆದಾಯಗಳಅನುಪಾತವು 2019 ರಲ್ಲಿ 2.64 ರಿಂದ 2020ರಲ್ಲಿ 2.56 ಕ್ಕೆ ಇಳಿದಿದೆ. ಜಿ.ಡಿ.ಪಿ ಯಲ್ಲಿ ದೇಶಿಯ ಬಳಕೆಯ ಪಾಲು 2010 ರಲ್ಲಿ ಶೇ.48 ರಿಂದ 2019 ರಲ್ಲಿ ಶೇ.55 ಕ್ಕೆ ಏರಿತು. ಇದು ಚೀನಾದ ಒಟ್ಟು ಬೆಳವಣಿಗೆಯ ಶೇ.70 ಕ್ಕಿಂತಲೂ ಹೆಚ್ಚಾಗಿದೆ. ಈ ಹತ್ತು ವರ್ಷಗಳಲ್ಲಿ ಬೆಳವಣಿಗೆಗೆ ರಫ್ತುಗಳ ಕೊಡುಗೆಯು ಶೇ.33 ರಿಂದ ಕೇವಲ ಶೇ.10ಕ್ಕೆ ಇಳಿದಿದೆ. (ಅಂದರೆ ಈಗ ಬೆಳವಣಿಗೆ ದೇಶಿಯ ಬಳಕೆಯ ಮೇಲೆ ಪ್ರಧಾನವಾಗಿ ಆಧಾರಿತವಾಗಿದೆ, ರಫ್ತಿನ ಮೇಲೆ ಅಲ್ಲ)

2020 ರಲ್ಲಿ ಚೀನಾದ ಒಟ್ಟು ಧಾನ್ಯ ಉತ್ಪಾದನೆಯು ಸತತ ಆರು ವರ್ಷಗಳ ಕಾಲ 650 ಶತಕೋಟಿ ಕಿ.ಗ್ರಾಂ.ಗಳನ್ನು ಮೀರಿದೆ. ವಿದ್ಯುಚ್ಛಕ್ತಿ ಉತ್ಪಾದನೆಯು ವರ್ಷದಿಂದ ವರ್ಷಕ್ಕೆ ಸ್ಥಿರವಾಗಿ ಹೆಚ್ಚುತ್ತಿದೆ. ರಾಷ್ಟ್ರೀಯ ಆರೋಗ್ಯ ವೆಚ್ಚವು ಶೇ. 15.2 ರಷ್ಟು, ವಸತಿಯ ಮೇಲಿನ ವೆಚ್ಚ ಶೇ. 10.5 ರಷ್ಟು, ಹಾಗೆಯೇ ಸಾಮಾಜಿಕ ಸುರಕ್ಷೆ ಮತ್ತು ಉದ್ಯೋಗದ ಮೇಲಿನ ವೆಚ್ಚವು ಶೇ.10.9 ರಷ್ಟು ಹೆಚ್ಚಳವನ್ನು ಕಂಡಿದೆ.

ಜಾಗತಿಕ ಆವಿಷ್ಕಾರ ಸೂಚಿಯಲ್ಲಿ ಚೀನಾ 2020 ರಲ್ಲಿ 14ನೇ ಸ್ಥಾನದಲ್ಲಿತ್ತು. ಆವಿಷ್ಕಾರದಲ್ಲಿಅಗ್ರ ಶ್ರೇಣಿಯ 20 ದೇಶಗಳ ಪೈಕಿ ಇದು ಒಂದೇ ಅಭಿವೃದ್ಧಿಶೀಲ ದೇಶವಾಗಿದೆ. ಚಂದ್ರ ಮತ್ತು ಮಂಗಳನ ಅನ್ವೇಷಣೆಯಲ್ಲಿ, ಉಪಗ್ರಹಗಳ ಉಡ್ಡಯನದಲ್ಲಿ, ಸಾಗರದಾಳದ ಹುಡುಕಾಟದಲ್ಲಿ ಮತ್ತು ಕ್ವಾಂಟಂ ಗಣಕೀಕರಣದಲ್ಲಿ ಚೀನಾ, ದಾಖಲಿಸಬಹುದಾದ ಸಾಧನೆಗಳನ್ನು ಮಾಡಿದೆ. ಹೊಸ ತಂತ್ರಜ್ಞಾನಗಳಾದ 5G ಮತ್ತು ಕೃತಕ ಬುದ್ಧಿಮತ್ತೆಯನ್ನು ವ್ಯಾಪಕವಾಗಿ ಬಳಕೆ ಮಾಡಲಾಗುತ್ತಿದೆ. 2020 ರ ಮೊದಲ ಮೂರು ತ್ರೈಮಾಸಿಕಗಳಲ್ಲಿ ಸರಾಸರಿ 22,000 ಹೊಸ ಉದ್ಯಮಗಳು ಪ್ರತಿದಿನವೂ ಸ್ಥಾಪಿಸಲ್ಪಟ್ಟವೆ. ದೇಶದಾದ್ಯಂತ ನಗರ ಪ್ರದೇಶಗಳಲ್ಲಿ 1.186 ಕೋಟಿ ಹೊಸ ಉದ್ಯೋಗಗಳು ಸೃಷ್ಟಿಯಾಗಿವೆ. ಇದು 2020 ರ ವಾರ್ಷಿಕ ಗುರಿಯನ್ನು ಮೀರಿದೆ.

ಎರಡು ಶತಮಾನದ ಗುರಿಗಳು

ಚೀನಾ ತನ್ನ ಶತಮಾನದ ಎರಡು ಗುರಿಗಳಲ್ಲಿ ಮೊದಲನೆಯದಾದ ಒಂದು ಮಿತ ಅನುಕೂಲಸ್ಥ ಸಮಾಜವನ್ನು 2020 (2021 ರ ಸಿ.ಪಿ.ಸಿಯ ಶತಮಾನೋತ್ಸವದೊಂದಿಗೆ ಘಟಿಸುವಂತೆ) ರ ವೇಳೆಗೆ ನಿರ್ಮಿಸಲಾಗಿದೆ ಎಂದು ಘೋಷಿಸಿತು. ಅದು ಈಗ ತನ್ನ ಶತಮಾನದ ಎರಡನೇ ಗುರಿಯಾಗಿ ಸಂಪದ್ಭರಿತವಾದ, ಬಲಿಷ್ಠವಾದ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕವಾಗಿ ಮುಂದುವರೆದ, ಸೌಹಾರ್ದಯುತ ಮತ್ತು ಸುಂದರವಾದ ಸಮಾಜವಾದಿ ದೇಶವನ್ನು 2050 ರ ವೇಳೆಗೆ ನಿರ್ಮಿಸಲು ಮುಂದಡಿ ಇಡುತ್ತಿದೆ (2049 ರಲ್ಲಿ ಚೀನಾದ ಜನತಾ ಗಣರಾಜ್ಯ ಸ್ಥಾಪನೆಯ ಶತಮಾನದ ಸಂದರ್ಭಕ್ಕೆ ಘಟಿಸುವಂತೆ).

ಸಿ.ಪಿ.ಸಿ ಯು ಈ ಗುರಿಗಳನ್ನು ಸಾಧಿಸಲು ದೀರ್ಘಕಾಲದ ಮತ್ತು ಅಲ್ಪಾವಧಿಯ ಯೋಜನೆಗಳನ್ನು ರೂಪಿಸಿವೆ. 14 ನೆಯ ಪಂಚವಾರ್ಷಿಕ ಯೋಜನೆ (2021–2025)ಯು ಆರ್ಥಿಕ ಪ್ರಗತಿ, ಆವಿಷ್ಕಾರಚಾಲಿತ ಅಭಿವೃದ್ಧಿ, ಜನರ ಯೋಗಕ್ಷೇಮ, ಪರಿಸರ ಸಂರಕ್ಷಣೆ ಮತ್ತು ಭದ್ರತೆ ಹಾಗೂ ಸುರಕ್ಷತೆಗಾಗಿ 20 ಮುಖ್ಯ ಗುರಿಗಳನ್ನು ನಿಗದಿಪಡಿಸಿದೆ. ಇದು ಉನ್ನತ ಗುಣಮಟ್ಟದ ಅಭಿವೃದ್ಧಿಗೆ, ಆಂತರಿಕ ಬೇಡಿಕೆಯ ಇನ್ನಷ್ಟು ವಿಸ್ತರಣೆಗೆ, ಒಂದು ಬಲಿಷ್ಠವಾದ ಆಂತರಿಕ ಮಾರುಕಟ್ಟೆಯನ್ನು ನಿರ್ಮಿಸುವದಕ್ಕೆ, ಉತ್ಪಾದನೆ, ವಿತರಣೆ ಮತ್ತು ಬಳಕೆಯನ್ನು ಜೋಡಿಸುವುದಕ್ಕೆ ಒತ್ತು ನೀಡುತ್ತದೆ. ಸಿ.ಪಿ.ಸಿ ಯ 19 ನೇ ಮಹಾಧಿವೇಶನದಲ್ಲಿ ಸ್ವೀಕರಿಸಲಾದ ವರದಿಯಲ್ಲಿ ದೀರ್ಘಕಾಲೀನ ಯೋಜನೆಗಳ ಕುರಿತು ಹೀಗೆ ಹೇಳಲಾಗಿದೆ.

"2020–2035 ರ ಮೊದಲ ಹಂತದಲ್ಲಿ ಮಿತ ಅನುಕೂಲಸ್ಥ ಸಮಾಜದ ಅಡಿಪಾಯದ ಮೇಲೆ 15 ವರ್ಷಗಳ ಕಠಿಣ ಪರಿಶ್ರಮದ ಮೂಲಕ ಸಮಾಜವಾದಿ ಆಧುನೀಕರಣವು ಮೂಲತಃ ಸಾಕಾರಗೊಂಡಿದೆ ಎನ್ನುವದನ್ನು ನೋಡಬಯಸುತ್ತೇವೆ. ಎರಡನೆಯ ಹಂತದಲ್ಲಿ 2035 ರಿಂದ 21 ನೇ ಶತಮಾನದ ಮಧ್ಯಭಾಗದವರೆಗೆ ನಾವು ಮೂಲಭೂತವಾಗಿ ಸಾಧಿಸಿದ ಆಧುನೀಕರಣದ ಮೇಲೆ ಮತ್ತೆ 15 ವರ್ಷಗಳ ಕಠಿಣ ಪರಿಶ್ರಮದ ನಂತರ ಚೀನಾವನ್ನು ಒಂದು ಮಹಾನ್ ಸಮಾಜವಾದಿ ದೇಶವಾಗಿ ಅಭಿವೃದ್ಧಿ ಪಡಿಸುತ್ತೇವೆ."

ಮಾರ್ಕ್ಸ್‌ವಾದವನ್ನು ನಿರಂತರವಾಗಿ ಅಳವಡಿಸಿಕೊಳ್ಳುವ ಇತಿಹಾಸ

ಇಂದು ಸಿಪಿ.ಸಿ ಯು 9.06ಕೋಟಿಪಕ್ಷದ ಸದಸ್ಯರನ್ನು ಮತ್ತು 46.1 ಲಕ್ಷ ಪ್ರಾಥಮಿಕ ಹಂತದ ಪಕ್ಷ ಸಂಘಟನೆಗಳನ್ನು ಹೊಂದಿದೆ. ಅದರ ಸದಸ್ಯತ್ವದಲ್ಲಿ ಶೇ.27.2 ರಷ್ಟು ಮಹಿಳೆಯರಿದ್ದಾರೆ. ಶೇ.50 ರಷ್ಟು ಪದವೀಧರರು ಅಥವಾ ಅದಕ್ಕೂ ಮೇಲ್ಪಟ್ಟು, ಶೇ.34 ರಷ್ಟು ಸದಸ್ಯರು 40 ವರ್ಷ ವಯೋಮಾನದ ಒಳಗಿನವರು, 40–50 ವಯಸ್ಸಿನ ಮಧ್ಯದಲ್ಲಿರುವವರು ಶೇ.19.7 (ಅಂದರೆ ಶೇ.53.7 ರಷ್ಟು 50 ವರ್ಷಕ್ಕಿಂತ ಕೆಳಗಿನವರು). ಶೇ.35.3 ಪಕ್ಷದ ಸದಸ್ಯರು ಕಾರ್ಮಿಕ ಮತ್ತು ರೈತಾಪಿ ವರ್ಗಕ್ಕೆ ಸೇರಿದವರಾಗಿದ್ದಾರೆ. ಇನ್ನುಳಿದ ಶೇ. 15.5 ರಷ್ಟು ಸದಸ್ಯರು ಹಲವಾರು ಉದ್ಯಮಗಳ, ಸಾರ್ವಜನಿಕ ಸಂಸ್ಥೆಗಳ ಮತ್ತು ಸಾಮಾಜಿಕ ಸಂಘಟನೆಗಳ ವೃತ್ತಿಪರರಾಗಿದ್ದಾರೆ. ಶೇ. 8.3 ರಷ್ಟು ಪಕ್ಷದಲ್ಲಿ ಮತ್ತು ಸರ್ಕಾರದ ಸಂಸ್ಥೆಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ. ಪಕ್ಷದ ಪ್ರಾಥಮಿಕ ಸಂಘಟನೆಗಳು ಶೇ.99ರಷ್ಟು ನಗರ ಪ್ರದೇಶಗಳ ನೆರೆಹೊರೆಯಲ್ಲಿ, ಶೇ.90.9ರಷ್ಟು ಸಾರ್ವಜನಿಕ ಉದ್ಯಮಗಳಲ್ಲಿ, ಶೇ.95.2ರಷ್ಟು ಸರ್ಕಾರಿ ಪ್ರಾಯೋಜಿತ ಘಟಕಗಳಲ್ಲಿ ಮತ್ತು 15.9 ಕೋಟಿ ಖಾಸಗಿ ಉದ್ಯಮಗಳಲ್ಲಿ ಸಕ್ರಿಯವಾಗಿ ಇವೆ. ಈ ಅಂಕಿ ಸಂಖ್ಯೆಗಳು ಸಿ.ಪಿ.ಸಿ ಯ ವ್ಯಾಪ್ತಿ ಮತ್ತು ಪ್ರಭಾವವನ್ನು ವಿವರಿಸುತ್ತವೆ.

ಸಿ.ಪಿ.ಸಿ. ಯ ಪ್ರಧಾನ ಕಾರ್ಯದರ್ಶಿ ಕ್ಸಿ ಜಿನ್‌ಪಿಂಗ್, ಶತಮಾನೋತ್ಸವದ ಆಚರಣೆಯನ್ನು ಉದ್ಘಾಟಿಸುತ್ತ ಹೀಗೆ ಹೇಳಿದರು. "ನಮ್ಮ ಪಕ್ಷದ ಇತಿಹಾಸವು ಮಾರ್ಕ್ಸ್‌ವಾದವನ್ನು ಚೀನಾದ ಸಂದರ್ಭಕ್ಕೆ ನಿರಂತರವಾಗಿ ಅಳವಡಿಸಿಕೊಳ್ಳುವ ಇತಿಹಾಸವೇ ಆಗಿದೆ.. ಅದರ ನೂರು ವರ್ಷಗಳ ಇತಿಹಾಸದುದ್ದಕ್ಕೂ ಜನರೊಂದಿಗೆ ಏಕಭಾವವನ್ನು ಹೊಂದಿದೆ. ಜನರಂತೆಯೇ ಉಸಿರಾಡಿದೆ. ಜನರ ದುಃಖದುಮ್ಮಾನಗಳನ್ನು ಹಂಚಿಕೊಂಡಿದೆ. ಜನರ ನಂಬಿಕೆ ಮತ್ತು ಬೆಂಬಲಗಳಿಂದಾಗಿಸಿ.ಪಿ.ಸಿ ಯು ಎಲ್ಲ ಅಡೆ ತಡೆಗಳ ನಡುವೆಯೂ ಅಜೇಯವಾಗಿದೆ. ಚೀನೀ ರಾಷ್ಟ್ರದ ಮಹಾನ್ ಕಾಯಕಲ್ಪಕ್ಕೆ ಮುಂದಾಗಲು ಒಂದು ತಡೆಯಲು ಅಸಾಧ್ಯವಾದ ಶಕ್ತಿಯನ್ನು ಸೃಷ್ಟಿಸಲು 1.4 ಶತಕೋಟಿ ಚೀನಾ ಜನತೆಯ ಐಕ್ಯತೆಯನ್ನು ಗಟ್ಟಿಗೊಳಿಸುವುದು ಸಿ.ಪಿ.ಸಿ ಯ ಕರ್ತವ್ಯವಾಗಿದೆ."

ತೀವ್ರಗೊಂಡ ಕಾರ್ಮಿಕ ಹೋರಾಟಗಳು 2006-2008



2006-2008ರ ತೀವ್ರ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟಿನ ಸಮಯ ಜಗತ್ತಿನಲ್ಲೂ ಮತ್ತು ಭಾರತದಲ್ಲೂ ಜಾಗತೀಕರಣದ ಧೋರಣೆಗಳ ವಿರುದ್ಧ ಸಮರಶೀಲ ಹೋರಾಟಗಳ ಅವಧಿ ಕೂಡ ಆಗಿತ್ತು.

ಮೂಲ ಲೇಖಕರು: ಸುಕೋಮಲ್ ಸೇನ್

ಸಂಗ್ರಹ-ಅನುವಾದ: ಸಿ. ಆರ್.ಶಾನಭಾಗ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಆಯೋಜಿತ 8 ಜುಲೈ 2006 ರ ಸಮಾವೇಶ

ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯು ಕೇಂದ್ರ ಸರ್ಕಾರದ ಜನ ವಿರೋಧಿ ಮತ್ತು ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಜುಲೈ 25, 2006 ರಂದು ನವದೆಹಲಿಯ ಮಾಲವಂಕರ್ ಸಭಾಂಗಣದಲ್ಲಿ ರಾಷ್ಟ್ರೀಯ ಸಮಾವೇಶವನ್ನು ಆಯೋಜಿಸಿತು. ಕೇಂದ್ರ ಕಾರ್ಮಿಕ ಸಂಘಗಳನ್ನು ಪ್ರತಿನಿಧಿಸುವ ಸುಮಾರು 1500 ಪ್ರತಿನಿಧಿಗಳು – ಸಿಐಟಿಯು, ಎಚ್‌ಎಂಎಸ್, ಟಿಯುಸಿಸಿ, ಯುಟಿಯುಸಿ, ಯುಟಿಯುಸಿ-ಎಲ್‌ಎಸ್, ಎಐಎಸ್‌ಜಿಇಎಫ್, ಕೇಂದ್ರ ಸರ್ಕಾರಿ ನೌಕರರು, ಬ್ಯಾಂಕ್, ವಿಮೆ, ರೈಲ್ವೆ, ಅಂಚೆ, ನಾಗರಿಕ ವಿಮಾನಯಾನ, ರಕ್ಷಣಾ ಮತ್ತು ಟೆಲಿಕಾಂ ಸೇರಿದಂತೆ ಅಖಿಲ ಭಾರತ ಒಕ್ಕೂಟಗಳು ಸಮಾವೇಶದಲ್ಲಿ ಭಾಗವಹಿಸಿದ್ದವು. ಸಮಾವೇಶದಲ್ಲಿ ಅಂಗೀಕರಿಸಿದ ಘೋಷಣೆಯು ಅಗತ್ಯ ವಸ್ತುಗಳ ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು, ಹೆಚ್ಚುತ್ತಿರುವ ನಿರುದ್ಯೋಗ, ಪಿ.ಎಸ್. ಯು.ಗಳ ಖಾಸಗೀಕರಣ, ಕಾರ್ಮಿಕ- ವಿರೋಧಿ ಕಾರ್ಮಿಕ ಸುಧಾರಣೆಗಳು ಮತ್ತು ಪಿಂಚಣಿಯನ್ನು ಖಾಸಗೀಕರಣಗೊಳಿಸುವುದು, ಸರ್ಕಾರಿ ಇಲಾಖೆಗಳ ಇಳಿಕೆ ಇತ್ಯಾದಿಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿತು.

ಈ ಕೆಳಗಿನ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಸಮಾವೇಶದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

- 16 ಆಗಸ್ಟ್‌ನಿಂದ 15 ಸೆಪ್ಟೆಂಬರ್ 2006 ರವರೆಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮಾವೇಶಗಳನ್ನು ನಡೆಸುವುದು
- 20 ಸೆಪ್ಟೆಂಬರ್ 2006 ಪ್ರದರ್ಶನಗಳು ಮತ್ತು ರ್‍ಯಾಲಿಗಳನ್ನು ನಡೆಸುವ ಮೂಲಕ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕಾಗಿ ಸಜ್ಜುಗೊಳಿಸುವ ರಾಷ್ಟ್ರೀಯ ದಿನ.
- 29 ನವೆಂಬರ್ 2006 ಮುಷ್ಕರ ನೋಟಿಸ್ ನೀಡುವ ದಿನ
- 14 ಡಿಸೆಂಬರ್ 2006 ಅಖಿಲ ಭಾರತ ಸಾರ್ವತ್ರಿಕ ಮುಷ್ಕರ

ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಸರ್ಕಾರವು ಮಂಡಿಸಿದ ಪಿಂಚಣಿ ಖಾಸಗೀಕರಣ ಮಸೂದೆಯನ್ನು ವಿರೋಧಿಸಲು, ಸಮಾವೇಶವು ಸರ್ವಾನುಮತದಿಂದ ನಿರ್ಧರಿಸಿತು:

ರಾಷ್ಟ್ರವ್ಯಾಪಿ ಮುಷ್ಕರ -14 ಡಿಸೆಂಬರ್ 2006

14 ಡಿಸೆಂಬರ್ 2006 ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಸಾಟಿಯಿರಲಿಲ್ಲ. ಮುಷ್ಕರದಲ್ಲಿ 10 ದಶಲಕ್ಷಕ್ಕೂ ಹೆಚ್ಚು ರಾಜ್ಯ ಸರ್ಕಾರಿ ನೌಕರರು, ಶಿಕ್ಷಕರು, ಮಂಡಳಿ ನಿಗಮ ಮತ್ತು ಸಾರ್ವಜನಿಕ ವಲಯದ ನೌಕರರು ಬೃಹತ್ ಪ್ರಮಾಣದಲ್ಲಿ ಭಾಗವಹಿಸಿದ್ದರು. ಬ್ಯಾಂಕ್ ಮತ್ತು ವಿಮಾ ಕ್ಷೇತ್ರಗಳಲ್ಲಿ, ಬಿಎಸ್‌ಎನ್‌ಎಲ್, ಕೇಂದ್ರ ಸರ್ಕಾರಿ ಇಲಾಖೆಗಳು, ಬಂದರುಗಳು, ಹಡಗುಕಟ್ಟೆಗಳು, ವಿಮಾನ ನಿಲ್ದಾಣಗಳು, ರೈಲ್ವೆ, ಚಹಾ ಮತ್ತು ಕಾಫಿ ತೋಟಗಳು, ಕಲ್ಲಿದ್ದಲು ಗಣಿಗಳಲ್ಲಿ, ಉಕ್ಕಿನ ಉದ್ಯಮದಲ್ಲಿ – ಸಾರ್ವಜನಿಕ ಮತ್ತು ಖಾಸಗಿ ಸ್ವಾಮ್ಯದ ಕೈಗಾರಿಕೆಗಳ ಎಲ್ಲಾ ಕ್ಷೇತ್ರಗಳಲ್ಲಿ ಮುಷ್ಕರ ಬಹುತೇಕ ಸಂಪೂರ್ಣವಾಗಿತ್ತು. ದೇಶದ ಅನೇಕ ಭಾಗಗಳಲ್ಲಿ, ಮುಷ್ಕರನಿರತ ಕಾರ್ಮಿಕರು ಬೃಹತ್ ಪ್ರದರ್ಶನಗಳನ್ನು ನಡೆಸಿದರು. ಕೆಲವು ರಾಜ್ಯಗಳಲ್ಲಿ ಬೆದರಿಕೆಗಳು ಮತ್ತು ದೊಡ್ಡ ಪ್ರಮಾಣದ ಬಂಧನಗಳು ಹೋರಾಡುವ ಲಕ್ಷಾಂತರ ಜನರನ್ನು ತಡೆಯಲು ಸಾಧ್ಯವಾಗಲಿಲ್ಲ. ರೈತರು, ವಿದ್ಯಾರ್ಥಿಗಳು ಮತ್ತು ದುಡಿಯುವ ಜನಸಮೂಹದ ಹಲವಾರು ವಿಭಾಗಗಳು ಮುಷ್ಕರಕ್ಕೆ ಸೇರಿಕೊಂಡವು. ಎಡ ಸಂಸದರು ಮುಷ್ಕರವನ್ನು ಬೆಂಬಲಿಸಿ ಸಂಸತ್ತಿನ ಮುಂದೆ ಪ್ರದರ್ಶನ ನಡೆಸಿದರು.

ಕರ್ನಾಟಕದಲ್ಲಿ ಸರ್ಕಾರದ ಬೆದರಿಕೆಯನ್ನು ನಿರ್ಲಕ್ಷಿಸಿ ಹೆಚ್ಚಿನ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು. ಅರುಣಾಚಲ ಪ್ರದೇಶದಲ್ಲಿ ಮುಷ್ಕರ ಭರ್ಜರಿ ಯಶಸ್ಸನ್ನು ಕಂಡಿತು. ಮಣಿಪುರದಲ್ಲಿ ದಂಗೆಕೋರ ಪಡೆಗಳ ಹಿಂಸಾಚಾರದ ಹೊರತಾಗಿಯೂ ಮುಷ್ಕರದ ಪ್ರತಿಕ್ರಿಯೆ ಉತ್ತಮವಾಗಿತ್ತು. ಮುಷ್ಕರವು ಹರಿಯಾಣದಲ್ಲಿ ಉತ್ತಮ ಪ್ರತಿಕ್ರಿಯೆ ನೀಡಿತು. ಹರಿಯಾಣದಲ್ಲಿ, ಪ್ರದರ್ಶನಗಳನ್ನು ನಿಷೇಧಿಸುವ ನ್ಯಾಯಾಲಯದ ಆದೇಶವನ್ನು ಧಿಕ್ಕರಿಸಿ, ನೌಕರರು ಮತ್ತು ಕಾರ್ಮಿಕರು ಪ್ರದರ್ಶನಗಳನ್ನು ಆಯೋಜಿಸಿದರು. ಗುರಗಾಂವ್‌ನಲ್ಲಿ 18 ಮತ್ತು ಗೋಹಾನಾದಲ್ಲಿ 20 ಕಾರ್ಮಿಕರನ್ನು ಮತ್ತು ನೌಕರರನ್ನು ಬಂಧಿಸಲಾಯಿತು. ಆಂಧ್ರಪ್ರದೇಶದಲ್ಲಿ ಇದು ಸರ್ಕಾರಿ ಕಚೇರಿಗಳಲ್ಲಿ ಪೂರ್ಣ ಮುಷ್ಕರವಾಗಿತ್ತು. ಅವರ ನಾಯಕರು ಸೇರಿದಂತೆ 500 ಕ್ಕೂ ಹೆಚ್ಚು ಸರ್ಕಾರಿ ನೌಕರರನ್ನು ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು. ಪಶ್ಚಿಮ ಬಂಗಾಳ ಮತ್ತು ಮಹಾರಾಷ್ಟ್ರದಲ್ಲಿ ಮುಷ್ಕರ ಸಂಪೂರ್ಣ. ಉತ್ತರ ಪ್ರದೇಶದಲ್ಲಿ ಮುಷ್ಕರ ಬಹುತೇಕ ಪೂರ್ಣಗೊಂಡಿತು. ಮಧ್ಯಪ್ರದೇಶದಲ್ಲಿ ನೌಕರರು ದಿನವಿಡೀ ಧರಣಿ ನಡೆಸಿದರು. ಗೋವಾ ಮತ್ತು ಮಿಜೋರಾಂನಲ್ಲಿ, ನೌಕರರು ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿದ್ದರು. ಗುಜರಾತ್‌ನಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಮತ್ತು ನೌಕರರು ಮುಷ್ಕರದಲ್ಲಿ ಪಾಲ್ಗೊಂಡರು.

ಜಾಗತಿಕ ಹಸಿವು ಮತ್ತು ಭಾರತ

2009 ಅಕ್ಟೋಬರ್ 16 ರಂದು ವಿಶ್ವ ಆಹಾರ ದಿನಾಚರಣೆಗಾಗಿ ಬಿಡುಗಡೆಯಾದ 2008 ರ ಜಾಗತಿಕ ಹಸಿವು ಸೂಚ್ಯಂಕದ ಪ್ರಕಾರ, ವಿಶ್ವದ ಮೂವತ್ತಮೂರು ದೇಶಗಳು ಆತಂಕಕಾರಿ ಅಥವಾ ಅತ್ಯಂತ ಆತಂಕಕಾರಿಯಾದ ಹಸಿವನ್ನು ಹೊಂದಿವೆ. ದಕ್ಷಿಣ ಏಷ್ಯಾ ಮತ್ತು ಆಫ್ರಿಕಾದ ಸಹಾರಾ ಮರುಭೂಮಿಯ ದೇಶಗಳು ಇನ್ನೂ ಹೆಚ್ಚಿನ ಮಟ್ಟದ ಹಸಿವಿನಿಂದ ಬಳಲುತ್ತಿವೆ. ದಕ್ಷಿಣ ಏಷ್ಯಾದಲ್ಲಿ ಐದು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಕಡಿಮೆ ತೂಕ ವ್ಯಾಪಕವಾಗಿದೆ, ಇದು ಹೆಚ್ಚಾಗಿ ಮಹಿಳೆಯರ ಕಡಿಮೆ ಪೌಷ್ಠಿಕಾಂಶ ಮತ್ತು ಶೈಕ್ಷಣಿಕ ಸ್ಥಿತಿ, ಕಳಪೆ ಪೋಷಣೆ ಮತ್ತು ಅಸಮರ್ಪಕ ಆರೋಗ್ಯ ಕಾರ್ಯಕ್ರಮಗಳು, ನೀರು ಮತ್ತು ನೈರ್ಮಲ್ಯ ಸೇವೆಗಳ ಪರಿಣಾಮವಾಗಿದೆ.

ರಾಷ್ಟ್ರೀಯ ಮತ್ತು ಜಾಗತಿಕ ಮಟ್ಟದಲ್ಲಿ ಪರಿಹಾರ-ಕ್ರಮ ಕೈಗೊಳ್ಳಲು ಆದ್ಯತೆ ಮೇರೆಗೆ ಆಹಾರ ಮಾರುಕಟ್ಟೆಗಳ ಹೊರಗೆ ಕಡಿಮೆ ಬೆಲೆಯಲ್ಲಿ ಬಡ ಜನರ ತಕ್ಷಣದ ಆಹಾರ ಅಗತ್ಯಗಳನ್ನು ಪೂರೈಸಬೇಕು. ಅದೇ ಸಮಯದಲ್ಲಿ, ರಾಷ್ಟ್ರೀಯ ಸರ್ಕಾರಗಳು ಮತ್ತು ಜಾಗತಿಕ ಸಮುದಾಯವು ಕೃಷಿ ಮತ್ತು ಆಹಾರ ಉತ್ಪಾದನೆಯಲ್ಲಿ ಹೂಡಿಕೆ ಮಾಡುವ ಮೂಲಕ ಕೃಷಿ ನೀತಿಯಲ್ಲಿ ಹಿಂದಿನ ವೈಫಲ್ಯಗಳನ್ನು ಸರಿಪಡಿಸಲು ಪ್ರಾರಂಭಿಸಬೇಕು, ಹೆಚ್ಚು ದುರ್ಬಲ ಜನರಿಗೆ ಸಮಯೋಚಿತವಾಗಿ ಸಹಾಯ ಮಾಡಲು ವಿಶ್ವಾಸಾರ್ಹ ವ್ಯವಸ್ಥೆಗಳನ್ನು ಸ್ಥಾಪಿಸಬೇಕು ಎಂದು ವರದಿ ಹೇಳಿತು.

2008 ಭಾರತ ಹಸಿವು ಸೂಚ್ಯಂಕ – ಪ್ರಮುಖ ಸಂಶೋಧನೆಗಳು ಮತ್ತು ಸಂಗತಿಗಳು

- 2008 ರ ಜಾಗತಿಕ ಹಸಿವು ಸೂಚ್ಯಂಕದಲ್ಲಿ (ಜಿಹೆಚ್‌ಐ) ಭಾರತವು 88 ದೇಶಗಳಲ್ಲಿ 66 ನೇ ಸ್ಥಾನದಲ್ಲಿದೆ;
- ಜಿ.ಹೆಚ್.ಐ.ನಂತೆ, 2008 ರ ಇಂಡಿಯಾ ಸ್ಟೇಟ್ ಹಂಗರ್ ಇಂಡೆಕ್ಸ್ (ಐ.ಎಸ್.ಎಚ್.ಐ.) ಯನ್ನು ಮೂರು ಸಮಾನ ತೂಕದ ಸೂಚಕಗಳನ್ನು:- ಕ್ಯಾಲೋರಿ ಕೊರತೆಯಿರುವ ಜನಸಂಖ್ಯೆಯ ಅನುಪಾತ, ಐದು ವರ್ಷದೊಳಗಿನ ಕಡಿಮೆ ತೂಕದ ಮಕ್ಕಳ ಹರಡುವಿಕೆ ಮತ್ತು ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ ಬಳಸಿ ಲೆಕ್ಕಹಾಕಲಾಗುತ್ತದೆ:
- ಐ.ಎಸ್.ಎಚ್.ಐ. ಭಾರತದ 17 ಪ್ರಮುಖ ರಾಜ್ಯಗಳ ಹಸಿವಿನ ಮಟ್ಟವನ್ನು ಲೆಕ್ಕಾಚಾರ ಮಾಡುತ್ತದೆ, ಇದು ಜನಸಂಖ್ಯೆಯ 95 ಪ್ರತಿಶತಕ್ಕಿಂತ ಹೆಚ್ಚಿನದನ್ನು ಪ್ರತಿನಿಧಿಸುತ್ತದೆ;
- ಭಾರತವು ವಿಶ್ವದ ಅತಿದೊಡ್ಡ ಆಹಾರ ಅಸುರಕ್ಷಿತ ಜನಸಂಖ್ಯೆಗೆ ನೆಲೆಯಾಗಿದೆ, 200 ದಶಲಕ್ಷಕ್ಕೂ ಹೆಚ್ಚು ಜನರು ಹಸಿವಿನಿಂದ ಬಳಲುತ್ತಿದ್ದಾರೆ;
- ಜಿ.ಎಚ್.ಐ.ನಲ್ಲಿರುವ ದೇಶಗಳಿಗೆ ಹೋಲಿಸಿದಾಗ, ಭಾರತದ ರಾಜ್ಯಗಳ ಶ್ರೇಯಾಂಕವು 34 ನೇ (ಪಂಜಾಬ್) ನಿಂದ 82 ನೇ (ಮಧ್ಯಪ್ರದೇಶ) ವರೆಗೆ ಇರುತ್ತದೆ. ಇದು ರಾಜ್ಯಗಳಲ್ಲಿ ಗಣನೀಯ ವ್ಯತ್ಯಾಸವನ್ನು ಸೂಚಿಸುತ್ತದೆ;
- ಭಾರತದ ಎಲ್ಲಾ ರಾಜ್ಯಗಳು ಕನಿಷ್ಠ "ಗಂಭೀರ" ಮಟ್ಟದ ಹಸಿವನ್ನು ಹೊಂದಿವೆ; ಕಡಿಮೆ ಅಥವಾ ಮಧ್ಯಮ ಮಟ್ಟವನ್ನು ಹೊಂದಿರುವ ಒಂದೇ ರಾಜ್ಯವೂ ಇಲ್ಲ;
- ಹನ್ನೆರಡು ರಾಜ್ಯಗಳು "ಆತಂಕಕಾರಿ" ವಿಭಾಗಕ್ಕೆ ಸೇರುತ್ತವೆ ಮತ್ತು ಒಂದು (ಮಧ್ಯಪ್ರದೇಶ) ಹಸಿವಿನ ಮಟ್ಟದಲ್ಲಿ "ಅತ್ಯಂತ ಆತಂಕಕಾರಿ" ಎಂದು ಪರಿಗಣಿಸಲಾಗಿದೆ.

ಜಿ.ಹೆಚ್.ಐ.ನಲ್ಲಿ ಭಾರತದ ಕಳಪೆ ಸಾಧನೆ-ಮುಖ್ಯವಾಗಿ ಮಕ್ಕಳ ಅಪೌಷ್ಠಿಕತೆಯ ಪ್ರಮಾಣ ಮತ್ತು ಕ್ಯಾಲೊರಿ ಕೊರತೆಯ ಆಹಾರದಿಂದ ಉಂಟಾಗುವ ಕುಪೋಷಣೆಯ ಕಾರಣದಿಂದಾಗಿ ಉಂಟಾಗಿದೆ.

ಎಡಪಂಥೀಯರ ಪಾತ್ರ

ಎಫ್.ಡಿ.ಐ. ಹರಿವಿಗೆ ಭಾರತದ ಆರ್ಥಿಕತೆಯನ್ನು ಸಂಪೂರ್ಣವಾಗಿ ತೆರೆಯುವುದರ ವಿರುದ್ಧ ಎಡಪಂಥೀಯರ ತೀವ್ರ ವಿರೋಧದಿಂದಾಗಿ ಭಾರತದ ಆರ್ಥಿಕತೆ ಅಮೆರಿಕನ್ ಆರ್ಥಿಕತೆಯೊಂದಿಗೆ ಪೂರ್ತಿಯಾಗಿ ಜೋಡಣೆಯಾಗದಿದ್ದುದರಿಂದ ಭಾರತ ನೇರ ಕುಸಿತದಿಂದ ಪಾರಾಯಿತು.. ಜೋಡಣೆಯಾಗುವುದು ಮನಮೋಹನ್ ಸಿಂಗ್ ಅವರ ಕನಸಾಗಿತ್ತು, ಆದರೆ ಎಡಪಂಥೀಯರ ಕಾರಣದಿಂದಾಗಿ ಸಂಪೂರ್ಣವಾಗಿ ಯಶಸ್ವಿಯಾಗಿಸಲು ಸಾಧ್ಯವಾಗಲಿಲ್ಲ. ನೌಕರರು ಮತ್ತು ಕಾರ್ಮಿಕ ವರ್ಗ ಸಾಮಾನ್ಯವಾಗಿ ಸಾಕಷ್ಟು ಆರ್ಥಿಕ ಮತ್ತು ಸಾಮಾಜಿಕ ದೂರದೃಷ್ಟಿಯೊಂದಿಗೆ ಎಡಪಂಥೀಯರ ದೇಶಭಕ್ತಿಯ ಪಾತ್ರವನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಪ್ರಶಂಸಿಸಬೇಕು. ಇದು ದೇಶವನ್ನು ಬಹಳ ಮಟ್ಟಿಗೆ ಉಳಿಸಿದೆ. ಆದರೆ 15 ನೇ ಲೋಕಸಭಾ ಚುನಾವಣೆಯ ನಂತರ ಬದಲಾದ ರಾಜಕೀಯ ಸನ್ನಿವೇಶದಲ್ಲಿ. ಸರ್ಕಾರ ಮತ್ತೆ ಯು.ಎಸ್. ಆರ್ಥಿಕತೆ ಮತ್ತು ಎಂ.ಎನ್.ಸಿ.ಗಳ ಮೇಲೆ ಹೆಚ್ಚು ಅವಲಂಬಿತವಾಗುತ್ತಿದೆ.

ಸಂಯುಕ್ತ ರಾಷ್ಟ್ರ ಸಂಸ್ಥೆ ಮತ್ತು ಐ.ಎಲ್.ಓ. ನಿಂದ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯ 60 ನೇ ವರ್ಷಾಚರಣೆ

ವಿವಿಧ ದೇಶಗಳಲ್ಲಿ ಟ್ರೇಡ್ ಯೂನಿಯನ್ ಹಕ್ಕುಗಳನ್ನು ನೀಡುವುದು: ಈ ವರದಿಯಲ್ಲಿ ಮಾನವ ಹಕ್ಕುಗಳ ಮತ್ತು ಟ್ರೇಡ್ ಯೂನಿಯನ್ ಹಕ್ಕುಗಳ ಘೋಷಣೆಯನ್ನು ಜಾರಿಗೆ ತರದ ದೇಶಗಳಲ್ಲಿ ಭಾರತವೂ ಒಂದು ಎಂದು ತಿಳಿದುಬಂದಿತು..

2008 ನೇ ವರ್ಷ, ವಿಶ್ವಸಂಸ್ಥೆ 1948 ರಲ್ಲಿ ಸಾರ್ವತ್ರಿಕ ಮಾನವ ಹಕ್ಕುಗಳ ಘೋಷಣೆಯ 60 ನೇ ವರ್ಷವಾಗಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಒ) ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮಾನವ ಹಕ್ಕುಗಳ ಒಂದು ಭಾಗವೆಂದು ಪರಿಗಣಿಸಿದೆ. ಐಎಲ್ಒ ತನ್ನ ಜೂನ್, 2008 ರ 97 ನೇ ಅಧಿವೇಶನದಲ್ಲಿ, ವಿವಿಧ ಸದಸ್ಯ ರಾಷ್ಟ್ರಗಳಲ್ಲಿ ಈ ನಿರ್ಣಯದ ಅನುಷ್ಠಾನದ ಬಗ್ಗೆ ವಿಮರ್ಶೆ ಮಾಡಿದೆ. ಭಾರತ ಐಎಲ್ಒ ಸದಸ್ಯ ರಾಷ್ಟ್ರವಾಗಿದ್ದರೂ, ಭಾರತದ ಕಾರ್ಮಿಕರಿಗೆ ಈ ಹಕ್ಕುಗಳನ್ನು ಇನ್ನೂ ಜಾರಿಗೆ ತಂದಿಲ್ಲ.

ಈ ಪರಿಸ್ಥಿತಿಯಲ್ಲಿಯೇ, ಮುಷ್ಕರದ-ಹಕ್ಕು ಸೇರಿದಂತೆ ಪೂರ್ಣ ಟ್ರೇಡ್ ಯೂನಿಯನ್ ಹಕ್ಕುಗಳ ಪ್ರಶ್ನೆಯು ಭಾರತದ ಸಂದರ್ಭದಲ್ಲಿ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ, ಏಕೆಂದರೆ ಸರ್ಕಾರಿ ನೌಕರರು ಮತ್ತು ಶಿಕ್ಷಕರಿಗೆ ಟ್ರೇಡ್ ಯೂನಿಯನ್ ಹಕ್ಕನ್ನು ನೀಡಲು ಸರ್ಕಾರ ನಿರಾಕರಿಸುತ್ತಿದೆ. ಇದಲ್ಲದೆ, ಕಾರ್ಮಿಕ ವರ್ಗವು ತಮ್ಮ ಸುದೀರ್ಘ ಕದನಗಳು ಮತ್ತು ತ್ಯಾಗದ ಮೂಲಕ ಸಾಧಿಸಿದ ಟ್ರೇಡ್ ಯೂನಿಯನ್ ಹಕ್ಕುಗಳನ್ನು ವ್ಯವಸ್ಥಿತವಾಗಿ ಮೊಟಕುಗೊಳಿಸುತ್ತಿದೆ. 1926 ರ ಮೂಲ ಟ್ರೇಡ್ ಯೂನಿಯನ್ ಕಾಯ್ದೆಯನ್ನು ಸಹ ಸರ್ಕಾರದ ಸಂಸತ್ತಿನ ಬಹುಮತವನ್ನು ಬಳಸಿಕೊಂಡು ಪ್ರತಿಗಾಮಿ ರೀತಿಯಲ್ಲಿ ತಿದ್ದುಪಡಿ ಮಾಡಲಾಗಿದೆ.

ಕಾರ್ಮಿಕ ವರ್ಗದ ವಿಶ್ವವ್ಯಾಪಿ ಹೋರಾಟ

ಈ ಸಮರಶೀಲ ಹೋರಾಟಗಳು ಜಾಗತೀಕರಣ-ವಿರೋಧಿ ಮತ್ತು ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಶಕ್ತಿಗಳಿಗೆ ಅತ್ಯಂತ ಮಹತ್ವದ ಮತ್ತು ಸ್ವಾಗತಾರ್ಹ ಮುನ್ನಡೆಯಾಗಿವೆ. ವಾಸ್ತವವಾಗಿ ಜಾಗತೀಕರಣವು ಪಶ್ಚಿಮದ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಪ್ರಾಬಲ್ಯದೊಂದಿಗೆ ರಾಷ್ಟ್ರಗಳ ಸಾರ್ವಭೌಮತ್ವವನ್ನು ಹಾಳು ಮಾಡುತ್ತಿದೆ. ಲ್ಯಾಟಿನ್ ಅಮೆರಿಕದ ಹನ್ನೆರಡು ದೇಶಗಳಲ್ಲಿನ ಚುನಾವಣೆಗಳು ಬಲಪಂಥೀಯ-ಪರ, ಸಾಮ್ರಾಜ್ಯಶಾಹಿ ಮತ್ತು ಜಾಗತೀಕರಣ ಪರ ಸರ್ಕಾರಗಳನ್ನು ತಿರಸ್ಕರಿಸಿ ಹೊಸ ಎಡಪಂಥೀಯ ಸರ್ಕಾರಗಳನ್ನು ಆಯ್ಕೆ ಮಾಡಿವೆ. ಲ್ಯಾಟಿನ್ ಅಮೆರಿಕಾದ ವೆನಿಜುವೆಲಾದ ಸಮರಶೀಲ ಸಾಮೂಹಿಕ ದಂಗೆಗಳು ಮತ್ತು ಎಡಪಂಥೀಯ ಸಾಮ್ರಾಜ್ಯಶಾಹಿ ವಿರೋಧಿ ಅಧ್ಯಕ್ಷ ಹ್ಯೂಗೋ ಚಾವೆಜ್ ಅವರು ಅಧ್ಯಕ್ಷ ಸ್ಥಾನದಲ್ಲಿ ಮುಂದುವರೆದಿರುವುದು ಅತ್ಯಂತ ಸ್ಫೂರ್ತಿದಾಯಕ ಅಂತರರಾಷ್ಟ್ರೀಯ ಘಟನೆಯಾಗಿದೆ. ಇದು ನೇರವಾಗಿ ಚುನಾಯಿತವಾದ ಜನಪ್ರಿಯ ರಾಷ್ಟ್ರಪತಿಯನ್ನು ಪದಚ್ಯುತಗೊಳಿಸಲು ಪ್ರಯತ್ನ ಮಾಡಿದ ಯು.ಎಸ್. ಸಾಮ್ರಾಜ್ಯಶಾಹಿಗಳಿಗೆ ಮತ್ತು ಅದರ ಲೂಟಿಕೋರರಿಗೆ ಪಾಠ ಕಲಿಸಲು ಆ ದೇಶದ ಜನರ ಅಭೂತಪೂರ್ವ ಶೌರ್ಯ ಮತ್ತು ದೃಢ ನಿಶ್ಚಯವಾಗಿದೆ. ಫಿಡೆಲ್ ಕ್ಯಾಸ್ಟ್ರೊ ನೇತೃತ್ವದ ಕ್ಯೂಬಾದೊಂದಿಗೆ ಯುಎಸ್ ಸಾಮ್ರಾಜ್ಯಶಾಹಿಗೆ ಧೈರ್ಯದಿಂದ ಸವಾಲು ಮಾಡಲು ಮತ್ತು ಸಮಾಜವಾದದ ಗುರಿಯನ್ನು ಸಾಧಿಸಲು ದಾರಿದೀಪವಾಗಿವೆ.

ಸರ್ಕಾರಿ ನೌಕರರ ಪಿಂಚಣಿ ಮೇಲೆ ದಾಳಿ – ಹೊಸ ಪಿಂಚಣಿ ಯೋಜನೆ

ಸರ್ಕಾರಿ ನೌಕರರ ಕುರಿತು ಯು.ಪಿ.ಎ. ಸರ್ಕಾರದ ಅತ್ಯಂತ ಅಪಾಯಕಾರಿ ಪ್ರಯತ್ನವೆಂದರೆ ನೌಕರರು ಮತ್ತು ಶಿಕ್ಷಕರ ಶಾಸನಬದ್ಧ ಪಿಂಚಣಿ ಪ್ರಯೋಜನಗಳನ್ನು ಖಾಸಗೀಕರಣಗೊಳಿಸಲು ಸಂಸತ್ತಿನಲ್ಲಿ ಪಿ.ಎಫ್.ಆರ್.ಡಿ.ಎ. **ಪುಟ 14 ನೋಡಿ**

ಪುಟ 9 ರಿಂದ

ಕಾಂ.ಎನ್. ಶಂಕರಯ್ಯ
ಶತಾಯುಷಿ ಸ್ವಾತಂತ್ರ್ಯ ಹೋರಾಟಗಾರ



ಹೆಸರನ್ನು ನಮೂದಿಸಲಾಗಿತ್ತು. ಆ ಮೊಕದ್ದಮೆಯಲ್ಲಿ ಪಕ್ಷದ ಅನೇಕ ನಾಯಕರು ಮತ್ತು ಕಾರ್ಯಕರ್ತರನ್ನು ಆರೋಪಿಗಳನ್ನಾಗಿ ಮಾಡಲಾಗಿತ್ತು. ಇತರ ಕಾರ್ಮಿಕ ಸಂಘಗಳ ಮುಖಂಡರನ್ನು ಹತ್ಯೆ ಮಾಡಲು ಕಮ್ಯೂನಿಸ್ಟ್ ಪಕ್ಷದ ಕಛೇರಿಯನ್ನು ಬಳಸಲಾಗಿತ್ತು ಎಂಬ ಆರೋಪ ಹೊರಿಸಲಾಗಿತ್ತು.

ವಿಚಾರಣೆಯ ಸಂದರ್ಭದಲ್ಲಿ ಪಿ. ರಾಮಮೂರ್ತಿಯವರು (ಆರೋಪಿಗಳ ಪರವಾಗಿ ತಾನೇ ವಾದ ಮಂಡಿಸುತ್ತ) ಮಧುರೈ ಪಿತೂರಿ ಮೊಕದ್ದಮೆಯ ಪ್ರಮುಖ ಸಾಕ್ಷಿ ಒಬ್ಬ ವಂಚಕ ಹಾಗೂ ಸಾಮಾನ್ಯ ಕಳ್ಳನಾಗಿದ್ದು ಹಲವಾರು ಮೊಕದ್ದಮೆಗಳಲ್ಲಿ ಜೈಲುಶಿಕ್ಷೆಯನ್ನು ಪಡೆದಿದ್ದಾನೆ ಎನ್ನುವ ಸತ್ಯವನ್ನು ಸಾಬೀತು ಮಾಡುತ್ತಾರೆ! ಈ ಪ್ರಕರಣವನ್ನು ಆಲಿಸಿದ ನ್ಯಾಯಾಧೀಶರು ಆಗಸ್ಟ್ 14, 1947 ರಂದು ಜೈಲು ಪ್ರಾಂಗಣಕ್ಕೆ ಬರುತ್ತಾರೆ... ಮತ್ತು ಆ ಪ್ರಕರಣದಲ್ಲಿ ಆರೋಪಕ್ಕೆ ಒಳಗಾದ ಎಲ್ಲಾ ಖೈದಿಗಳನ್ನು ಬಿಡುಗಡೆ ಮಾಡುತ್ತಾರೆ ಹಾಗು ಕಾರ್ಮಿಕರ ಗೌರವಾನ್ವಿತ ಮುಖಂಡರುಗಳ ವಿರುದ್ಧ ಪ್ರಕರಣ ದಾಖಲಿಸಿದ್ದಕ್ಕಾಗಿ ಸರ್ಕಾರವನ್ನು ತೀವ್ರವಾಗಿ ಖಂಡಿಸುತ್ತಾರೆ.

1948 ರಲ್ಲಿ ಸಿಪಿಐ ನಿಷೇಧಕ್ಕೊಳಗಾದ ನಂತರ, ರಾಮಮೂರ್ತಿ ಮತ್ತು ಇತರರಿಗೆ ಮತ್ತೆ ಜೈಲುವಾಸ,



ಪಕ್ಷದ ರಾಜ್ಯಸಮಿತಿ ಕಚೇರಿಯ ಪುಸ್ತಕ ಭಂಡಾರದಲ್ಲಿ

ಈ ಬಾರಿ ಸ್ವತಂತ್ರ ಭಾರತದಲ್ಲಿ. ಏಕೆಂದರೆ ಚುನಾವಣೆಗಳು ನಡೆಯಲಿದ್ದವು ಮತ್ತು ಮದ್ರಾಸ್ ರಾಜ್ಯದಲ್ಲಿ ಎಡಪಂಥೀಯರ ಜನಪ್ರಿಯತೆಯು ಆಳುವ ಕಾಂಗ್ರೆಸ್ ಪಕ್ಷಕ್ಕೆ ಬೆದರಿಕೆ ಒಡ್ಡಿತ್ತು.

ಜಾತಿವಾದ–ಕೋಮುವಾದದ ವಿರುದ್ಧ

1964 ರಲ್ಲಿ ಸಿಪಿಐ(ಎಂ) ಸ್ಥಾಪನೆಯ ಮೊದಲು ಆಗಿನ ಸಿಪಿಐ ರಾಷ್ಟ್ರೀಯ ಮಂಡಳಿಯಿಂದ ಹೊರಬಂದ 32 ಸದಸ್ಯರಲ್ಲಿ ಶಂಕರಯ್ಯ ಒಬ್ಬರು. ಆ 32 ಮುಖಂಡರಲ್ಲಿ ಈಗ "ನಾನು ಮತ್ತು ವಿ.ಎಸ್. ಅಚ್ಯುತಾನಂದನ್ ಮಾತ್ರ ಬದುಕಿ ಉಳಿದಿದ್ದೇವೆ" ಎಂದು ಶಂಕರಯ್ಯ ನೆನಪಿಸಿಕೊಂಡಿದ್ದಾರೆ.

ಶಂಕರಯ್ಯ 1995ರಲ್ಲಿ ಸಿಪಿಐ(ಎಂ)ನ ತಮಿಳುನಾಡು ರಾಜ್ಯ ಕಾರ್ಯದರ್ಶಿಯಾಗಿ ಚುನಾಯಿತರಾದರು. 2002ರ ವರೆಗೂ ಅವರು ಈ ಸ್ಥಾನದಲ್ಲಿ ಮುಂದುವರೆದರು. ಪಕ್ಷದ ಕೇಂದ್ರ ಸಮಿತಿಯ ಸದಸ್ಯರಾಗಿಯೂ ಅವರು ಎರಡು ದಶಕಗಳ ಕಾಲ ಸೇವೆ ಸಲ್ಲಿಸಿದ್ದಾರೆ. ರಾಜ್ಯ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಅವರು ರಾಜ್ಯದಲ್ಲಿನ ಬೆಳವಣಿಗೆಗಳಲ್ಲಿ ತ್ವರಿತವಾಗಿ ಮಧ್ಯಪ್ರವೇಶಿಸುತ್ತಿದ್ದರು.

1998ರಲ್ಲಿ ಕೊಯಮತ್ತೂರಿನಲ್ಲಿ ಬಾಂಬ್ ಸ್ಫೋಟಗಳು, ಅದರ ಬೆನ್ನಲ್ಲಿ ಕೋಮು ಗಲಭೆಗಳು ನಡೆದವು. ಶಂಕರಯ್ಯ ತಮ್ಮ ಸಹಯೋಗಿ ಮತ್ತು ಪ್ರಖ್ಯಾತ ಕಾರ್ಮಿಕ ಮುಂದಾಳು ಉಮಾಮಾಥ್ ಅವರನ್ನು ಈ ಪರಿಸ್ಥಿತಿಯನ್ನು ನಿಭಾಯಿಸಲು ಅಲ್ಲಿಗೆ ಕಳಿಸಿದರು. ಕೊಯಮತ್ತೂರು ಕಾರ್ಮಿಕ ವರ್ಗದ ಆಂದೋಲನ ಬಲಿಷ್ಠವಾಗಿದ್ದ ನಗರ. ಅಲ್ಲಿ ಕೋಮುವಾದ ತಲೆ ಎತ್ತಿದ್ದು ಅವರಿಗೆ ಆತಂಕ ಉಂಟು ಮಾಡಿತ್ತು. ದುಡಿಯುವ ಜನಗಳ ಐಕ್ಯತೆಯನ್ನು ಛಿದ್ರಗೊಳಿಸುವ ಕೋಮುವಾದಿ ಶಕ್ತಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಅವರು ರಾಜ್ಯದ ಮುಖ್ಯಮಂತ್ರಿಗಳನ್ನು ಸಂಪರ್ಕಿಸಿದರು.

1990ರ ದಶಕದ ಉತ್ತರಾರ್ಧದಲ್ಲಿ ತಮಿಳುನಾಡಿನ ದಕ್ಷಿಣದ ಜಿಲ್ಲೆಗಳಲ್ಲಿ ಜಾತಿವಾದಿ ಗಲಭೆಗಳು ಹಲವು ಜೀವಗಳ ಬಲಿ ತಗೊಂಡವು, ಆಸ್ತಿಪಾಸ್ತಿಗಳಿಗೆ ನಷ್ಟ ಉಂಟಾಯಿತು. ಆಗ ಶಂಕರಯ್ಯನವರ ಆಗ್ರಹದ ಮೇರೆಗೆ ಮುಖ್ಯಮಂತ್ರಿ ಕರುಣಾನಿಧಿ ಒಂದು ಸರ್ವಪಕ್ಷ ಸಭೆ ಕರೆದರು. ಅದರಲ್ಲಿ ಮಾತಾಡುತ್ತ ಶಂಕರಯ್ಯ "ನಮ್ಮ ಪಕ್ಷ ಸ್ಮಶಾನ ಶಾಂತಿಯ ಪರವಾಗಿಲ್ಲ. ಈ ಸಭೆಯಲ್ಲಿ ನಾವು ಮಂಡಿಸುವ ಪ್ರಮುಖ ಘೋಷಣೆಗಳ ಮೇಲೆ ರಾಜ್ಯ ಸರಕಾರ ಕ್ರಮಗಳನ್ನು ಕೈಗೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಸಂಘಟನೆಗಳು ಪ್ರಮುಖ ಪಾತ್ರ ವಹಿಸಬೇಕಾಗಿದೆ. ಅಸ್ಪೃಶ್ಯತೆಯ ಪೀಡೆ ತೊಲಗಬೇಕು; ಜಾತಿಗಲಭೆಗಳು ಕೊನೆಗೊಳ್ಳಬೇಕು; ಜನತೆಯ ಐಕ್ಯತೆಯನ್ನು ಕಾಪಾಡಬೇಕು– ಇವು ನಮ್ಮ ಘೋಷಣೆಗಳಾಗಬೇಕು" ಎಂದರು. ಮುಖ್ಯಮಂತ್ರಿಗಳು ಶಂಕರಯ್ಯನವರ ಸೂಚನೆಯನ್ನು ಸ್ವೀಕರಿಸಿದರು. ಇದರ ಆಧಾರದಲ್ಲಿ ಹಲವು ಜಿಲ್ಲೆಗಳಲ್ಲಿ ಸ್ವತಃ ರಾಜ್ಯಸರಕಾರದ ಮುತುವರ್ಜಿಯಿಂದಲೇ ಅಸ್ಪೃಶ್ಯತಾ–



ಪತ್ನಿ ನವಮಣಿ ಅಮ್ಮಾಳ್ ಜೊತೆಗೆ

ವಿರೋಧಿ ಸಮ್ಮೇಳನಗಳು ನಡೆದವು. ಶಂಕರಯ್ಯ ಈ ಸಮ್ಮೇಳನಗಳಲ್ಲಿ ಭಾಗವಹಿಸಿ ಈ ಸಂದೇಶಗಳನ್ನು ಜನರ ನಡುವೆ ಒಯ್ದರು. ರಾಜ್ಯದಲ್ಲಿ ಸಾಮಾನ್ಯ ಸ್ಥಿತಿ ಏರ್ಪಡಲು ಇದು ಬಹಳಷ್ಟು ಸಹಾಯಕವಾಯಿತು.

ಶಾಸಕರಾಗಿ

ಶಂಕರಯ್ಯ ಮೂರು ಬಾರಿ ತಮಿಳುನಾಡು ವಿಧಾನಸಭೆಗೆ ಆಯ್ಕೆಯಾದರು. ಮೊದಲ ಅವಧಿಯಲ್ಲಿ ಅವರು ಪಕ್ಷದ ಶಾಸಕಾಂಗ ವಿಭಾಗದ ಉಪಮುಖ್ಯಸ್ಥರಾಗಿ, ನಂತರದ ಎರಡು ಅವಧಿಗಳಲ್ಲಿ ಮುಖ್ಯಸ್ಥರಾಗಿ ಕೆಲಸ ಮಾಡಿದರು. ಶಾಸಕರಾಗಿ ಅವರು ವ್ಯಾಪಕ ಗೌರವ ಗಳಿಸಿದರು. ತಮಿಳುನಾಡು ವಿಧಾನಸಭೆಯಲ್ಲಿ ತಮಿಳು ಭಾಷೆಯನ್ನು ಮೊದಲು ಬಳಸಿದ್ದು ಕಮ್ಯುನಿಸ್ಟರೇ. 1952 ರಲ್ಲಿ, ತಮಿಳುನಾಡು ವಿಧಾನಸಭೆಯಲ್ಲಿ ತಮಿಳು ಭಾಷೆ ಬಳಸಲು ಅವಕಾಶವೇ ಇರಲಿಲ್ಲ. ಇಂಗ್ಲಿಷ್ ಭಾಷೆಯನ್ನು ಮಾತ್ರ ಬಳಸಬೇಕೆಂಬ ನಿಯಮವಿದ್ದಾಗ, ಶಂಕರಯ್ಯ, ಜೀವನಂದಮ್ ಮತ್ತು ರಾಮಮೂರ್ತಿ ತಮಿಳು ಭಾಷೆಯಲ್ಲಿ ಮಾತನಾಡಿದರು. 6–7 ವರ್ಷಗಳ ನಂತರ ತಮಿಳು ಭಾಷೆ ಬಳಸಬೇಕೆಂಬ ನಿಯಮ ಜಾರಿಗೆ ಬಂತು.

ಶಂಕರಯ್ಯ ತಮಿಳುನಾಡಿನಲ್ಲಿ ರೈತ ಆಂದೋಲನವನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. 1.5 ಕೋಟಿ ಸದಸ್ಯರನ್ನು ಹೊಂದಿರುವ ಭಾರತದ ಅತ್ಯಂತ ದೊಡ್ಡ ರೈತ ಸಂಘಟನೆ ಅಖಿಲ ಭಾರತ ಕಿಸಾನ್ ಸಭಾದ ರಾಜ್ಯ ಅಧ್ಯಕ್ಷರಾದ ಅವರು ನಂತರ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ನಂತರದಲ್ಲಿ ಅಧ್ಯಕ್ಷರಾಗಿ ನೇತೃತ್ವ ನೀಡಿದ್ದಾರೆ.

ಶಂಕರಯ್ಯ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಜನಶಕ್ತಿ'ಯ ಸಂಪಾದಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಸಿಪಿಐ(ಎಂ) ಸ್ಥಾಪನೆಯ ನಂತರ ಅವರು "ಥೀಕ್ಕಥಿರ್" ದೈನಿಕದ ಸಂಪಾದಕರಾಗಿ ಕೆಲಸ ಮಾಡಿದ್ದಾರೆ. ಕಲೆ ಮತ್ತು ಸಾಹಿತ್ಯದಲ್ಲಿನ ಪ್ರವೃತ್ತಿಗಳು, ಧಾರೆಗಳ ಬಗ್ಗೆ ಆಳವಾದ ಒಳನೋಟಗಳನ್ನು ಹೊಂದಿರುವ ಅವರು ತಮಿಳುನಾಡು ಪ್ರಗತಿಶೀಲ ಲೇಖಕರ ಸಂಘದ ಸ್ಥಾಪನೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.

ತಮ್ಮ ವೈಯಕ್ತಿಕ ಬದುಕಿನಲ್ಲೂ ಪ್ರಜಾಪ್ರಭುತ್ವ ಮೌಲ್ಯಗಳನ್ನು ಅನೂಚಾನವಾಗಿ ಪಾಲಿಸುತ್ತಿರುವವರು ಶಂಕರಯ್ಯ. ಸ್ವತಃ ತಾವು ಹುಟ್ಟಿದ ಜಾತಿ–ಧರ್ಮದ ಹೊರಗೆ ಮದುವೆಯಾದ ಅವರ ವಿಸ್ತೃತ ಕುಟುಂಬದಲ್ಲಿ ಹೆಚ್ಚಿನವು ಅಂತರ್ಜಾತೀಯ ಮದುವೆಗಳು. ಇವೆಲ್ಲದರಲ್ಲೂ ಅವರು ಮಹತ್ವದ ಪಾತ್ರ ವಹಿಸಿದ್ದಾರೆ.

ದುಡಿಯುವ ವರ್ಗ ಮತ್ತು ರೈತಾಪಿಗಳ ಬಗೆಗಿನ ಶಂಕರಯ್ಯ ಅವರ ಬದ್ಧತೆ ಇಳಿವಯಸ್ಸಿನಲ್ಲೂ ಕಡಿಮೆಯಾಗಿಲ್ಲ. "ಕಮ್ಯುನಿಸ್ಟರು ಚುನಾವಣಾ ರಾಜಕೀಯಕ್ಕೆ ಸರಿಯಾದ ಉತ್ತರವನ್ನು ಹುಡುಕುತ್ತಾರೆ" ದೊಡ್ಡ ಪ್ರಮಾಣದಲ್ಲಿ ಸಾಮೂಹಿಕ ಚಳುವಳಿಯನ್ನು ಕಟ್ಟುತ್ತಾರೆ ಎಂದು ಕಾಂ. ಶಂಕರಯ್ಯ ಬಲವಾಗಿ ನಂಬುತ್ತಾರೆ.

ಭಗತ್‌ಸಿಂಗ್‌ರ ತ್ಯಾಗದಿಂದ ಪ್ರೇರಣೆ ಪಡೆದು ಬೀದಿಗಿಳಿದ 9 ವರ್ಷದ ಬಾಲಕನ ಆ ಚೇತನವನ್ನು ಈಗಲೂ ಕಾಂ. ಶಂಕರಯ್ಯ ತಮ್ಮ ನೂರನೇ ವಯಸ್ಸಿನಲ್ಲೂ ಉಳಿಸಿಕೊಂಡಿದ್ದಾರೆ.

ಜುಲೈ 15, 2021 ರಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಎಐಕೆಎಸ್, ಎಐಎಡಬ್ಲ್ಯುಯು ಮುಖಂಡರಿಂದ ಶುಭಾಶಯಗಳು





ನವ-ಉದಾರವಾದವೂ ಮತ್ತು ಉಗ್ರ ಬಲ ಪಂಥವೂ ಹಾಗೂ ಕಾರ್ಪೊರೇಟ್-ಹಿಂದುತ್ವ ಮೈತ್ರಿಯೂ



ನವ-ಉದಾರವಾದಿ ಆರ್ಥಿಕ ನೀತಿಗಳ ಬಗ್ಗೆ ವಿಶ್ವಾದ್ಯಂತ ಸಮಕಾಲೀನ ನವ-ಫ್ಯಾಸಿಸ್ಟ್ ಮತ್ತು ಉಗ್ರ ಬಲಪಂಥೀಯ ಚಳುವಳಿಗಳು ಜಾಣ ಮೌನ ವಹಿಸುತ್ತಿರುವುದು ಎದ್ದು ಕಾಣುತ್ತದೆ. ಈ ಜಾಣ ಮೌನದ ಮೂಲಕ ಅವು ನವ-ಉದಾರ ಆರ್ಥಿಕ ನೀತಿಗಳನ್ನು ಅನುಮೋದಿಸುತ್ತವೆ. ಈ ಮೌನ ಸಮ್ಮತಿಗೆ ವಿರುದ್ಧವಾಗಿ, ಕೆಲವು ಸಂದರ್ಭಗಳಲ್ಲಿ, ಈ ನೀತಿಗಳ ಹಿಂದೆ ನಿಂತಿರುವ ದೊಡ್ಡ ಬಂಡವಾಳಗಾರರಿಗೆ ಬೆಂಬಲ ತೋರಿಸುವ ಪ್ರವೃತ್ತಿಗೆ ಒಂದು ಪ್ರಮುಖ ಉದಾಹರಣೆಯೆಂದರೆ, ದೊಡ್ಡ ಉದ್ಯಮಗಳು ಮತ್ತು ಜಾಗತೀಕರಣಗೊಂಡ ಬಂಡವಾಳದೊಂದಿಗೆ ಬಾಂಧವ್ಯ ಹೊಂದಿರುವ ನರೇಂದ್ರ ಮೋದಿಯವರ ನಾಯಕತ್ವದ ಬಿಜೆಪಿ. ತಮ್ಮನ್ನು ಅಧಿಕಾರದ ಗದ್ದುಗೆಗೆ ಏರಿಸಲು ನೆರವಾದ ಈ ಕಾರ್ಪೊರೇಟ್-ಹಿಂದುತ್ವ ಮೈತ್ರಿಯನ್ನು ಮೋದಿಯವರು ಪರಿಣಾಮಕಾರಿಯಾಗಿ ಬೆಸೆದರು. ಅಧಿಕಾರಕ್ಕೆ ಬಂದ ಕೂಡಲೇ, ಈ ಕಾರ್ಪೊರೇಟ್ ಬೆಂಬಲಿಗರುತಿಂದು ತೇಗುವಷ್ಟು ಪ್ರತಿಫಲಗಳನ್ನು ಪಡೆದಿದ್ದಾರೆ. ದೊಡ್ಡ ಬಂಡವಾಳಗಾರರೇ ದೇಶದ "ಸಂಪತ್ತಿನ ಸೃಷ್ಟಿಕರ್ತರು" ಎಂಬ ನೆಲೆಯಲ್ಲಿ ಅವರನ್ನು ಮೋದಿ ಸಮರ್ಥಿಸಿಕೊಳ್ಳುತ್ತಾರೆ! ದೇಶದ ಸಂಪತ್ತಿನ ಹಸ್ತಾಂತರವನ್ನೂ ಸಹ ಅವರು ಸಮರ್ಥಿಸುವುದೂ ಇದೇ ರೀತಿಯಲ್ಲಿ!

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ. ನಾಗರಾಜ್

ಉಗ್ರ ಬಲಪಂಥೀಯ, ಫ್ಯಾಸಿಸ್ಟ್, ಅರೆ-ಫ್ಯಾಸಿಸ್ಟ್ ಅಥವಾ ನವ-ಫ್ಯಾಸಿಸ್ಟ್ ಪಕ್ಷಗಳು ಇತ್ತೀಚಿನ ವರ್ಷಗಳಲ್ಲಿ ವಿಶ್ವಾದ್ಯಂತ ಹೆಚ್ಚುತ್ತಿರುವ ಸಂಗತಿಯು 1930ರ ದಶಕದಲ್ಲಿ ಕಂಡುಬಂದ ವಿದ್ಯಮಾನವನ್ನು ನೆನಪಿಸುತ್ತದೆ. ಫ್ಯಾಸಿಸ್ಟ್ ಸರ್ಕಾರಗಳು ಸರ್ವೇಸಾಮಾನ್ಯವಾಗಿ ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗಳನ್ನು, ಅದರಲ್ಲೂ ವಿಶೇಷವಾಗಿ ಅದರ ಹೊಸ, ಕಡಿಮೆ "ಉದಾರವಾದಿ" ಮತ್ತು ಹೆಚ್ಚು ಪ್ರತಿಗಾಮಿ ವಿಭಾಗದ ಹಿತಾಸಕ್ತಿಗಳನ್ನು ಕಾಪಾಡುತ್ತವೆ. ಆದ್ದರಿಂದಲೇ, ಕಮ್ಯುನಿಸ್ಟ್ ಅಂತಾರಾಷ್ಟ್ರೀಯದ ಏಳನೇ ಕಾಂಗ್ರೆಸ್‌ನಲ್ಲಿ ಅದರ ಅಧ್ಯಕ್ಷ ಜಾರ್ಜಿ ದಿಮಿತ್ರೋವ್, ಫ್ಯಾಸಿಸ್ಟ್ ಪ್ರಭುತ್ವವನ್ನು "ಹಣಕಾಸು ಬಂಡವಾಳದ ಅತ್ಯಂತ ಪ್ರತಿಗಾಮಿ ವಿಭಾಗದ ನಗ್ನ ಭಯೋತ್ಪಾದಕ ಸರ್ವಾಧಿಕಾರ" ಎಂದು ಬಣ್ಣಿಸಿದ್ದರು.

ಆ ಕಾಲದ ಫ್ಯಾಸಿಸ್ಟ್ ಚಳುವಳಿಗಳು ದೊಡ್ಡ ದೊಡ್ಡ ಉದ್ಯಮಗಳ ವಿರುದ್ಧದ ಚಳುವಳಿಗಳಾಗಿಯೇ ಆರಂಭವಾಗಿದ್ದವು. ದೊಡ್ಡ ವ್ಯವಹಾರೋದ್ಯಮ-ವಿರೋಧಿ ನಿಲುವಿನ ಬಣ್ಣದ ಮಾತುಗಳ ಮೂಲಕ ಸಾಕಷ್ಟು ಮಂದಿ ಬೆಂಬಲಿಗರನ್ನು ಸೆಳೆದು ಬುಟ್ಟಿಗೆ ಹಾಕಿಕೊಂಡ ನಂತರ, ಈ "ಬಲ-ತೀವ್ರಗಾಮಿ"ಗಳು (ಫ್ಯಾಸಿಸ್ಟರು) ಅಧಿಕಾರ ಹಿಡಿಯುವ ಸಲುವಾಗಿ ತಾವು ವಿರೋಧಿಸಿದ ಅದೇ ದೊಡ್ಡ ದೊಡ್ಡ ವ್ಯವಹಾರೋದ್ಯಮಗಳೊಂದಿಗೆ ಮೈತ್ರಿ ಮಾಡಿಕೊಂಡು ತಮ್ಮ ಕಟ್ಟಾ ಬೆಂಬಲಿಗರಿಗೇ ದ್ರೋಹ ಬಗೆದವು. ಹಿಟ್ಲರ್ ಮಾಡಿದ್ದು ಇದನ್ನೇ-ಅತ್ಯಂತ ರಕ್ತಸಿಕ್ತ ರೀತಿಯಲ್ಲಿ. ಹಿಟ್ಲರ್‌ನ ಆದೇಶದ ಮೇರೆಗೆ ಅವನ ನಿಕಟ ಸಹವರ್ತಿಯೂ ಮತ್ತು ವಿರೋಧಿಗಳನ್ನು ಸದೆಬಡಿಯುತ್ತಿದ್ದ ನಾಜಿ ಪಡೆಯ(ಬ್ರೌನ್ ಷರ್ಟ್) ಮುಖ್ಯಸ್ಥನೂ ಆಗಿದ್ದ ಅರ್ನ್ಸ್ಟ್ ರೋಹ್ಮ್ ಮತ್ತು ಇತರೆ ಕೆಲವು ನಾಜಿಗಳನ್ನು ಕೊಲೆ ಮಾಡಲಾಯಿತು. ಹೀಗೆ ತಮ್ಮ ಸಹಚರರನ್ನೇ ಅತ್ಯಂತ ಅಮಾನುಷ ರೀತಿಯಲ್ಲಿ ಕೊಲೆಗೈದ ಈ ರಕ್ತ ರಾತ್ರಿಯನ್ನು "ಉದ್ದನೆಯ ಚಾಕು-ಚೂರಿಗಳ ರಾತ್ರಿ" ಎಂದೂ ಕರೆಯಲಾಗಿದೆ.

ದೊಡ್ಡ ವ್ಯವಹಾರೋದ್ಯಮಗಳನ್ನು ವಿರೋಧಿಸುವ ವಿಷಯದಲ್ಲಿ, ಸಮಕಾಲೀನ ನವ-ಫ್ಯಾಸಿಸ್ಟ್ ಮತ್ತು ಉಗ್ರ ಬಲಪಂಥೀಯ ಚಳುವಳಿಗಳು ಈ ಹಿಂದಿನ ಇಂತಹ ಚಳುವಳಿಗಳಿಗಿಂತ ಭಿನ್ನವಾಗಿವೆ. ಈ ಚಳವಳಿಗಳು ದೊಡ್ಡ ವ್ಯವಹಾರೋದ್ಯಮಗಳ ವಿರೋಧವನ್ನು ಆರಂಭದಿಂದಲೇ ಕೈಬಿಟ್ಟಿರುತ್ತವೆ. ದೊಡ್ಡ ದೊಡ್ಡ ಉದ್ಯಮಗಳ ವಿರುದ್ಧ ಅವರು ಅಬ್ಬರಿಸಿ ಬೊಬ್ಬಿರಿಯುವುದಿಲ್ಲ. ತಮ್ಮನ್ನು ನಿರುದ್ಯೋಗಿಗಳನ್ನಾಗಿ ಮಾಡಿದ ವ್ಯವಸ್ಥೆಯ ವಿರುದ್ಧ ಜನರಿಗಿರುವ ಸಹಜ ಕೋಪವನ್ನು ಬಳಸಿಕೊಳ್ಳುವ ಪ್ರಯತ್ನವನ್ನೂ ಸಹ ಅವರು ಮಾಡುವುದಿಲ್ಲ. ಇಂದಿನ ಪರಿಸ್ಥಿತಿಯಲ್ಲಾದರೆ, ಅಂತಹ ವಿರೋಧವು ಅಗತ್ಯವಾಗಿ ನವ-ಉದಾರ ಆರ್ಥಿಕ ನೀತಿಗಳ ಮೇಲೆ ದಾಳಿ ಮಾಡುವ ರೂಪವನ್ನು ಪಡೆಯಲೇಬೇಕಾಗುತ್ತದೆ. ಏಕೆಂದರೆ. ಈ ನೀತಿಗಳು, ದೇಶದ ದೊಡ್ಡ ದೊಡ್ಡ ಉದ್ಯಮಗಳು ಯಾವ ಜಾಗತೀಕರಣಗೊಂಡ ಬಂಡವಾಳದೊಂದಿಗೆ ಸಮಗ್ರೀಕರಿಸಿಕೊಂಡಿವೆಯೋ ಅದರ ಜೀವಾಳವೇ ಆಗಿವೆ. ಆದಾಗ್ಯೂ, ನವಉದಾರವಾದಿ ಆರ್ಥಿಕ ನೀತಿಗಳ ಬಗ್ಗೆ ವಿಶ್ವಾದ್ಯಂತ ಸಮಕಾಲೀನ ನವ-ಫ್ಯಾಸಿಸ್ಟ್ ಮತ್ತು ಉಗ್ರ ಬಲಪಂಥೀಯ ಚಳುವಳಿಗಳು ಜಾಣ ಮೌನ ವಹಿಸುತ್ತಿರುವುದು ಎದ್ದು ಕಾಣುತ್ತದೆ. ಈ ಜಾಣ ಮೌನದ ಮೂಲಕ ಅವು ನವ-ಉದಾರ ಆರ್ಥಿಕ ನೀತಿಗಳನ್ನು ಅನುಮೋದಿಸುತ್ತವೆ.

ಕಾರ್ಪೊರೇಟ್-ಹಿಂದುತ್ವ ಮೈತ್ರಿ

ಈ ಮೌನ ಸಮ್ಮತಿಗೆ ವಿರುದ್ಧವಾಗಿ, ಕೆಲವು ಸಂದರ್ಭಗಳಲ್ಲಿ, ಈ ನೀತಿಗಳಿಗೆ ಮತ್ತು ಅವುಗಳ ಹಿಂದೆ ನಿಂತಿರುವ ದೊಡ್ಡ ಬಂಡವಾಳಗಾರರಿಗೆ ಬೆಂಬಲ ತೋರಿಸುವುದು ಮೊದಲಿನಿಂದಲೂ ಇದ್ದದ್ದೇ. ಈ ಮಾತಿಗೆ ಒಂದು ಪ್ರಮುಖ ಉದಾಹರಣೆಯೆಂದರೆ, ದೊಡ್ಡ ಉದ್ಯಮಗಳು ಮತ್ತು ಜಾಗತೀಕರಣಗೊಂಡ ಬಂಡವಾಳದೊಂದಿಗೆ ಬಾಂಧವ್ಯ ಹೊಂದಿರುವ ನರೇಂದ್ರ ಮೋದಿಯವರ ನಾಯಕತ್ವದ ಬಿಜೆಪಿ. ವಾಸ್ತವವಾಗಿ, ಮೋದಿ ಅವರು ಗುಜರಾತ್‌ನ ಮುಖ್ಯ ಮಂತ್ರಿಯಾಗಿದ್ದಾಗ ದೊಡ್ಡ ಉದ್ಯಮಗಳೊಂದಿಗಿನ ಅವರ ಸಾಮೀಪ್ಯದಿಂದಾಗಿ, ಕೆಲವು ವರ್ಷಗಳ ಹಿಂದೆ ಗುಜರಾತ್ ಹೂಡಿಕೆದಾರರ ಶೃಂಗಸಭೆಯ ನಂತರ ಅವರನ್ನು ಬಹಿರಂಗವಾಗಿ "ದತ್ತು" ತೆಗೆದುಕೊಳ್ಳಲು ಮತ್ತು ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿ ಅವರನ್ನು ಯಶಸ್ವಿಯಾಗಿ ಬಿಂಬಿಸಲು ಭಾರತದ ದೊಡ್ಡ ಉದ್ಯಮಗಳು ಮುಂದಾದವು. ತಮ್ಮನ್ನು ಅಧಿಕಾರದ ಗದ್ದುಗೆಗೆ ಏರಿಸಲು ನೆರವಾದ ಈ ಕಾರ್ಪೊರೇಟ್-ಹಿಂದುತ್ವ ಮೈತ್ರಿಯನ್ನು ಮೋದಿಯವರು ಪರಿಣಾಮಕಾರಿಯಾಗಿ ಬೆಸೆದರು. ಈ ಮೈತ್ರಿಯನ್ನು ರೂಪಿಸಿದ ಒಂದು ನಿರ್ಣಾಯಕ ಆಯಾಮವೆಂದರೆ, ಈ ಹಿಂದೆ ಒಂದು ರೀತಿಯ ಉಗ್ರ-ಬಲಪಂಥೀಯ ಕಾರ್ಯಕ್ರಮವನ್ನು ಪ್ರತಿಪಾದಿಸುತ್ತಿದ್ದ ಸ್ವದೇಶಿ ಜಾಗರಣ ಮಂಚ್ ನಂತಹ ಹಿಂದುತ್ವದ ಸಂಘಟನೆಗಳ ಕಡೆಗಣನೆ.

ಅಧಿಕಾರಕ್ಕೆ ಬಂದ ಕೂಡಲೇ, ತಮ್ಮ ಕಾರ್ಪೊರೇಟ್ ಬೆಂಬಲಿಗರಿಗೆ ತಿಂದು ತೇಗುವಷ್ಟು ಪ್ರತಿಫಲಗಳನ್ನು ಮೋದಿ ನೀಡಿದ್ದಾರೆ. ಕೇವಲ ನಿರ್ದಿಷ್ಟ ಗುತ್ತಿಗೆಗಳು ಮತ್ತು ಗುಪ್ತ ಒಪ್ಪಂದಗಳು ಮಾತ್ರವಲ್ಲ (ಇವುಗಳಲ್ಲಿ ರಫೇಲ್ ಒಪ್ಪಂದವನ್ನು ಒಂದು ಪ್ರಮುಖ ಉದಾಹರಣೆ ಎಂದು ಪರಿಗಣಿಸಲಾಗಿದೆ), ಅಥವಾ ಶಾಸನಗಳ ಮೂಲಕ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುವಂಥಹ ಮತ್ತು ರೈತರ ಸ್ವಾತಂತ್ರ್ಯವನ್ನು ಒಳಗೊಳಗೇ ಕೊರೆದು ಹಾಕುವಂಥಹ ಕ್ರಮಗಳನ್ನು ಕೈಗೊಂಡದ್ದು ಮಾತ್ರವಲ್ಲ, ಸಾರ್ವಜನಿಕ ವಲಯದ ಅನೇಕ ಬೃಹತ್ ಉದ್ಯಮಗಳನ್ನು ಖಾಸಗೀಕರಿಸುವ ಮೂಲಕವೂ ತಮ್ಮ ಕಾರ್ಪೊರೇಟ್ ಮಿತ್ರರಿಗೆ ರಸಗವಳವನ್ನೇ ಬಡಿಸಿದ್ದಾರೆ. ಇವೆಲ್ಲವನ್ನೂ ದೊಡ್ಡ ಬಂಡವಾಳಗಾರರೇ ದೇಶದ "ಸಂಪತ್ತಿನ ಸೃಷ್ಟಿಕರ್ತರು" ಎಂಬ ನೆಲೆಯಲ್ಲಿ ಅವರು ಸಮರ್ಥಿಸಿಕೊಳ್ಳುತ್ತಾರೆ! ದೇಶದ ಸಂಪತ್ತಿನ ಹಸ್ತಾಂತರವನ್ನೂ ಸಹ ಅವರು ಈ ರೀತಿಯಲ್ಲಿ ಸಮರ್ಥಿಸುವುದು ಒಂದು ವಿಡಂಬನೆಯೇ ಸರಿ.



ಯುರೋಪಿನಲ್ಲಿ

ಎಲ್ಲರಿಗಿಂತಲೂ ತುಸು ಭಿನ್ನವಾಗಿ ಕಾಣುವ ಮೋದಿ ಅವರನ್ನು ಒತ್ತಟ್ಟಿಗಿಡೋಣ. ಐರೋಪ್ಯ ಒಕ್ಕೂಟದ ಸನ್ನಿವೇಶದಲ್ಲಿ ನವ-ಉದಾರ ನೀತಿಗಳನ್ನು ವಿರೋಧಿಸಿದಂತೆ ತೋರಿದ ಮತ್ತು ಈ ನೀತಿಗಳ ಅಭಿವ್ಯಕ್ತಿಯಾದ 'ಯುರೋ' ಕರೆನ್ಸಿಯನ್ನು (ಐರೋಪ್ಯ ಒಕ್ಕೂಟದ ಎಲ್ಲರ ಏಕ ಕರೆನ್ಸಿ) ಮೂಲತಃ ವಿರೋಧಿಸಿದ ಇಟಲಿಯ ಮ್ಯಾಟಿಯೊ ಸಾಲ್ವಿನಿಯ ನಾರ್ದರ್ನ್ ಲೀಗ್‌ನಂತಹ ವಿಶ್ವದ ಇತರ ಉಗ್ರ ಬಲಪಂಥೀಯ ಪಕ್ಷಗಳೂ ಸಹ ಈಗ ಶಾಂತವಾಗಿವೆ ಮತ್ತು ಒಕ್ಕೂಟದ ಸಾಂಪ್ರದಾಯಿಕ ಆರ್ಥಿಕ ನೀತಿಗಳನ್ನು ಮತ್ತು ಕಾರ್ಯಕ್ರಮಗಳ ವ್ಯಾಪ್ತಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿವೆ.

ಯುರೋಪಿನ ಹದಿನಾರು ಉಗ್ರ ಬಲಪಂಥೀಯ ಪಕ್ಷಗಳು ನವ-ಉದಾರವಾದವನ್ನು ಅನುಮೋದಿಸಿರುವುದಾಗಿ ಇತ್ತೀಚೆಗೆ ಒಂದು ಜಂಟಿ ಘೋಷಣೆಯ ಮೂಲಕ ಹೇಳಿವೆ. ಹಂಗೇರಿಯ ವಿಕ್ಟರ್ ಒರ್ಬಾನ್, ಫ್ರಾನ್ಸ್‌ನ ಮರಿನ್ ಲೆ ಪೆನ್ ಅವರ ನ್ಯಾಷನಲ್ ಫ್ರಂಟ್, ಆಸ್ಟ್ರಿಯಾದ ಫ್ರೀಡಂ ಪಾರ್ಟಿ, ಪೋಲೆಂಡ್‌ನ ಲಾ ಅಂಡ್ ಜಸ್ಟೀಸ್ ಪಾರ್ಟಿ, ಸ್ಪೇನ್‌ನ ವೋಕ್ಸ್ ಮತ್ತು ಇಟಲಿಯ ನಾರ್ದರ್ನ್ ಲೀಗ್ ಹಾಗೂ ಬ್ರದರ್ಸ್ ಆಫ್ ಇಟಲಿ, ಇವೇ ಆ ಹದಿನಾರು ಪಕ್ಷಗಳು. ಈ ಘೋಷಣೆಯಲ್ಲಿ ಆರ್ಥಿಕ ನೀತಿ-ನಿಲುವುಗಳಿಗೆ ಸಂಬಂಧಿಸಿದ ಒಂದು ಒಂದೇ ಒಂದು ಶಬ್ದವೂ ಇಲ್ಲ (ಥಾಮಸ್ ಫಾಜಿ, ದಿ ಡೆಲ್ಫಿ ಇನಿಶಿಯೇಟಿವ್). ಆದರೆ, ಆ ಖಂಡದ ಜೂಡಿಯೋ-ಕ್ರಿಶ್ಚಿಯನ್ ಸಂಪ್ರದಾಯದಂತೆ ಯುರೋಪಿನೊಳಗೆ ರಾಷ್ಟ್ರೀಯ ಸಂಸ್ಕೃತಿಗಳನ್ನು ಸಂರಕ್ಷಿಸುವ ಅಗತ್ಯವನ್ನು ಒತ್ತಿ ಹೇಳಲಾಗಿದೆ (ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ಆಕ್ರಮಣ ಮಾಡುವಾಗ ಬಲಪಂಥೀಯರು ಈ ಸಂಪ್ರದಾಯದ ಮೊರೆ ಹೋಗುತ್ತಾರೆ). ಆದರೆ, ಒಕ್ಕೂಟದ ಎಲ್ಲರ ಏಕ ಕರೆನ್ಸಿಯಿಂದ(ಕಾಮನ್ ಕರೆನ್ಸಿ) ಹಿಂದೆಸರಿಯುವ ಅಥವಾ ಕಾಮನ್ ಕರೆನ್ಸಿಯೊಂದಿಗೆ ಸಂಬಂಧ ಹೊಂದಿರುವ ಸದಸ್ಯ-ದೇಶಗಳ ಮೇಲೆ ಕಠಿಣ ಮಿತವ್ಯಯ ಕ್ರಮಗಳ ಹೇರಿಕೆಯನ್ನು ನಿರಾಕರಿಸುವ ಬಗ್ಗೆ ಏನನ್ನೂ ಹೇಳಲಿಲ್ಲ.

ಈ ಮಹಾ ಸಾಂಕ್ರಾಮಿಕದ ಸಮಯದಲ್ಲಿ ಯೂರೋಪಿಯನ್ ಒಕ್ಕೂಟವು ತನ್ನ 'ಸ್ಥಿರತೆ ಮತ್ತು ಬೆಳವಣಿಗೆ ಒಪ್ಪಂದ'ದ (ಎಸ್‌ಜಿಪಿ) ಬಿಗಿ ಹಣಕಾಸು ಶಿಸ್ತನ್ನು ಸ್ಥಗಿತಗೊಳಿಸಿದೆ ಮತ್ತು ವಿತ್ತೀಯ ಕೊರತೆಗಳ ವಿಷಯದಲ್ಲಿ ಸದಸ್ಯ ರಾಷ್ಟ್ರಗಳಿಗೆ ಸ್ವಲ್ಪ ವಿನಾಯ್ತಿ ಕೊಟ್ಟಿದೆ, ನಿಜ. ಆದರೆ, ಈ ವಿನಾಯ್ತಿಯು ಕೇವಲ ತಾತ್ಕಾಲಿಕ ಮತ್ತು ಒಪ್ಪಂದದ ನಿಯಮಗಳು 2023 ರಲ್ಲಿ ಮತ್ತೆ ಜಾರಿಯಾಗಲಿವೆ ಎಂಬುದನ್ನು ಯುರೋಪಿಯನ್ ಆಯೋಗವು ಈಗಾಗಲೇ ಹೇಳಿದೆ. ಆದರೆ, ಈ ಬಲಪಂಥೀಯ ಪಕ್ಷಗಳ ಜಂಟಿ ಘೋಷಣೆಯು ಎಸ್‌ಜಿಪಿಯ ಮರು ಹೇರಿಕೆಯ ದಿನಾಂಕವನ್ನು ಮುಂದೂಡುವಂತೆಯೂ ಕೇಳಲಿಲ್ಲ.

ಬಲಪಂಥೀಯ ನಂಟು

ಈ ದೇಶಗಳ ಉಗ್ರ ಬಲಪಂಥೀಯ ಪಕ್ಷಗಳು ಅಧಿಕಾರಕ್ಕೆ ಬರುವ ಮೊದಲೇ, ದೊಡ್ಡ ಉದ್ಯಮಗಳಿಗೆ ಎಷ್ಟೊಂದು ಪಳಗಿವೆ, ಎಷ್ಟೊಂದು ಒಗ್ಗಿಕೊಂಡಿವೆ ಏಕೆ ಎಂಬ ಪ್ರಶ್ನೆಗೆ ಮತ್ತು 1930ರ ದಶಕದ ತಮ್ಮ ಹಿಂದಿನ ಅವತಾರಕ್ಕಿಂತ ಹೇಗೆ ಭಿನ್ನವಾಗಿವೆ ಎಂಬ ಪ್ರಶ್ನೆಗೆ ಉತ್ತರವನ್ನು ಹೀಗೆ ಹೇಳಬಹುದು: 1930ರ ದಶಕದಲ್ಲಿ ಹಣಕಾಸು ಬಂಡವಾಳವು ದೇಶೀಯ ಲಕ್ಷಣ ಹೊಂದಿತ್ತು. ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ಹೊಂದಿದ್ದರೂ ಸಹ ಅದು ಮೂಲಭೂತವಾಗಿ ರಾಷ್ಟ್ರ-ಮೂಲ ನೆಲೆಯ ಮತ್ತು ರಾಷ್ಟ್ರ-ಪ್ರಭುತ್ವ ನೆರವಿನ ಬಲದ ಮೇಲೆ ನಿಂತಿತ್ತು. ಆದರೆ, ಸಮಕಾಲೀನ ಹಣಕಾಸು ಬಂಡವಾಳವು ಜಾಗತಿಕ ವ್ಯಾಪ್ತಿಯನ್ನು ಮತ್ತು ಪ್ರಭಾವವನ್ನೂ ಹೊಂದಿದೆ. ಜಾಗತೀಕರಣಗೊಂಡ ಈ ಹಣಕಾಸು ಬಂಡವಾಳವು ರಾಷ್ಟ್ರ-ಪ್ರಭುತ್ವಗಳಿಗೆ ಎದುರು-ಬದರಾಗಿ ನಿಂತು ಅವುಗಳನ್ನು ಇನ್ನಿಲ್ಲದಂತೆ ಕಾಡುತ್ತದೆ. ಅವುಗಳ ಹಣಕಾಸಿನ ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತದೆ.

ನವ-ಉದಾರವಾದವನ್ನು ಮತ್ತು ಅದನ್ನು ಅನಿವಾರ್ಯವಾಗಿ ಹಿಂಬಾಲಿಸುವ ಮಿತವ್ಯಯ ನೀತಿಗಳನ್ನು ಒಂದು ದೇಶವು ಎದುರಿಸಬೇಕು ಎಂದಾದರೆ, ಅದು ಸಿಲುಕಿಕೊಂಡಿರುವ ಜಾಗತಿಕ ಹಣಕಾಸು ಬಂಡವಾಳದ ಹರಿವಿನ ಸುಳಿಯಿಂದ ಹೊರ ಬರಬೇಕಾಗುತ್ತದೆ. ಯುರೋಪಿಯನ್ ಸನ್ನಿವೇಶದಲ್ಲಿ, ಯುರೋಪಿಯನ್ ಒಕ್ಕೂಟದಿಂದ ಹೊರ ಬರುವುದು ಎಂದಾಗುತ್ತದೆ. ಏಕೆಂದರೆ, ಯೂರೋಪಿಯನ್ ಒಕ್ಕೂಟವು ಜಾಗತೀಕರಣಗೊಂಡ ಬಂಡವಾಳದ ಆಧಿಪತ್ಯವನ್ನು ವ್ಯಕ್ತಪಡಿಸುವ ಸಾಧನವಾಗಿದೆ. ಯಾವುದೇ ನಿರ್ದಿಷ್ಟ ದೇಶದಲ್ಲಿ ಹುಟ್ಟಿಕೊಂಡ ಹಣಕಾಸು ಬಂಡವಾಳವು ಜಾಗತೀಕರಣಗೊಂಡ ಹಣಕಾಸು ಬಂಡವಾಳ ವ್ಯವಸ್ಥೆಯೊಂದಿಗೆ ಸಮಗ್ರೀಕೃತಗೊಂಡಿರುವುದರಿಂದ ಅದರಿಂದ ಹೊರ ಬರುವುದನ್ನು ವಿರೋಧಿಸುತ್ತದೆ. ಹಾಗಾಗಿ, ಜಾಗತೀಕರಣದಿಂದ ಹೊರ ಬರುವ ಕಾರ್ಯವು ಇತರ ವರ್ಗಗಳ ಬೆಂಬಲವನ್ನು, ಎಲ್ಲಕ್ಕಿಂತ ಮಿಗಿಲಾಗಿ, ಕಾರ್ಮಿಕ ವರ್ಗದ ಬೆಂಬಲವನ್ನು ಆಧರಿಸಿರಬೇಕಾಗುತ್ತದೆ. ಉಗ್ರ ಬಲಪಂಥೀಯರಿಗೆ ಕಾರ್ಮಿಕರಿಗೆ ಟೋಪಿಹಾಕುವುದನ್ನು ಬಿಟ್ಟರೆ, ದುಡಿಯುವ ವರ್ಗದ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಾಗಲಿ ಅಥವಾ ಸಕ್ರಿಯವಾಗಿ ಅವರಿಗೆ ಒತ್ತಾಸೆ ಕೊಡುವುದಾಗಲಿ ತಿಳಿದಿಲ್ಲ.

ಬಂಡವಾಳದ ಆಧಿಪತ್ಯಕ್ಕೆ ಮೌನಸಮ್ಮತಿ

ಹಾಗಾಗಿ, ಐರೋಪ್ಯ ಒಕ್ಕೂಟಕ್ಕೆ ಉಗ್ರ ಬಲಪಂಥೀಯರಿಂದ ಬರಬಹುದಾದ ಆಕ್ಷೇಪಣೆಗಳು, ಜಾಗತೀಕರಣಗೊಂಡ ಬಂಡವಾಳದ ಆಧಿಪತ್ಯಕ್ಕೆ ಯಾವ ಬೆದರಿಕೆಯನ್ನೂ ಒಡ್ಡದೆ, ಕೆಲವು "ಸಾಂಸ್ಕೃತಿಕ" ವಿಷಯಗಳಿಗಷ್ಟೇ ಸೀಮಿತವಾಗುತ್ತವೆ. ಅವುಗಳನ್ನು ಹೇಗೂ ನೋಡಿಕೊಳ್ಳಬಹುದು. ಆದ್ದರಿಂದ, ನಿರುದ್ಯೋಗ ಮತ್ತು ಆರ್ಥಿಕ ಸಂಕಷ್ಟಗಳಂತಹ ಜೀವನೋಪಾಯದ

ಪುಟ 14 ನೋಡಿ

ನವ-ಉದಾರವಾದವೂ ಮತ್ತು ಉಗ್ರ ಬಲಪಂಥವೂ

ಪುಟ 11 ರಿಂದ

ಸಮಸ್ಯೆಗಳನ್ನು ಬದಿಗೊತ್ತಿ, ಚರ್ಚೆಗಳನ್ನು "ರಾಷ್ಟ್ರೀಯ ಅಸ್ಮಿತೆ" ಮತ್ತು "ಜುಡಿಯೋ-ಕ್ರಿಶ್ಚಿಯನ್ ಪರಂಪರೆ" ಮುಂತಾದ ವಿಷಯಗಳಿಗೆ ಸೀಮಿತಗೊಳಿಸುವುದರಿಂದ ಜಾಗತೀಕರಣಗೊಂಡ ಹಣಕಾಸು ಬಂಡವಾಳದ ಕಾರ್ಯಾಚರಣೆ ಸಲೀಸಾಗುತ್ತದೆ ಮತ್ತು ಕಾರ್ಮಿಕ ವರ್ಗವನ್ನು ಬಾಧಿಸುವ ಲೌಕಿಕ ಸಮಸ್ಯೆಗಳಿಂದ ಚರ್ಚೆ-ಪ್ರವಚನಗಳನ್ನು ವಿಮುಖಗೊಳಿಸುತ್ತದೆ. ಇದು, ಜಾಗತೀಕರಣಗೊಂಡ ಬಂಡವಾಳದ ಉದ್ದೇಶಗಳಿಗೆ ಆಪ್ಯಾಯಮಾನವಾಗುತ್ತದೆ.

ಅದೇನೇ ಇರಲಿ, ಜಾಗತೀಕರಣಗೊಂಡ ಬಂಡವಾಳದ ಆಧಿಪತ್ಯಕ್ಕೆ ಉಗ್ರ ಬಲಪಂಥೀಯರ ಮೌನಸಮ್ಮತಿಯ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಮೆಟ್ರೋಪಾಲಿಟನ್ ಬಂಡವಾಳಶಾಹಿಯು ಎದುರಿಸುತ್ತಿರುವ ಸ್ಥಗಿತತೆಯ ಬಿಕ್ಕಟ್ಟಿನಿಂದಾಗಿ ಮತ್ತು ಆದ್ದರಿಂದಾಗಿ ವಿಶ್ವ ಬಂಡವಾಳಶಾಹಿ ಆರ್ಥಿಕತೆಯೂ ಒಳಗಾಗಿರುವ ಸ್ಥಗಿತತೆಯ ಬಿಕ್ಕಟ್ಟನ್ನು ನಿವಾರಿಸಲು, ಅಮೆರಿಕದ ಅಧ್ಯಕ್ಷ ಜೋ ಬಿಡೆನ್ ಕೀನ್ಸ್ ಮಾದರಿ ನೀತಿಗಳನ್ನು ಪುನಃ ಅಳವಡಿಸಿಕೊಳ್ಳುವಂತೆ ಶಿಫಾರಸು ಮಾಡಿದ್ದಾರೆ. ವಿತ್ತೀಯ ಕೊರತೆಯ ಹೆಚ್ಚಳ ಮತ್ತು ಬಂಡವಾಳಗಾರರ ಮೇಲಿನ ತೆರಿಗೆಗಳ ಮೂಲಕ ಹಣ ಒದಗಿಸಿಕೊಂಡು, ಸರ್ಕಾರದ ಖರ್ಚು-ವೆಚ್ಚಗಳನ್ನು ಗಣನೀಯವಾಗಿ ಹೆಚ್ಚಿಸುವ ಒಂದಷ್ಟು ಕ್ರಮಗಳನ್ನು ಬಿಡೆನ್ ಘೋಷಿಸಿದ್ದಾರೆ. ಈ ಉದ್ದೇಶಕ್ಕಾಗಿ, ಕಾರ್ಪೊರೇಟ್ ತೆರಿಗೆಗಳ ಕನಿಷ್ಠ ದರದ ಬಗ್ಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮ್ಮತಿ ಮೂಡಿಸುವ ಪ್ರಯತ್ನದಲ್ಲಿ ಅಮೇರಿಕಾ ತೊಡಗಿದೆ ಕೂಡಾ. ಬಿಡೆನ್ ಅವರ ಕಾರ್ಯಸೂಚಿಯು ಯಶಸ್ವಿಯಾಗಲು ಇತರ ಬಂಡವಾಳಶಾಹಿ ಸರ್ಕಾರಗಳೂ ಸಹ, ಇದೇ ಉದ್ದೇಶಕ್ಕಾಗಿ, ಇದೇ ಅಜೆಂಡಾದೊಂದಿಗೆ, ತೆರಿಗೆಗಳ ಕನಿಷ್ಠ ದರದ ಬಗ್ಗೆ ಸಮ್ಮತಿಸುವುದು ಅಗತ್ಯವಾಗುತ್ತದೆ. ಮುಂದುವರಿದ ಎಲ್ಲಾ ದೇಶಗಳ ಸರ್ಕಾರಗಳು ಈ ಕಾರ್ಯಸೂಚಿಯನ್ನು ಒಪ್ಪಿದರೂ ಸಹ, ಮೂರನೇ ಜಗತ್ತಿನ ದೇಶಗಳಿಗೂ ಹಣಕಾಸಿನ ಸ್ವಾಯತ್ತತೆಯನ್ನು ಅನುಮತಿಸದಿದ್ದರೆ, ಅಂದರೆ ಕತ್ತು ಹಿಸುಕುವ "ಮಿತವ್ಯಯ" ಪಟ್ಟುಗಳನ್ನು ಸಡಿಲಗೊಳಿಸದಿದ್ದರೆ, ಆಗ "ಕಠಿಣ-ಮಿತವ್ಯಯಿ" ಮೂರನೇ ಜಗತ್ತು ಮತ್ತು ನ್ಯೂ ಡೀಲ್ ಮಾದರಿಯ ಕಾರ್ಯಸೂಚಿಯನ್ನು ಅಳವಡಿಸಿಕೊಳ್ಳುವ ಮೊದಲನೆಯ ಜಗತ್ತಿನ ದೇಶಗಳ ನಡುವಿನ ದ್ವಿಭಜನೆಯು ಮೂರನೆಯ ಜಗತ್ತಿನ ದೇಶಗಳ ಮತ್ಸರಕ್ಕೆ ಕಾರಣವಾಗುತ್ತದೆ. ಆದರೆ, ಮೊದಲನೆ ಜಗತ್ತೂ ಸಹ ಕೀನ್ಸಿಯನ್ ಪ್ರಸ್ತಾಪವನ್ನು ಒಪ್ಪದಿದ್ದರೆ, ಅಮೇರಿಕಾ ಕೈಗೊಂಡಿರುವ ಕಾರ್ಯವನ್ನು ಅದು ಒಂಟಿಯಾಗಿಯೇ ಸಾಧಿಸಲಾಗದು.

ಕೀನ್ಸಿಯನ್ ನೀತಿಗಳನ್ನು ಒಂಟಿಯಾಗಿ ಅಮೇರಿಕಾ ಅಳವಡಿಸಿಕೊಳ್ಳಲಾಗದು. ಏಕೆಂದರೆ, ಆಮದು ನಿರ್ಬಂಧಗಳ ಮೂಲಕ ತನ್ನನ್ನು ಸಂಪೂರ್ಣವಾಗಿ ರಕ್ಷಿಸಿಕೊಳ್ಳದ ಹೊರತು, ಅಮೇರಿಕಾ ಕೀನ್ಸಿಯನ್ ನೀತಿಗಳನ್ನು ಅಳವಡಿಸಿಕೊಂಡಾಗ, ಅಂತಹ ನೀತಿಯನ್ನು ಅನುಸರಿಸದ ಇತರ ದೇಶಗಳಿಂದ ಆಮದುಗಳು ಹೆಚ್ಚಿದಾಗ ಅಮೇರಿಕಾದ ವ್ಯಾಪಾರ ಕೊರತೆ ಹೆಚ್ಚುತ್ತದೆ. ಅಂದರೆ, ಅಮೇರಿಕಾ ಇತರ ದೇಶಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ ಮತ್ತು ತನ್ನ ವ್ಯಾಪಾರ ಕೊರತೆಯನ್ನು ನೀಗಿಸಿಕೊಳ್ಳಲು ಆ ದೇಶಗಳಿಗೆ ಋಣಿಯಾಗುತ್ತದೆ. ಇಂಥಹ ಪರಿಸ್ಥಿತಿ ದೀರ್ಘಕಾಲ ಮುಂದುವರೆಯುವುದು ಸಾಧ್ಯವಿಲ್ಲ. ಯುರೋಪಿನಲ್ಲಿ "ವ್ಯವಸ್ಥೆ-ಪರ" ರಾಜಕೀಯ ಪಕ್ಷಗಳ ಬೆಂಬಲದೊಂದಿಗೆ ವಿತ್ತೀಯ ಮಿತವ್ಯಯ ನೀತಿಯ ಮರು ಹೇರಿಕೆಯನ್ನು ಉಗ್ರ ಬಲಪಂಥೀಯರು ಮೌನವಾಗಿ ಸಮ್ಮತಿಸುತ್ತಿರುವಾಗ ಮತ್ತು ಯುರೋಪಿಯನ್ ಎಡಪಂಥೀಯರು ಅದನ್ನು ವಿರೋಧಿಸುವಷ್ಟು ಪ್ರಬಲವಾಗಿಲ್ಲದ ಕಾರಣದಿಂದಾಗಿ, ಬಿಡೆನ್ ಶೈಲಿಯ ಕಾರ್ಯಸೂಚಿಯನ್ನು ಯೂರೋಪ್ ಅನುಸರಿಸುವ ಸಂಭಾವ್ಯತೆಗಳಿಲ್ಲ. ಹಾಗಾಗಿ, ವಿಶ್ವ ಬಂಡವಾಳಶಾಹಿಯ ಪ್ರಸ್ತುತ ಸ್ಥಗಿತತೆ ಮತ್ತು ಅದು ಮುಳುಗಿರುವ ಬಿಕ್ಕಟ್ಟು ಮುಂದುವರೆಯುತ್ತದೆ ಎಂದಾಗುತ್ತದೆ.

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮಾವೇಶ





ಬೈಂದೂರು ತಾಲೂಕು ಜಡ್ಕಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಮುದೂರು ಗ್ರಾಮದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಮಾವೇಶವು ಸ್ಥಳೀಯ ಕಾರ್ಮಿಕ ಮುಖಂಡ ಜೊಸೆಪ್ ಸಾಮ್ಯುಯಲ್ ರವರ ಮನೆ ವಠಾರದಲ್ಲಿ 17 ಜುಲೈ 2021 ರಂದು ಯಶಸ್ವಿಯಾಗಿ ಜರಗಿತು. ಬೈಂದೂರು ತಾಲೂಕು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ(ರಿ) ಸಿಐಟಿಯು ಪ್ರಧಾನ ಕಾರ್ಯದರ್ಶಿ ಗಣೇಶ ತೊಂಡೆಮಕ್ಕಿ ಸಮಾವೇಶ ಉದ್ಘಾಟಿಸಿ ಮಾತನಾಡುತ್ತಾ ಕಾರ್ಮಿಕ ಇಲಾಖೆಯಿಂದ ಕೊರೊನ ಪರಿಹಾರದ ಅಹಾರ ಕಿಟ್ ವಿತರಣೆಯಲ್ಲಾಗಿರುವ ತಾರತಮ್ಯ ಹಾಗೂ ಎಲ್ಲಾ ಕಟ್ಟಡ ಕಾರ್ಮಿಕರನ್ನು ಗುರುತಿಸದೇ ಏಕಪಕ್ಷೀಯವಾಗಿ ವಿತರಣೆ ಮಾಡಿದ ಕ್ರಮವನ್ನು ಖಂಡಿಸಿದರು. ಅಹಾರ ಕಿಟ್ ಬದಲಿಗೆ ಎಲ್ಲಾ ನೊಂದಾಯಿತ ಕಟ್ಟಡ ಕಾರ್ಮಿಕರಿಗೆ ಕೊರೊನ ಪರಿಹಾರ ರುಪಾಯಿ ಹತ್ತು ಸಾವಿರ ನಗದು ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಬೇಕು ಎಂದು ಈಗಾಗಲೆ ಹಲವಾರು ಭಾರಿ ಕಾರ್ಮಿಕ ಕಲ್ಯಾಣ ಮಂಡಳಿಗೆ ಒತ್ತಾಯಿಸಿ ಮನವಿ ಸಲ್ಲಿಸಲಾಗಿದ್ದರೂ ಗಣನೆಗೆ ತೆಗೆದುಕೊಳ್ಳದ ಇಲಾಖಾ ಕ್ರಮವನ್ನು ತೀವ್ರವಾಗಿ ಖಂಡಿಸಿದರು. ಕಾರ್ಮಿಕ ಮುಖಂಡ ವೆಂಕಟೇಶ್ ಕೋಣಿ ಮಾತನಾಡಿ, ಗ್ರಾಮೀಣ ಪ್ರದೇಶದ ಬಡ ರೈತ, ಕೃಷಿಕೂಲಿಕಾರರು ಅನಧಿಕೃತವಾಗಿ ಆಕ್ರಮಿಸಿದ ಸರಕಾರಿ ಜಮೀನುಗಳಿಗೆ ಅಕ್ರಮ ಸಕ್ರಮೀಕರಣ ಕೋರಿ ಸಲ್ಲಿಸಿದ, ಅರ್ಜಿಗಳನ್ನು ಡೀಮ್ಡ್ ಅರಣ್ಯ ನೆಪ ಹೇಳಿ ತಿರಸ್ಕರಿಸಿ ರುವುದನ್ನು, ರೈತಪರ ಕಾನೂನು ತಿದ್ದುಪಡಿ ಮಾಡಿ, ಹಕ್ಕು ಪತ್ರ ಕೊಡಿಸಬೇಕು ಎಂದು ಸರಕಾರವನ್ನು ಆಗ್ರಹಿದರು. ಈ ಹಿನ್ನಲೆಯಲ್ಲಿ ರೈತ, ಕೃಷಿ ಕೂಲಿ, ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಬೈಂದೂರು ತಹಶೀಲ್ದಾರ್ ಕಚೇರಿ ಎದುರು ಆಗಸ್ಟ್ 9 ರಂದು ಬೆಳಿಗ್ಗೆ ಜರಗುವ ಬೃಹತ್ ಧರಣಿ ಮುಷ್ಕರದ ಹೋರಾಟ ಯಶಸ್ವಿಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಮುದೂರು ಕಟ್ಟಡ ಕಾರ್ಮಿಕರ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಶಂಕರ್ ಭೋವಿ ಅಧ್ಯಕ್ಷರಾಗಿ, ಇಮ್ಯಾನುವೆಲ್ ಯಾಕೂಬ್ ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಲಾಯಿತು. ಶಂಕರ್ ಭೋವಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆನಂದ ಭೋವಿ ವಂದಿಸಿದರು.

ತೀವ್ರಗೊಂಡ ಕಾರ್ಮಿಕ ಹೋರಾಟಗಳು 2006-2008

ಪುಟ 11 ರಿಂದ

ಮಸೂದೆ (ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಮಸೂದೆ) ಅಂಗೀಕರಿಸಿದ್ದು. ಆರಂಭದಲ್ಲಿ, ಎನ್.ಡಿ.ಎ. ಸರ್ಕಾರವು ವಿಶ್ವಬ್ಯಾಂಕ್-ಐಎಂಎಫ್ ಆದೇಶಗಳನ್ನು ಅನುಸರಿಸಿ ಮಸೂದೆಯನ್ನು ನಿಷ್ಠೆಯಿಂದ ಸಿದ್ಧಪಡಿಸಿತ್ತು ಮತ್ತು ಕಾಂಗ್ರೆಸ್ ನೇತೃತ್ವದಲ್ಲಿ ಯು.ಪಿ.ಎ. ಸರ್ಕಾರ ಅದನ್ನು ಶಾಸನ ಮಾಡಲು ಉತ್ಸಾಹದಿಂದ ಪ್ರಯತ್ನಿಸಿತು.

ಮಸೂದೆಯು ನೌಕರರ ಮಾಸಿಕ ವೇತನದ 10% ನಷ್ಟು ಹಣವನ್ನು ಸರ್ಕಾರದ ಸ್ವಂತ ಕೊಡುಗೆಯೊಂದಿಗೆ ಮತ್ತೊಂದು 10% ಕಡಿತಗೊಳಿಸುವ ಮೂಲಕ ಕೊಡುಗೆ ಪಿಂಚಣಿ ನಿಧಿಯನ್ನು ರೂಪಿಸಿದೆ ಮತ್ತು ನಂತರ ನಿಧಿಯ ಸಂಪೂರ್ಣ ಸಂಗ್ರಹಮೊತ್ತವನ್ನು ಖಾಸಗಿ ವಿದೇಶಿ ಅಥವಾ ದೇಶಿಯ ಕಂಪನಿಗಳಿಗೆ ನಿರ್ವಹಣೆ ಮಾಡಲು ನೀಡುತ್ತದೆ. ಇದರಿಂದ ಬೃಹತ ಪ್ರಮಾಣದ ನಿಧಿ ಕಾರ್ಪೊರೇಟ್ ಸಂಸ್ಥೆಗಳ ಅನುಕೂಲಕ್ಕಾಗಿ ಷೇರು ಮಾರುಕಟ್ಟೆಯನ್ನು ಉತ್ತೇಜಿಸಲು ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲಾಗುತ್ತದೆ. ಹೀಗಾಗಿ ಇಡೀ ಪ್ರಕ್ರಿಯೆಯನ್ನು ನಿರ್ವಹಿಸುವ ಪಿ.ಎಫ್.ಆರ್.ಡಿ.ಎ. ಷೇರು ಮಾರುಕಟ್ಟೆಯಿಂದ ಬರುವ ಲಾಭದ ಒಂದು ಭಾಗವನ್ನು ಮಾತ್ರ ನಿವೃತ್ತ ಉದ್ಯೋಗಿಗಳಿಗೆ ಪಾವತಿಸುವ ನಿರೀಕ್ಷೆಯಿದೆ.

ಇದು ಅಸ್ತಿತ್ವದಲ್ಲಿರುವ ಪಿಂಚಣಿ ವ್ಯವಸ್ಥೆಯಂತೆ ವ್ಯಾಖ್ಯಾನಿಸಲಾದ ಲಾಭದ ಯೋಜನೆಯಲ್ಲ, ಆದರೆ ಉದ್ಯೋಗಿಗಳ ಭವಿಷ್ಯವನ್ನು ಷೇರು ಮಾರುಕಟ್ಟೆಯ ಅನಿಶ್ಚಿತ ಬದಲಾವಣೆಗಳಿಗೆ ಒಡ್ಡುವ ಒಂದು ಕೊಡುಗೆಯಾಗಿದೆ ಮತ್ತು ಅದೇ ಸಮಯದಲ್ಲಿ ನೌಕರರ ವೇತನದಲ್ಲಿ 10% ಕಡಿತವನ್ನು ತರುತ್ತದೆ.

ಈ ಮಸೂದೆಯು ಸಂಸತ್ತಿನಲ್ಲಿ ಎಡ ಸಂಸದರ ತೀವ್ರ ವಿರೋಧದೊಂದಿಗೆ ನೌಕರರು ಮತ್ತು ಶಿಕ್ಷಕರ ಬೃಹತ್ ಹೋರಾಟವನ್ನು ಹುಟ್ಟುಹಾಕಿತು. ಯು.ಪಿ.ಎ. ಸರ್ಕಾರವು ಎಡಪಂಥೀಯರ ಬೆಂಬಲವನ್ನು ಅವಲಂಬಿಸಿದ್ದುದರಿಂದ, ಮಸೂದೆಯನ್ನು ಸಂಸತ್ತಿನಲ್ಲಿ ಅಂಗೀಕರಿಸಲಾಗಲಿಲ್ಲ.

ಕೈಗಾರಿಕಾ ಕ್ಷೇತ್ರದಲ್ಲಿ

ಸರ್ಕಾರದ ನೀತಿಯು ದೇಶದ ಮಧ್ಯಮ ಮತ್ತು ಸಣ್ಣ ಕೈಗಾರಿಕೆಗಳಿಗೆ ಮತ್ತು ಅನೇಕ ದೊಡ್ಡ ಕೈಗಾರಿಕೆಗಳಿಗೆ ಅಪಾರ ಹಾನಿಯನ್ನುಂಟುಮಾಡಿತು. ಖಾಸಗಿ ಮತ್ತು ಸಾರ್ವಜನಿಕ ವಲಯಗಳಲ್ಲಿ ಸ್ಥಳೀಯ ಕೈಗಾರಿಕೆಗಳನ್ನು ಒಂದರ ನಂತರ ಒಂದರಂತೆ ಮುಚ್ಚಲಾಗುತ್ತಿದೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಮುಕ್ತ ಆಹ್ವಾನವನ್ನು ನೀಡಲಾಗಿರುವುದರಿಂದ, ಅವುಗಳಲ್ಲಿ ಕೆಲವು ಭಾರತದಲ್ಲಿ ಕಾರ್ಖಾನೆಗಳನ್ನು ಸ್ಥಾಪಿಸುತ್ತಿವೆ ಮತ್ತು ಸ್ಥಳೀಯ ಕೈಗಾರಿಕೆಗಳೊಂದಿಗೆ ಸ್ಪರ್ಧೆಯಲ್ಲಿ ತೊಡಗುತ್ತಿವೆ, ಸ್ಥಳೀಯ ಕೈಗಾರಿಕೆಗಳು ಬಹುತೇಕ ವಿನಾಶವನ್ನು ಎದುರಿಸುತ್ತಿವೆ. ವಿಶೇಷವಾಗಿ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಂಪೂರ್ಣವಾಗಿ ಹಾಳಾಗುತ್ತಿವೆ. ಷೇರು ಮಾರುಕಟ್ಟೆ ಅನಿಶ್ಚಿತವಾಗಿ ವರ್ತಿಸುತ್ತಿದೆ. ವಿದೇಶದಿಂದ ಸಟ್ಟಾಕೋರ ಹಣದ ಹರಿವಿನಿಂದಾಗಿ ಜಾಗತಿಕ ಬಂಡವಾಳಶಾಹಿಯು ಗಂಭೀರ ಬಿಕ್ಕಟ್ಟಿನ ಪ್ರಭಾವದ ಅಡಿಯಲ್ಲಿ ಇದು ಎತ್ತರದಿಂದ ಹಠಾತ್ ಕುಸಿದು ಕಡಿಮೆ ಹಂತಕ್ಕೆ ಇಳಿದಿದೆ. ಮತ್ತು ಷೇರು ಮಾರುಕಟ್ಟೆಯ ಕೃತಕ ಏರಿಳಿತಗಳು ಒಂದು ಸಾಮಾನ್ಯ ವಿದ್ಯಮಾನವಾಗಿ ಮಾರ್ಪಟ್ಟಿವೆ.

ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ

ಯುಗೊಸ್ಲಾವಿಯದ ಮೇಲೆ ಸಾಮ್ರಾಜ್ಯಶಾಹಿಯ ಅನಾಗರಿಕ ದಾಳಿ ಅಥವಾ ಇರಾಕ್ ಮೇಲೆ ಬಾಂಬ್ ದಾಳಿಯ ವಿರುದ್ಧ, ಎನ್.ಡಿ.ಎ. ಸರ್ಕಾರವು ಒಂದು ಮಾತಿನ ಪ್ರತಿಭಟನೆಯನ್ನೂ ಮಾಡಲಿಲ್ಲ. ಮತ್ತು ಅಂತಿಮವಾಗಿ, ಸದ್ದಾಂ ಹುಸೇನ್ ಅವರನ್ನು ಗಲ್ಲಿಗೇರಿಸುವುದನ್ನು ವಿರೋಧಿಸಿ ಸರ್ಕಾರ ಪ್ರತಿಭಟಿಸಲಿಲ್ಲ. ದುರದೃಷ್ಟವಶಾತ್ ಯು.ಪಿ.ಎ. ಸರ್ಕಾರವೂ ಅದೇ ವಿದೇಶಾಂಗ ನೀತಿಯನ್ನು ನಿಷ್ಠೆಯಿಂದ ಅನುಸರಿಸಿತು. ಪ್ರಧಾನಿ ಮನಮೋಹನ್ ಸಿಂಗ್ ಅವರು ಬುಷ್ ಆಡಳಿತಕ್ಕೆ ಎಷ್ಟು ಸಮರ್ಪಿಸಿ ಕೊಂಡಿದ್ದರೆಂದರೆ, ತಮ್ಮನ್ನು ಬೆಂಬಲಿಸುವ ಎಡಪಂಥೀಯರ ತೀವ್ರ ವಿರೋಧದ ನಡುವೆಯೂ ಇಂಡೋ-ಯುಎಸ್ ಪರಮಾಣು ಒಪ್ಪಂದಕ್ಕೆ ಸಹಿಹಾಕಲು ಸಹ ತೀರ್ಮಾನಿಸಿದರು. ವಾಸ್ತವವಾಗಿ ಅವರ ಎಲ್ಲಾ ಚಟುವಟಿಕೆಗಳು ಸರ್ಕಾರವು ಎಡಪಂಥೀಯರಿಂದ ದೂರವಾಗಲು ಕಾರಣವಾಯಿತು. ಜಾರ್ಜ್ ಬುಷ್ ಅವರ ಜನಪ್ರಿಯತೆಯು ವಿಶ್ವಾದ್ಯಂತ ತೀವ್ರವಾಗಿ ಇಳಿದು ಅವರ ದೇಶದಲ್ಲಿ ಅವರ ನೀತಿಗಳನ್ನು ಯು.ಎಸ್ ಜನರು ತಿರಸ್ಕರಿಸಿದ್ದಾರೆ, ಆದರೂ ವಿಚಿತ್ರವಾಗಿ, ಬುಷ್ ಭಾರತದ ಉತ್ತಮ ಸ್ನೇಹಿತ ಎಂದು ಮನಮೋಹನ್ ಸಿಂಗ್ ಘೋಷಿಸಿದರು.

ಭಾರತದ ಇಂಧನ ಭದ್ರತೆ ಮತ್ತು ಪರಮಾಣು ವ್ಯವಹಾರ: ಎಡ ಪಕ್ಷಗಳಿಂದ ಯುಪಿಎ ಸರ್ಕಾರಕ್ಕೆ ಬೆಂಬಲ ಹಿಂತೆಗೆತ.

ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರವು ಅಂತಿಮವಾಗಿ ಸೆಪ್ಟೆಂಬರ್ 2008 ರಲ್ಲಿ, ಎಡಪಂಥೀಯರ ಮತ್ತು ಪರಮಾಣು ಶಕ್ತಿ ಆಯೋಗದ ಕೆಲವು ಮಾಜಿ ಅಧ್ಯಕ್ಷರು ಸೇರಿದಂತೆ ದೇಶದ ಪರಮಾಣು ವಿಜ್ಞಾನಿಗಳ ಗುಂಪಿನ ತೀವ್ರ ವಿರೋಧದ ಹೊರತಾಗಿಯೂ, ಇಂಡೋ-ಯುಎಸ್ ಪರಮಾಣು ಒಪ್ಪಂದಕ್ಕೆ, ತೀರ್ಮಾನಿಸಿತು.

ಆದರೆ ಪರಮಾಣು ಒಪ್ಪಂದವು ಒಳಗೊಂಡಿರುವ ಶರಣಾಗತಿಯ ಷರತ್ತುಗಳ ಬಗ್ಗೆ ವಾಸ್ತವಿಕ ಅಂಶವು ಅಮೆರಿಕದ ಕಡೆಯಿಂದ ಒಂದೊಂದಾಗಿ ಹೊರಬರುತ್ತಿವೆ. ಅಮೇರಿಕನ್ ಕಾಂಗ್ರೆಸ್ ಅಂಗೀಕರಿಸಿದ ಅಂತಿಮ ಕಾಯಿದೆಯು ಭಾರತಕ್ಕೆ ಇಂಧನ ಪೂರೈಕೆ ಭರವಸೆ ನೀಡಿಲ್ಲ, ಮತ್ತು ರಿಯಾಕ್ಟರ್‌ನ ಜೀವಿತಾವಧಿಯಲ್ಲಿ ಕಾರ್ಯತಂತ್ರದ ಇಂಧನ ಮೀಸಲು ನಿರ್ಮಿಸುವ ಬಗ್ಗೆ ಯಾವುದೇ ಭರವಸೆ ನೀಡಿಲ್ಲ, ಇಂಧನ ಪೂರೈಕೆ ವೈಫಲ್ಯಕ್ಕೆ ಸಂಬಂಧಿಸಿದಂತೆ ಭಾರತವು ಯಾವುದೇ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳಲು, ರಿಯಾಕ್ಟರ್‌ಗಳನ್ನು ಸುರಕ್ಷತೆಗಳಿಂದ ಹೊರತೆಗೆಯಲು ಅನುಮತಿ ನೀಡಿಲ್ಲ ಎಂದು ಸ್ಪಷ್ಟವಾಗಿ ವಿವರಿಸಿದೆ.

123 ಒಪ್ಪಂದವನ್ನು ಅಮೇರಿಕಾ ಕೊನೆಗೊಳಿಸಿದರೆ ಇತರ ದೇಶಗಳು ಭಾರತಕ್ಕೆ ಪರಮಾಣು ಸರಬರಾಜು ಮಾಡುವುದನ್ನು ತಡೆಯಲು ಅಮೇರಿಕಾ ಕೆಲಸ ಮಾಡುತ್ತದೆ.. ಒಟ್ಟಾರೆಯಾಗಿ, 123 ಒಪ್ಪಂದವನ್ನು ಅನುಮೋದಿಸಲು ಯು.ಎಸ್. ಕಾಂಗ್ರೆಸ್ ಅಂಗೀಕರಿಸಿದ್ದ ಹೈಡ್ ಆಕ್ಟ್ ಜೊತೆಗೆ ಹೈಡ್ ಆಕ್ಟ್ ಪ್ರಮುಖ ನಿಬಂಧನೆಗಳನ್ನು ಮತ್ತು ಇನ್ನೂ ಹೆಚ್ಚಿನವನ್ನು ಹೊಂದಿದೆ.

ಈ ಒಪ್ಪಂದವು ಯುಎಸ್ ಕಂಪನಿಗಳಿಗೆ ಪರಮಾಣು ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು. ವಿಶಾಲವಾದ ಭಾರತದ ಮಾರುಕಟ್ಟೆಯನ್ನು ತೆರೆಯುತ್ತದೆ. ಅಮೇರಿಕಾದಲ್ಲಿ ಮುಚ್ಚುತ್ತಿರುವ ಪರಮಾಣು ಉದ್ಯಮವು ಕಳೆದ 30 ವರ್ಷಗಳಿಂದ ಯಾವುದೇ ಹೊಸ ಆದೇಶವನ್ನು ಸ್ವೀಕರಿಸಿಲ್ಲ. ಇದು ಪರಮಾಣು ಅಪಘಾತದ ಎಲ್ಲಾ ಪರಿಣಾಮಗಳಿಂದ ಸರಬರಾಜುದಾರರಿಗೆ ನಷ್ಟವನ್ನುಂಟುಮಾಡಲಿದೆ. ಯು.ಎಸ್. ಪರಮಾಣು ಉದ್ಯಮವು 10,000 ಮೆಗಾವ್ಯಾಟ್ ಪರಮಾಣು ಶಕ್ತಿಘಟಕಗಳಿಂದ ರೂ. 2,80,000 ಕೋಟಿಗಳ ಆದೇಶವನ್ನು ಪಡೆಯುತ್ತದೆ.

ಪರಮಾಣು ಒಪ್ಪಂದದ ಹಿಡಿತವು ಭಾರತದ ಸ್ವತಂತ್ರ ವಿದೇಶಾಂಗ ನೀತಿಯನ್ನು ಮತ್ತಷ್ಟು ಸವೆಸುತ್ತದೆ ಮತ್ತು ಭಾರತದ ಪ್ರಮುಖ ಹಿತಾಸಕ್ತಿಗಳ ಮೇಲೆ ಪರಿಣಾಮ ಬೀರುವ ಹಲವಾರು ವಿಷಯಗಳ ಮೇಲೆ ಪಟ್ಟುಹಿಡಿದ ಯು.ಎಸ್. ಒತ್ತಡಕ್ಕೆ ಬಾಗಿಲು ತೆರೆಯುವ ಹಲವು ಹಂತಗಳಿಗೆ ಪೂರ್ವಭಾವಿಯಾಗಿರುತ್ತದೆ. ಭಾರತ ಖರೀದಿಮಾಡಲು ಬಯಸುವ 126 ಯುದ್ಧ ವಿಮಾನಗಳಿಗೆ ಆದೇಶಗಳನ್ನು ನೀಡಲು ಬುಷ್ ಆಡಳಿತವು ಒತ್ತಡ ಹೇರಿತು ಎಂದು ವರದಿಯಾಗಿದೆ.

ಈ ಪರಿಸ್ಥಿತಿಯಲ್ಲಿಯೇ, 2008 ರ ನವೆಂಬರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಎಡಪಕ್ಷಗಳು ಯು.ಪಿ.ಎ. ಸರ್ಕಾರಕ್ಕೆ ಸಂಸತ್ತಿನಲ್ಲಿ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕಾಯಿತು.





ರಾಷ್ಟ್ರೀಯ ಶಿಕ್ಷಣ ನೀತಿ (NEP) ಯ ಅಪಾಯಗಳು ಹಾಗೂ 4 ವರ್ಷದ ಪದವಿ ಶಿಕ್ಷಣ ಕುರಿತು ಸಿಪಿಐ(ಎಂ) ಬೆಂಗಳೂರು ಉತ್ತರ ವಲಯ ಸಮಿತಿಯು 18 ಜುಲೈ 2021 ರಂದು ಟಿ. ದಾಸರಹಳ್ಳಿಯಲ್ಲಿ ಉಪನ್ಯಾಸ & ಸಂವಾದವನ್ನು ಏರ್ಪಡಿಸಿತ್ತು.
ಶಿಕ್ಷಣ ತಜ್ಞರಾದ ಬಿ. ಶ್ರೀಪಾದ್‌ರವರು ಉಪನ್ಯಾಸ ನೀಡಿದರು. ಸಿಪಿಐ(ಎಂ) ವಲಯ ಕಾರ್ಯದರ್ಶಿ ಹುಳ್ಳಿ ಉಮೇಶ್, ವಿಶಾಲಾಕ್ಷಿ, ಹವಲ್ದಾರ್, ರೇಣುಕ ಸೇರಿದಂತೆ ಪಕ್ಷದ ಸದಸ್ಯರು ಭಾಗವಹಿಸಿದ್ದರು.

ರೈತ ನಾಯಕರ ಅಕಾಲಿಕ ನಿಧನ–ಕೆಪಿಆರ್‌ಎಸ್ ಕಂಬನಿ





ಕರ್ನಾಟಕ ರಾಜ್ಯ ರೈತ ಸಂಘ ಕಾರ್ಯಾಧ್ಯಕ್ಷರಾದ ಶ್ರೀ ರಾಮು ಹಾಗೂ ಹಿರಿಯ ಉಪಾಧ್ಯಕ್ಷರಾದ ಶ್ರೀ ಜಿಟಿ ರಾಮಸ್ವಾಮಿ ರವರ ನಿಧನರಾಗಿರುವುದು ಅಘಾತಕಾರಿ ಹಾಗೂ ರಾಜ್ಯದ ರೈತ ಚಳುವಳಿ ಗೆ ಆದ ನಷ್ಟ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.

ನರಗುಂದ ರೈತ ಬಂಡಾಯ ಹುತಾತ್ಮ ದಿನಾಚರಣೆ ಯಲ್ಲಿ ಭಾಗವಹಿಸಿ ವಾಪಸ್ಸಾಗುತ್ತಿದ್ದ ಸಂದರ್ಭದಲ್ಲಿ ಆದ ರಸ್ತೆ ಅಪಘಾತದಿಂದ ಈ ಇಬ್ಬರೂ ರೈತ ನಾಯಕರು ತೀರಿ ಹೋಗಿರುವುದು ರಾಜ್ಯ ರೈತ ಚಳುವಳಿ ಸಕ್ರೀಯ ಮುಖಂಡರನ್ನು ಕಳೆದುಕೊಂಡಂತಾಗಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ತನ್ನ ಅಪಾರ ದುಃಖ ವ್ಯಕ್ತಪಡಿಸಿದೆ.

ನಿರಂತರವಾಗಿ ರೈತ ಹೋರಾಟದಲ್ಲಿ ಹಾಗೂ ಕೃಷಿ ಕಾಯ್ದೆಗಳ ವಿರುದ್ಧದ ಸಂಯುಕ್ತ ರೈತ ಆಂದೋಲನದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಸಕ್ರೀಯರಾಗಿದ್ದ ಈ ಇಬ್ಬರೂ ಹಿರಿಯ ನಾಯಕರ ಸಾವಿನಿಂದ ಅಘಾತಕ್ಕೆ ಒಳಗಾಗಿರುವ ಕರ್ನಾಟಕ ರಾಜ್ಯ ರೈತ ಸಂಘ ರಾಜ್ಯ ಸಮಿತಿಗೆ ಹಾಗೂ ಅಪಾರ ಬಂಧು ಬಳಗ ಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿಯು ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.

ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರ ಏಂಗೆಲ್ಸ್ ಕೊಡುಗೆ: ತೆಕ್ಕೆಡೆತ್....... ಪುಟ 16 ರಿಂದ

ಎಂದು ಮುಂದುವರೆಯುತ್ತಾ ಪ್ರೊ. ಕೆ.ಕೆ. ತೆಕ್ಕೆಡೆತ್ ಪ್ರತಿಪಾದಿಸಿದರು.

ಎಐಟಿಯುಸಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಡಿ.ಎ.ವಿಜಯಭಾಸ್ಕರ್ ಅವರು ಏಂಗೆಲ್ಸ್ 200 ಮಾಲಿಕೆಯ ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನನ್ನು ಬಿಡುಗಡೆ ಮಾಡಿ, 50 ಪುಸ್ತಕಗಳ ಸೆಟ್ ಕೂಪನ್ ಖರೀದಿಸುವ ಘೋಷಣೆ ಮಾಡಿದ್ದಲ್ಲದೆ, ಅದರ ಬೆಲೆಯಾದ ರೂ.60 ಸಾವಿರದ ಚೆಕ್ ನ್ನು ನವಕರ್ನಾಟಕ ಕ್ಕೆ ನೀಡಿದರು. 'ಬಂಡವಾಳ ಸಂಪುಟ–2' ಮತ್ತು ಬಿಡುಗಡೆಯಾಗುತ್ತಿರುವ ಎರಡು ಪುಸ್ತಕಗಳು ಸೇರಿದಂತೆ ಏಂಗೆಲ್ಸ್ 200 ಮಾಲಿಕೆಯ ಆರು ಪುಸ್ತಕಗಳ ಸೆಟ್ ಬೆಲೆ 1800 ರೂ. ಅದು ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನು ಖರೀದಿ ಮಾಡಿದರೆ ರೂ. 1200 ಕ್ಕೆ ಲಭ್ಯವಿರುತ್ತದೆ ಎಂದು ತಿಳಿಸಿದರು. ಈ ಮಾಲಿಕೆಯ ಮಹತ್ವ ಮತ್ತು ಇಂದಿನ ಸನ್ನಿವೇಶದಲ್ಲಿ ದುಡಿಯುವ ಜನರಲ್ಲಿ ಇದರ ಪ್ರಸಾರದ ಅಗತ್ಯ ಕುರಿತು ಅವರು ಒತ್ತಿ ಹೇಳಿದರು. ಎರಡು ಪ್ರಕಾಶನ ಸಂಸ್ಥೆಗಳಿಗೆ ಅವರು ಶುಭ ಕೋರಿದರು.

ಲೇಖಕರು ಚಿಂತಕರು ವೈದ್ಯರು ಆದ ಡಾ. ಎಚ್.ಜಿ. ಜಯಲಕ್ಷ್ಮಿ ಅವರು ಪುಸ್ತಕ ಪರಿಚಯ ಮಾಡಿದರು. ಪುಸ್ತಕದಲ್ಲಿ ಬರುವ ಏಂಗೆಲ್ಸ್ ಅವರ ಜೀವನ ಚರಿತ್ರೆಯ ಭಾಗದ ಆಸಕ್ತಿಕಾರಕ ಅಂಶಗಳನ್ನು ರೋಚಕವಾಗಿ ವಿವರಿಸಿದರು. ಮಾರ್ಕ್ಸ್‌ವಾದದ ಬೆಳವಣಿಗೆಯ ಸ್ಥೂಲ ಚರಿತ್ರೆಯನ್ನು ಕೊಡುವ ಪುಸ್ತಕದ ಭಾಗವನ್ನು, ಏಂಗೆಲ್ಸ್ ಅವರ ಅಭಿಜಾತ ಕೃತಿಗಳ ಸ್ಥೂಲ ಪರಿಚಯದ ಮೂಲಕ ಸಮರ್ಥವಾಗಿ ನಿರೂಪಿಸಿದರು.

20ನೆಯ ಶತಮಾನದ ಭೌತಶಾಸ್ತ್ರದ ನೊಬೆಲ್ ಪ್ರಶಸ್ತಿ ವಿಜೇತ ಜಪಾನಿ ವಿಜ್ಞಾನಿಯೊಬ್ಬರು ತಮ್ಮ ಸಂಶೋಧನೆಗೆ ಪ್ರೇರಣೆ ಏಂಗೆಲ್ಸ್ ಅವರ 'ಪ್ರಕೃತಿಯ ಗತಿತಾರ್ಕಿಕತೆ' ಪುಸ್ತಕದಿಂದ ದೊರಕಿತು ಎಂದು ಹೇಳುತ್ತಾರೆ. ಏಂಗೆಲ್ಸ್ ಅವರ ಚಿಂತನೆ, ಕೃತಿಗಳು ಎಷ್ಟು ಪ್ರಭಾವಶಾಲಿಯಾಗಿವೆ ಎಂದು ಇದು ತೋರಿಸುತ್ತದೆ. ಬಿಸ್ಮಾರ್ಕ್ ಜರ್ಮನಿಯ ಕಾರ್ಮಿಕ ಪಕ್ಷವನ್ನು ನಿಷೇಧಿಸಿದಾಗ ಧೃತಿಗೆಡದೆ, ಏಂಗೆಲ್ಸ್ ಸಲಹೆಯಂತೆ ಸಹಕಾರಿ ಸಂಘಗಳನ್ನು ರಚಿಸಿ ಕಾರ್ಮಿಕರೊಂದಿಗೆ ಜನರೊಂದಿಗೆ ಸಂಪರ್ಕ ಸತತವಾಗಿ ಇಟ್ಟುಕೊಂಡು ನಿಷೇಧ ತೆಗೆದಾಗ ಹಿಂದಿನದಕ್ಕಿಂತ ಇನ್ನೂ ಹೆಚ್ಚು ಪ್ರಭಾವಶಾಲಿಯಾಗಿ ಹೊಮ್ಮಿತು. ಹೀಗೆ ವಿಶ್ವಕೋಶದಂತಹ ಜ್ಞಾನವಂತ, ಹಲವು ಜ್ಞಾನಕ್ಷೇತ್ರಗಳಲ್ಲಿ ಭಾಷೆಗಳಲ್ಲಿ ಪಾರಂಗತ, ಚಿಂತಕ, ಚಳುವಳಿಗಾರ, ಕ್ರಾಂತಿಕಾರಿ, ಮಹಾನ್ ಮಾನವತಾವಾದಿ, ಮಿಲಿಟರಿ ವ್ಯೂಹಗಾರ – ಹೀಗೆ ಏಂಗೆಲ್ಸ್ ನಂತಹ ಬಹುಮುಖಿ ಪ್ರತಿಭೆಯ ಬದುಕು ಕೃತಿಗಳ ಕುರಿತು ಬರೆಯುವುದು ಒಂದು ವ್ಯಾಸಂಗವೇ. ಅವರ ಕೃತಿಗಳ ಅಧ್ಯಯನವನ್ನು ಮಾಡಿ, ಅದರ ಬೆಳಕಿನಲ್ಲಿ ಇಂದಿನ ಪರಿಸ್ಥಿತಿಯನ್ನು ಬದಲಾಯಿಸುವ ಕುರಿತು ಚಿಂತನೆ ಮತ್ತು ಅದನ್ನು ಕಾರ್ಯಾಚರಣೆಗಳಿಸುವ ಬದ್ಧತೆ ಮಾತ್ರವೇ ಏಂಗೆಲ್ಸ್‌ನ್ನು ನೆನಪಿಸಿಕೊಳ್ಳುವ ವಿಧಾನ ಎಂದು ಪುಸ್ತಕದ ಲೇಖಕರಾದ ಡಾ.ಜಿ.ರಾಮಕೃಷ್ಣ ಏಂಗೆಲ್ಸ್ ಕುರಿತು ಭಾವಪೂರ್ಣವಾಗಿ ಮಾತನಾಡಿದರು.

ಮಾಲಿಕೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿ ಡಾ. ಬಿ.ಆರ್. ಮಂಜುನಾಥ ಅವರು ಕಾರ್ಯಕ್ರಮದ ನಿರೂಪಣೆಯನ್ನೂ ಮಾಡಿದರು. ನವಕರ್ನಾಟಕದ ಕಾರ್ಯಕಾರಿ ನಿರ್ದೇಶಕ ರಮೇಶ ಉಡುಪ ಅವರು ವಂದನಾರ್ಪಣೆ ಸಲ್ಲಿಸಿದರು., ಗುರುರಾಜ ದೇಸಾಯಿ ತಾಂತ್ರಿಕ ನಿರ್ವಹಣೆಯನ್ನು ಮಾಡಿದರು. ಈ ಇಡೀ ಕಾರ್ಯಕ್ರಮವನ್ನು ಜನಶಕ್ತಿ ಮೀಡಿಯಾ ಫೇಸ್ ಬುಕ್ ನಲ್ಲಿ ಲೈವ್ ಪ್ರಸಾರ ಮಾಡಿದ್ದು, ಯೂ ಟ್ಯೂಬ್ ನಲ್ಲೂ ಅದು ಮುಂದೆ ಲಭ್ಯವಿರುತ್ತದೆ.

ಹುಸಿ ಸಾರ್ವತ್ರಿಕ ಕಲ್ಪನೆಗಳು ಅಕಾಡೆಮಿಕ್ಸ್ ನಿಂದ ಟ್ರೋಲರ್ಸ್ ವರೆಗೆ ವ್ಯಾಪಕವಾಗಿವೆ: ಚೆನ್ನಿ....... ಪುಟ 16 ರಿಂದ

ಗತಿತಾರ್ಕಿಕ ಭೌತವಾದವನ್ನು ಮಂಡಿಸುತ್ತಾರೆ ಎಂದು ಮುಂದುವರೆದು ಪ್ರೊ. ರಾಜೇಂದ್ರ ಚೆನ್ನಿ ಅವರು ಹೇಳಿದರು.

ಬೌದ್ಧಿಕ ಪರಂಪರೆ ಮತ್ತು ಸಂಕಥನಗಳಿಗೆ ಕರ್ನಾಟಕದ ಗಡಿಯ ಮಿತಿ ಹಾಕುವುದು ಕಷ್ಟ. ಆದರೆ ಕರ್ನಾಟಕದ ಪ್ರಧಾನ ಪರಂಪರೆಗೆ ವಿರುದ್ಧವಾಗಿ ಬಂದ ಕಲ್ಯಾಣ ಕರ್ನಾಟಕದ ವಚನಕಾರರ, ತತ್ವಪದಕಾರರ ಚಿಂತನೆಗಳನ್ನು ಭಾವನಾವಾದಿ ಮತ್ತು ಭೌತವಾದಿ ಬೈನರಿಗಳಲ್ಲಿ ನೋಡುವುದು ಸರಿಯಾದ ವಿಧಾನವಲ್ಲ. ಅವುಗಳಲ್ಲಿ ಬರುವ ದೇಹ, ಶ್ರಮ–ಕಾಯಕ ಗಳ ಕುರಿತು ವಿಭಿನ್ನ ಧೋರಣೆ, ಅವು ದುಡಿಯುವ ಜನ, ಚರಿತ್ರೆ, ರಾಜಕಾರಣಗಳ ಮೇಲೆ ಬೀರಿದ ಪ್ರಭಾವದ ಗಟ್ಟಿ ಪರಂಪರೆಯನ್ನು ಗಮನಿಸಿ ಅವುಗಳಲ್ಲಿ ಆದಿ–ಭೌತವಾದಿ (ಪ್ರೊಟೊ ಮಟೀರಿಯಲಿಸ್ಟ್) ಎಳೆಗಳನ್ನು ಗುರುತಿಸುವ ಸೂಕ್ಷ್ಮತೆ ಹೊಂದಿರುವ (ನುಆನ್ಸ್ ಡ್) ಅನ್ವೇಷಣೆ ಅಗತ್ಯ. ಇದು ತತ್ವಶಾಸ್ತ್ರಕ್ಕೆ ಶಂಕರಾಚಾರ್ಯರ ಕೊಡುಗೆ ಕುರಿತು ಆಗ ವಿವಾದಾತ್ಮಕವಾಗಿದ್ದ ಇ.ಎಂ.ಎಸ್ ಅಂಗೀಕರಿಸಿದ ನಿರೂಪಣೆಯಂತಹುದು. ಇಂತಹ ಸೂಕ್ಷ್ಮತೆ ಹೊಂದಿರುವ ಅನ್ವೇಷಣೆ ಲಿಂಗತ್ವ, ಇತರ ಅಸ್ಮಿತೆ, ಭಿನ್ನತೆಗಳ ಅಧ್ಯಯನಕ್ಕೂ ಅಗತ್ಯ ಎಂದು ಪ್ರೊ. ಚೆನ್ನಿ ಪ್ರತಿಪಾದಿಸಿದರು.

ವಚನಕಾರರು, ತತ್ವಪದಕಾರರು ಮತ್ತು ಸೂಫಿಗಳ ಚಿಂತನೆಗಳು ಭಾವನಾವಾದಿ ಚೌಕಟ್ಟನ್ನು ಪೂರ್ಣವಾಗಿ ಮೀರುವುದು ಸಾಧ್ಯವಾಗಿಲ್ಲದಿದ್ದರೂ, ಅವು ಪೂರ್ಣವಾಗಿ ಭೌತವಾದಿ ಎಂದು ಹೇಳುವುದು ಸಾಧ್ಯವಿಲ್ಲದಿದ್ದರೂ, ಅವು ಹಲವು ಭೌತವಾದಿ ಎಳೆಗಳನ್ನು ಹೊಂದಿದ್ದವು. ಅಧಿಕಾರದ ಭಾಷೆ, ಚಿಂತನೆಗಳಿಗೆ ದುಡಿಯುವವರ ಭಾಷೆ, ಚಿಂತನೆಗಳ ಬದಲಿ ಒದಗಿಸಿದವು ಎಂದು ಸಂವಾದವನ್ನು ಮುಂದುವರೆಸುತ್ತಾ ಡಾ. ಮೀನಾಕ್ಷಿ ಬಾಳಿ ಅವರು ಹೇಳಿದರು.

ಯುರೋಪಿನಲ್ಲಿ 20ನೆಯ ಶತಮಾನದ ಉತ್ತರಾರ್ಧದಲ್ಲಿ ಬೆಳೆದ ಆಧುನಿಕೋತ್ತರವಾದ ಈಗ ಕರ್ನಾಟಕದ ಬೌದ್ಧಿಕ ಸಂಕಥನಗಳಲ್ಲಿ ಪ್ರಭಾವಶಾಲಿಯಾಗಿರುವ ಭಾವನವಾದಿ ಲೋಕದೃಷ್ಟಿಯ ಹೊಸ ಅವತಾರ. ಇದು ವೈಜ್ಞಾನಿಕ ವಿಧಾನ ಮತ್ತು ತರ್ಕ (ರೇಶನಾಲಿಟಿ) ವನ್ನೂ ಸೇರಿದಂತೆ ಜ್ಞಾನಪರ್ವ ದಲ್ಲಿ ಮೂಡಿ ಬಂದ ಎಲ್ಲ ಪರಿಕಲ್ಪನೆಗಳನ್ನು ನಿರಾಕರಿಸತ್ತದೆ. ಕಾರ್ಮಿಕ ವರ್ಗ, ಸಮಾಜವಾದ ಇತ್ಯಾದಿಗಳನ್ನು 'ಮಹಾನ್ ನಿರೂಪಣೆ' (ಮೆಟಾ ನೆರೇಟಿವ್) ಗಳು ಎಂದು ಗುರುತಿಸಿ ನಿರಾಕರಿಸುವ ಈ ಲೋಕದೃಷ್ಟಿಯು, ಲಿಂಗ, ಜಾತಿ, ಬುಡಕಟ್ಟು, ಜನಾಂಗ ಗಳ 'ಅಸ್ಮಿತೆ' ಗೆ ಒತ್ತು ಕೊಟ್ಟು 'ಅಸ್ಮಿತೆ' ರಾಜಕಾರಣದ ಸಿದ್ಧಾಂತವಾಗಿ ಹೊಮ್ಮಿದೆ ಎಂದು ಸಂವಾದವನ್ನು ಮತ್ತಷ್ಟು ಮುಂದುವರೆಸುತ್ತಾ ಡಾ. ಕೆ. ಪ್ರಕಾಶ್ ಅವರು ಹೇಳಿದರು.

ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮಿ ಅವರು ಏಂಗೆಲ್ಸ್ 200 ಮಾಲಿಕೆಯ ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನನ್ನು ಬಿಡುಗಡೆ ಮಾಡಿ, ಕನಿಷ್ಠ 100 ಪುಸ್ತಕಗಳ ಸೆಟ್ ಖರೀದಿಸುವ ಘೋಷಣೆ ಮಾಡಿದರು. 'ಬಂಡವಾಳ ಸಂಪುಟ–2' ಮತ್ತು ಈಗಾಗಲೇ ಬಿಡುಗಡೆಯಾಗಿರುವ ಎರಡು ಪುಸ್ತಕಗಳು ಸೇರಿದಂತೆ ಏಂಗೆಲ್ಸ್ 200 ಮಾಲಿಕೆಯ ಆರು ಪುಸ್ತಕಗಳ ಸೆಟ್ ಬೆಲೆ 1800 ರೂ. ಅದು ಪ್ರಕಟಣಾ–ಪೂರ್ವ ರಿಯಾಯಿತಿ ಕೂಪನು ಖರೀದಿ ಮಾಡಿದರೆ ರೂ. 1200 ಕ್ಕೆ ಲಭ್ಯವಿರುತ್ತದೆ ಎಂದು ತಿಳಿಸಿದರು. ಈ ಮಾಲಿಕೆಯ ಮಹತ್ವ ಮತ್ತು ದುಡಿಯುವ ಜನರ ಸಂಘಟನೆಯನ್ನು ಅಸಾಧ್ಯವಾಗಿಸುವ ಇಂದಿನ ಸನ್ನಿವೇಶದಲ್ಲಿ ದುಡಿಯುವ ಜನರ ಸಂಘಟನೆಗಳ ಕಾರ್ಯಕರ್ತರಲ್ಲಿ ಇದರ ಪ್ರಸಾರದ ಅಗತ್ಯ ಕುರಿತು ಅವರು ಒತ್ತಿ ಹೇಳಿದರು.


ಲೇಖಕ ಪೀರ್ ಬಾಷ ಅವರು ಪುಸ್ತಕ ಪರಿಚಯ ಮಾಡುತ್ತಾ, ಈ ಪುಸ್ತಕದ ಅನುವಾದದ ವಿಶಿಷ್ಟತೆಗಳು ಮತ್ತು ಇಂತಹ ಮಾರ್ಕ್ಸ್‌ವಾದದ ಅಭಿಜಾತ ಕೃತಿಗಳನ್ನು ಕನ್ನಡದಲ್ಲಿ ಕೊಡುವಾಗ ಪ್ರವೇಶಿಕೆ. ಇಂದಿನ ಸನ್ನಿವೇಶದಲ್ಲಿ ಪ್ರಸ್ತುತತೆ ಕುರಿತು ನಿರೂಪಣೆ ಮತ್ತು ಹಲವು ಟಿಪ್ಪಣಿಗಳ ಪೂರಕ ಮಾಹಿತಿಗಳ ಮಹತ್ವದ ಕುರಿತು ವಿವರವಾಗಿ ತಿಳಿಸಿದರು. ಇವೆಲ್ಲವುಗಳಿಂದ ಇದುವರೆಗೆ ಪ್ರಕಟವಾದ ಮಾರ್ಕ್ಸ್‌ವಾದದ ಅಭಿಜಾತ ಕೃತಿಗಳ ಅನುವಾದಗಳಲ್ಲಿ, ಕನ್ನಡದ ಓದುಗರಿಗೆ ನಿಜವಾಗಿಯೂ ಅದರ ಹೂರಣವನ್ನು ಪರಿಣಾಮಕಾರಿಯಾಗಿ ತಲುಪಿಸಿದ ಅತ್ಯಂತ ಸಫಲ ಅನುವಾದವಿದು ಎಂದರು.

ಅನುವಾದಕ ಪ್ರೊ.ವಿ.ಎನ್.ಲಕ್ಷ್ಮಿನಾರಾಯಣ್ ಅವರು ಮಾತನಾಡಿ ಪುಸ್ತಕದ ಅನುವಾದ ಪ್ರಕ್ರಿಯೆ ಮತ್ತು ಅದನ್ನು ಓದುವ ಬಗೆಯ ಕುರಿತು ತಿಳಿಸಿದರು. ಮಾರ್ಕ್ಸ್‌ವಾದದ ಅಭಿಜಾತ ಕೃತಿಗಳನ್ನು ಕನ್ನಡದಲ್ಲಿ ಕೊಡುವಾಗ ಇರುವ ಸವಾಲುಗಳನ್ನು ವಿವರಿಸಿದರು. ಕೊನೆಯಲ್ಲಿ ಸಂವಾದದಲ್ಲಿ ಮಂಡಿತವಾದ ಅಭಿಪ್ರಾಯಗಳ ಬಗ್ಗೆ ಕೇಳುಗರೊಡನೆ ಸಂವಾದ ನಡೆಯಿತು.

ಕ್ರಿಯಾ ಮಾಧ್ಯಮದ ನಿರ್ದೇಶಕ ವಸಂತರಾಜ ಎನ್.ಕೆ ಮೊದಲಿಗೆ ಮಾಲಿಕೆಯ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಾಂತೇಶ್ ಅವರು ಎಸ್.ಆರ್. ಭಟ್ ಅನುವಾದಿಸಿದ ಇಂಟರ್ ನ್ಯಾಶನಾಲ್' ಹಾಡನ್ನು ಹಾಡಿದರು. ಗುರುರಾಜ ದೇಸಾಯಿ ನಿರೂಪಣೆಯನ್ನು, ನವೀನ್ ಕುಮಾರ್ ತಾಂತ್ರಿಕ ನಿರ್ವಹಣೆಯನ್ನೂ ಮಾಡಿದರು. ಈ ಇಡೀ ಕಾರ್ಯಕ್ರಮವನ್ನು ಜನಶಕ್ತಿ ಮೀಡಿಯಾ ಫೇಸ್ ಬುಕ್ ನಲ್ಲಿ ಲೈವ್ ಪ್ರಸಾರ ಮಾಡಿದ್ದು, ಅಲ್ಲೂ ಯೂ ಟ್ಯೂಬ್ ನಲ್ಲೂ ಅದು ಮುಂದೆ ಲಭ್ಯವಿರುತ್ತದೆ.

JANASHAKTHI KANNADA VARA PATRIKE July 26-August 01, 2021 Price: Rs. 10/- Date of Publication: 23 July 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21







ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರ ಏಂಗೆಲ್ಸ್ ಕೊಡುಗೆ: ತೆಕ್ಕೆಡೆತ್

ವಸಂತರಾಜ ಎನ್.ಕೆ.

ವೈಜ್ಞಾನಿಕ ಸಮಾಜವಾದದ ಪರಿಕಲ್ಪನೆಯಲ್ಲಿ, ಅದನ್ನು ಸಾಕಾರಗೊಳಿಸುವ ಪ್ರಕ್ರಿಯೆಯಲ್ಲಿ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರವನ್ನು ಗುರುತಿಸಿದ್ದು ಏಂಗೆಲ್ಸ್ ಅವರ ವಿಶೇಷ ಕೊಡುಗೆಯಾಗಿತ್ತು. ಏಂಗೆಲ್ಸ್ ಜತೆಗೆ ಜಂಟಿ ಅಧ್ಯಯನ, ಚಿಂತನೆ, ಚಳುವಳಿಯಲ್ಲಿ ಭಾಗವಹಿಸುವಿಕೆ ಆರಂಭವಾಗುವ ಮೊದಲು ಮಾರ್ಕ್ಸ್ ಅವರ ಕೃತಿಗಳಲ್ಲಿ ಕಾರ್ಮಿಕ ವರ್ಗದ ಪಾತ್ರದ ಬಗ್ಗೆ ಹೆಚ್ಚಿನ ಪ್ರಸ್ತಾಪ ಕಂಡು ಬರುವುದಿಲ್ಲ. ಮುಂದೆನೂ ವೈಜ್ಞಾನಿಕ ಸಮಾಜವಾದದ ಪರಿಕಲ್ಪನೆಯನ್ನು ಸಾಕಾರಗೊಳಿಸುವುದರಲ್ಲಿ ಕಾರ್ಮಿಕ ವರ್ಗದ ಪಾತ್ರದ ಕುರಿತು ಚಿಂತನೆಯನ್ನು ವಿಸ್ತರಿಸುತ್ತಾ ಆಳಗೊಳಿಸುತ್ತಾ ಹೋದದ್ದರಲ್ಲಿ ಏಂಗೆಲ್ಸ್ ವಿಶೇಷ ಪಾತ್ರ ವಹಿಸಿದರು. ಹೀಗೆಂದವರು ಹಿರಿಯ ಮಾರ್ಕ್ಸ್ ವಾದಿ ವಿದ್ವಾಂಸ ಮತ್ತು ಭಾರತದ ಅಧ್ಯಾಪಕರ ಚಳುವಳಿಯ ಪ್ರಸಿದ್ಧ ನಾಯಕರಾಗಿದ್ದ ಪ್ರೊ. ಕೆ.ಕೆ. ತೆಕ್ಕೆಡೆತ್.

ಜುಲೈ 20 ರಂದು ನಡೆದ ಆನ್ ಲೈನ್ ಸಭೆಯೊಂದರಲ್ಲಿ ಪ್ರೊ. ತೆಕ್ಕೆಡೆತ್, ಡಾ. ಜಿ. ರಾಮಕೃಷ್ಣ ಅವರು ಬರೆದ "ಫ್ರೆಡೆರಿಕ್ ಏಂಗೆಲ್ಸ್" ಪುಸ್ತಕವನ್ನು ಬಿಡುಗಡೆ ಮಾಡಿ, 'ವೈಜ್ಞಾನಿಕ ಸಮಾಜವಾದಕ್ಕೆ ಏಂಗೆಲ್ಸ್ ಕೊಡುಗೆ' ಕುರಿತ ವಿಶೇಷ ಉಪನ್ಯಾಸ ಮಾಡುತ್ತಿದ್ದರು. "ಫ್ರೆಡೆರಿಕ್ ಏಂಗೆಲ್ಸ್" ಪುಸ್ತಕ ಏಂಗೆಲ್ಸ್ ದ್ವಿಶತಮಾನೋತ್ಸವದ ಸಂದರ್ಭದಲ್ಲಿ ಕ್ರಿಯಾ ಮಾಧ್ಯಮ ಮತ್ತು ನವಕರ್ನಾಟಕ ಸಂಸ್ಥೆಗಳು ಜಂಟಿಯಾಗಿ ಪ್ರಕಟಿಸುತ್ತಿರುವ 'ಏಂಗೆಲ್ಸ್ 200 ಮಾಲಿಕೆಯ' ಮೊದಲನೆಯ ಪುಸ್ತಕ.

1845ರಲ್ಲಿ ಪ್ರಕಟಿತವಾದ ಏಂಗೆಲ್ಸ್ ಮೇರುಕೃತಿ 'ಇಂಗ್ಲೆಂಡಿನ ಕಾರ್ಮಿಕ ವರ್ಗದ ಪರಿಸ್ಥಿತಿ'ಯನ್ನು ಓದಿ ಮೆಚ್ಚಿಕೊಂಡ ಮಾರ್ಕ್ಸ್, ಏಂಗೆಲ್ಸ್ ಜತೆ ಸ್ನೇಹ ಬೆಳೆಸಿ ಮುಂದೆ ಅದು ಜೀವನಪರ್ಯಂತ ಮುಂದುವರೆದ ಐತಿಹಾಸಿಕ ಸಾಹಚರ್ಯವೂ ಆಯಿತು. ತಂದೆಯ ಜವಳಿ ಕಾರ್ಖಾನೆಯಲ್ಲಿ ಕೆಲಸ ಮಾಡಲು ಇಂಗ್ಲೆಂಡಿಗೆ ಬಂದ ಏಂಗೆಲ್ಸ್ ಅಲ್ಲಿನ ಕಾರ್ಮಿಕ ವರ್ಗದ ಸಂಕಷ್ಟ ಬವಣೆಗಳನ್ನು ಮಾತ್ರ ನೋಡಲಿಲ್ಲ. ಕಾರ್ಮಿಕ ವರ್ಗದ ಹೋರಾಟದ ಕೆಚ್ಚನ್ನೂ ಕಂಡರು. ಕೆಲವು 'ಒಳ್ಳೆಯವರು' 'ಸಹೃದಯಿಗಳು' 'ಕರುಣಾಳು ಮಾಲಿಕರು' ಸಮಾಜವಾದವನ್ನು ಸಾಕಾರಗೊಳಿಸುತ್ತಾರೆ (ಅಥವಾ ಯಾರು ಎಂಬುದು ಸ್ಪಷ್ಟವಿಲ್ಲದ) ಕಲ್ಪನಾ ವಿಹಾರಿ ಮತ್ತಿತರ ರೀತಿಯ ಸಮಾಜವಾದಿಗಳ ಸಮಾಜವಾದದ ಪರಿಕಲ್ಪನೆಗೆ ಪ್ರತಿಯಾಗಿ, ಏಂಗೆಲ್ಸ್ ಅವರು ಕಾರ್ಮಿಕ ವರ್ಗದ ಸಮಾಜವಾದವನ್ನು ಪ್ರತಿಪಾದಿಸಿದರು ಎಂದು ಪ್ರೊ. ತೆಕ್ಕೆಡೆತ್ ತಿಳಿಸಿದರು.

ಕಮ್ಯುನಿಸ್ಟ್ ಪ್ರಣಾಳಿಕೆ ಬರೆಯುವಾಗ ಮಾರ್ಕ್ಸ್ ಗೆ ಬರೆದ ಪತ್ರದಲ್ಲಿ ಕಮ್ಯುನಿಸಂ ನ ಮೂರು ಮುಖ್ಯ ತತ್ವಗಳಲ್ಲಿ, ಅದು ಬಂಡವಾಳಶಾಹಿ ಶೋಷಣೆಯಿಂದ ಕಾರ್ಮಿಕ ವರ್ಗದ ವಿಮೋಚನೆ ಆಗಿರುತ್ತದೆ ಎಂಬುದು ಮೊದಲನೆಯದು ಎಂದು ಏಂಗೆಲ್ಸ್ ಗುರುತಿಸಿದರು. ಮುಂದೆ ಪ್ಯಾರೀಸ್ ಕಮ್ಯೂನ್ ಅನುಭವಗಳ ವಿಶ್ಲೇಷಣೆ ಮಾಡುತ್ತಾ ಕಲಿಯಬೇಕಾದ ಮೂರು ಪಾಠಗಳಲ್ಲಿ, ಕಾರ್ಮಿಕ ವರ್ಗವನ್ನು ಕ್ರಾಂತಿಯತ್ತ ಮುನ್ನಡೆಸಲು ಒಂದು ರಾಜಕೀಯವಾಗಿ ಸೈದ್ಧಾಂತಿಕವಾಗಿ ಸನ್ನದ್ಧವಾದ ಮುಂಚೂಣಿ ಗುಂಪು ಬೇಕಾಗುತ್ತದೆ ಎಂಬುದು ಒಂದು ಮುಖ್ಯ ಪಾಠ ಎಂದರು. ಅದೇ ರೀತಿ ಜರ್ಮನ್ ಕಾರ್ಮಿಕ ಪಕ್ಷದ ಕಾರ್ಯಕ್ರಮದ ವಿಮರ್ಶೆಯಾದ 'ಗೋತಾ ಕಾರ್ಯಕ್ರಮದ ವಿಮರ್ಶೆ' ಯಲ್ಲಿ ಬಂಡವಾಳಶಾಹಿ ಯಿಂದ ಸಮಾಜವಾದಿ ವ್ಯವಸ್ಥೆಗೆ ಸ್ಥಿತ್ಯಂತರದಲ್ಲಿ ಕಾರ್ಮಿಕ ವರ್ಗದ ವಿಶಿಷ್ಟ ಪಾತ್ರವನ್ನು ಮತ್ತೆ ಪ್ರತಿಪಾದಿಸಲಾಗುತ್ತದೆ. ಕಾರ್ಮಿಕ ವರ್ಗದ ಅನುಭವಗಳನ್ನು ವಿಶ್ಲೇಷಿಸುತ್ತಾ ಸಮಾಜವಾದದ ಪರಿಕಲ್ಪನೆಯನ್ನು ಹೆಚ್ಚೆಚ್ಚು ಸಮೃದ್ಧ ಮತ್ತು ಪಕ್ವಗೊಳಿಸುತ್ತಾ 'ವೈಜ್ಞಾನಿಕ' ಗೊಳಿಸಿದ್ದರಲ್ಲಿ ಏಂಗೆಲ್ಸ್ ಅವರ ವಿಶೇಷ ಪಾತ್ರವಿತ್ತು

ಪುಟ 15 ನೋಡಿ





ಹುಸಿ ಸಾರ್ವತ್ರಿಕ ಕಲ್ಪನೆಗಳು ಅಕಾಡೆಮಿಕ್ಸ್ ನಿಂದ ಟ್ರೋಲರ್ಸ್ ವರೆಗೆ ವ್ಯಾಪಕವಾಗಿವೆ: ಚೆನ್ನಿ

ವಸಂತರಾಜ ಎನ್.ಕೆ.

ರಾಷ್ಟ್ರವಾದ ಮುಂತಾದ ಹಲವು ಹುಸಿ ಸಾರ್ವತ್ರಿಕ ಕಲ್ಪನೆಗಳು ನಮ್ಮ ಅಕಾಡೆಮಿಕ್ಸ್ ನಿಂದ ಹಿಡಿದು ಸೋಶಿಯಲ್ ಮೀಡಿಯಾದಲ್ಲಿ ಸಕ್ರಿಯವಾಗಿರುವ ಟ್ರೋಲರ್ಸ್ ವರೆಗೆ ವ್ಯಾಪಕವಾಗಿ ಹಬ್ಬಿವೆ. ಇಂತಹ ಹಲವು ಹುಸಿ ಸಾರ್ವತ್ರಿಕ ಕಲ್ಪನೆಗಳು ವಸಾಹತುಶಾಹಿ ಕಾಲದಲ್ಲಿ ಒರಿಯಂಟಲಿಸ್ಟರು ಪ್ರಸ್ತುತ ಪಡಿಸಿದ 'ಭಾರತೀಯ ತತ್ವಶಾಸ್ತ್ರ ಪರಂಪರೆ' ಎಂಬ ಕಲ್ಪಿತ ಆಕೃತಿಯಿಂದ ಬಂದಿದ್ದು. ವಸಾಹತುಶಾಹಿ ನಂತರದ ಸ್ವಾತಂತ್ರ್ಯೋತ್ತರ ಕಾಲದಲ್ಲೂ ಪೂರ್ಣ ನಿರ್ವಸಾಹತೀಕರಣದ ಅಭಾವದಿಂದ ನಮ್ಮ ಬೌದ್ಧಿಕ ಪರಂಪರೆ ಮತ್ತು ಸಂಕಥನಗಳಲ್ಲಿ ಈ ಆಕೃತಿ ಮುಂದುವರೆದಿದೆ ಎಂದು ಪ್ರೊ. ರಾಜೇಂದ್ರ ಚೆನ್ನಿ ಅವರು ಹೇಳಿದರು.


ಪ್ರೊ. ರಾಜೇಂದ್ರ ಚೆನ್ನಿ ಅವರು ಜುಲೈ 21 ರಂದು ನಡೆದ ಆನ್ ಲೈನ್ ಸಭೆಯೊಂದರಲ್ಲಿ 'ಜರ್ಮನ್ ಸಿದ್ಧಾಂತ' ಪುಸ್ತಕವನ್ನು ಬಿಡುಗಡೆ ಮಾಡಿ, 'ಕರ್ನಾಟಕದ ಬೌದ್ಧಿಕ ಪರಂಪರೆಗಳಲ್ಲಿ ಭಾವನಾವಾದ ಪ್ರಭಾವ' ಸಂವಾದದಲ್ಲಿ ದಿಕ್ಸೂಚಿ ಭಾಷಣ ಮಾಡುತ್ತಿದ್ದರು. 'ಜರ್ಮನ್ ಸಿದ್ಧಾಂತ' ಏಂಗೆಲ್ಸ್ ದ್ವಿಶತಮಾನೋತ್ಸವದ ಸಂದರ್ಭದಲ್ಲಿ ಕ್ರಿಯಾ ಮಾಧ್ಯಮ ಮತ್ತು ನವಕರ್ನಾಟಕ ಸಂಸ್ಥೆಗಳು ಜಂಟಿಯಾಗಿ ಪ್ರಕಟಿಸುತ್ತಿರುವ 'ಏಂಗೆಲ್ಸ್ 200 ಮಾಲಿಕೆಯ' ಎರಡನೆಯ ಪುಸ್ತಕ. ಜುಲೈ 20 ರಂದು ಡಾ. ಜಿ. ರಾಮಕೃಷ್ಣ ಅವರು ಬರೆದ ಏಂಗೆಲ್ಸ್ ಅವರ ಬದುಕು ಬರಹದ ಕುರಿತ ಮೊದಲ ಪುಸ್ತಕ ಬಿಡುಗಡೆಯಾಗಿತ್ತು.

ಮಾನವನ ಭೌತಿಕ ಅಸ್ತಿತ್ವದ ಕುರಿತು ಚಿಂತನೆಗಳ ಬದಲು 'ಮಾನವನ ಸಾರಸತ್ವ' (ಎಸೆನ್ಸ್ ಆಫ್ ಮ್ಯಾನ್) ಮುಂತಾದ ಜರ್ಮನ್ ಸಿದ್ಧಾಂತಗಳಲ್ಲಿ ವ್ಯಾಪಕವಾಗಿದ್ದ ಹುಸಿ ಸಾರ್ವತ್ರಿಕ ಕಲ್ಪನೆಗಳನ್ನು ಮೊದಲ ಬಾರಿಗೆ ಏಂಗೆಲ್ಸ್ ತಮ್ಮ ಮೇರುಕೃತಿಯಾದ 'ಜರ್ಮನ್ ಸಿದ್ಧಾಂತ' ದಲ್ಲಿ ಬಯಲಿಗೆಳೆಯುತ್ತಾರೆ. ಇಂತಹ ಸಿದ್ಧಾಂತಗಳನ್ನು ಒಟ್ಟಾಗಿ 'ಭಾವನಾವಾದಿ' (ಐಡಿಯಲಿಸ್ಟ್) ಎಂದು ಗುರುತಿಸಿ, ಅದಕ್ಕೆ ಬದಲಿಯಾಗಿ ಚಾರಿತ್ರಿಕ ಮತ್ತು

ಪುಟ 15 ನೋಡಿ









JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**